ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 9 ಭಾನುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 84 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ವಿದ್ಯುತ್ ದೀಪ ಅಳವಡಿಕೆ





ಮೈಸೂರು, ಜು.8(ಎಸ್‌ಪಿಎನ್)– 'ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ದೀಪ, ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಲು ಭಕ್ತಾದಿಗಳ ಮನವಿ' ಶೀರ್ಷಿಕೆಯಡಿ ಜು.3ರಂದು 'ಮೈಸೂರು ಮಿತ್ರ'ದಲ್ಲಿ ಪ್ರಕಟಗೊಂಡಿದ್ದ ವರದಿಗೆ ಜಿಲ್ಲಾಡಳಿತ ಸ್ಪಂದಿಸಿದೆ.

ಮಿತ್ರನ ಫಲಶ್ರುತಿ

ಮೆಟ್ಟಿಲು ಮಾರ್ಗದಲ್ಲಿ ವಿದ್ಯುತ್ ದೀಪ ಅಳವಡಿಸಿ, ಸಾವಿರಾರು ಭಕ್ತಾದಿಗಳ ಕೂಗಿಗೆ, ಪತ್ರಿಕೆ ವರದಿಗೆ ಸ್ಪಂದಿಸಿದೆ. ಚಾಮುಂಡಿಬೆಟ್ಟದ ಪಾದದಿಂದ ಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ಆಷಾಢ ಶುಕ್ರವಾರದಂದು ಭಕ್ತಾದಿಗಳು, ಮುಂಜಾನೆ ಮತ್ತು ರಾತ್ರಿ ವೇಳೆ ಮೆಟ್ಟಿಲು ಹತ್ತಿ ದೇವಿ ದರ್ಶನಕ್ಕೆ ತೆರಳುತ್ತಿದ್ದರು. ಆದರೆ, ಈ ಮೆಟ್ಟಿಲು ಮಾರ್ಗದಲ್ಲಿ ದೀಪದ ವ್ಯವಸ್ಥೆ ಇಲ್ಲದ ಕಾರಣ ಭಕ್ತರು ಮೊಬೈಲ್ ಟಾರ್ಚ್ ಹಾಕಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಮಹಿಳಾ ಭಕ್ತಾದಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದರು.

ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಎಲ್ಲಾ ಸರ್ಕಾರಗಳು ಅನುದಾನ ನೀಡುತ್ತವೆ. ಆದರೆ, ಅದನ್ನು ಸ್ಥಳೀಯ ಆಡಳಿತ ಸರಿಯಾಗಿ ಬಳಕೆ ಮಾಡಿಕೊಳ್ಳುತ್ತಿಲ್ಲ. ಅನುದಾನದ ಕೊರತೆಯಿಂದ ಇಲ್ಲಿ ನೀರು, ದೀಪ ಇತರೆ ಸೌಕರ್ಯಗಳು ಹಿಂದೂ–ನೋಡುತ್ತಿದೆ ಎಂದು ಅಂತಾರಾಷ್ಟ್ರೀಯ ಕ್ರೀಡಾಪಟು ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದರು.

ಕಳೆದ ಆಷಾಢ ಶುಕ್ರವಾರ ದಂದು ಎಂದಿನಂತೆ ಕತ್ತಲಿನ (ಸಂಜೆ 7 ಗಂಟೆ ಸಮಯದಲ್ಲಿ) ವೇಳೆ ಮೊಬೈಲ್ ಟಾರ್ಚ್ ಹಾಕಿಕೊಂಡು ಕುಟುಂಬ ಸಮೇತ ಹತ್ತುತ್ತಿದ್ದಾಗ ವಿದ್ಯುತ್ ದೀಪ ಇಲ್ಲದ ಕುರಿತು 'ಮಿತ್ರ'ನಿಗೆ ಮಾಹಿತಿ ನೀಡಿದರು. ಈ ಕುರಿತು ವರದಿ ಪ್ರಕಟವಾದ ವಾರದಲ್ಲೇ ಜಿಲ್ಲಾಡಳಿತ ವಿದ್ಯುತ್ ದೀಪ ಅಳವಡಿಸಿದೆ. ಇದರ ಫಲಶೃತಿಯ ಸಂಪೂರ್ಣ ಕೀರ್ತಿ 'ಮೈಸೂರು ಮಿತ್ರ' ವರದಿಗೆ ಸಲ್ಲುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರಲ್ಲದೆ, ಜಿಲ್ಲಾಧಿಕಾರಿಗಳು ಮತ್ತಷ್ಟು ಕಾರ್ಯಪ್ರವೃತ್ತರಾಗಿ ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಅಭಿಯಾನ ಹಮ್ಮಿಕೊಂಡು ಇಲ್ಲಿನ ಪರಿಸರವನ್ನು ಉತ್ತಮವಾಗಿಡಲು ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು.

ಲೋಕ ಅದಾಲತ್‌ನಲ್ಲಿ 5 ಸಾವಿರ ಪ್ರಕರಣ ಇತ್ಯರ್ಥಪಡಿಸುವ ಗುರಿ



ಮೈಸೂರು, ಜು.8(ಎಂಟಿವೈ)– ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಪ್ರಕರಣಗಳನ್ನು ರಾಜಿ ಸಂದಾನದ ಮೂಲಕ ಇತ್ಯರ್ಥ ಪಡಿಸಲು ನಡೆಸಿದ ಲೋಕ ಅದಾಲತ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾದೀಶರಾದ ಜಿ.ಎಸ್.ಸಂಗ್ರೇಶಿ ತಿಳಿಸಿದ್ದಾರೆ.

ಮೈಸೂರಿನ ಜಯನಗರದಲ್ಲಿರುವ ಕೌಟುಂಬಿಕ ನ್ಯಾಯಾಲಯದ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕ ಅದಾಲತ್‌ನಲ್ಲಿ ರಾಜ್ಯದಲ್ಲೇ ಮೈಸೂರು ಜಿಲ್ಲೆ ಮೊದಲ ಸ್ಥಾನ ಗಳಿಸಬೇಕು ಎಂದು ಸುಮಾರು 5 ಸಾವಿರ ಪ್ರಕರಣಗಳನ್ನು ಇತ್ಯರ್ಥ ಪಡಿಸಬೇಕೆಂಬ ಗುರಿ ಹೊಂದಲಾಗಿದೆ. ಸಣ್ಣಪುಟ್ಟ ಕಾರಣಗಳಿಂದ ಪತಿ–ಪತ್ನಿಯರ ನಡುವೆ ವೈಮನಸ್ಸು ಉಂಟಾಗಿ, ವಿಚ್ಚೇಧನಕ್ಕೆ ನ್ಯಾಯಾಲಯದ ಮೆಟ್ಟಿಲು ಏರಿದ್ದ 92 ಪ್ರಕರಣಗಳನ್ನು ಲೋಕ ಅದಾಲತ್‌ಗೆ ತೆಗೆದುಕೊಳ್ಳಲಾಗಿತ್ತು. ಅದರಲ್ಲಿ 87 ಪ್ರಕ ರಣಗಳನ್ನು ಮುಕ್ತಾಯಗೊಳಿಸಲಾಗಿದ್ದು, 33 ಜೋಡಿ ಮತ್ತೆ ಒಂದಾಗಿ ಸಂಸಾರ ಮುಂದುವರೆಸಲು ಒಪ್ಪಿ ಕೊಂಡಿದ್ದಾರೆ ಎಂದರು.

ಲೋಕಾ ಅದಾಲತ್ ವೇಳೆ ಕೌಟುಂಬಿಕ ಪ್ರಕರಣಗಳ ವಿಚಾರಣೆ ವೇಳೆ ಸಣ್ಣ ಸಣ್ಣ ಕಾರಣಕ್ಕಾಗಿ ವೈಮನಸ್ಸು ಉಂಟಾಗಿ ನ್ಯಾಯಾಲಯದ ಮೊರೆ ಹೋಗಿರುವ ಅಂಶ ಕಂಡುಬಂದಿದೆ. ಕುಟುಂಬ ಮುರಿಯುವುದನ್ನು ತಪ್ಪಿಸಲು ನ್ಯಾಯಾಧೀಶರು, ವಕೀಲರು ಪ್ರಯತ್ನ ಮಾಡಿದ್ದಾರೆ. ಗಂಡ–ಹೆಂಡತಿ ಸಂಬಂಧ ಹಳಸಿದರೆ ಒಂದುಗೂಡಿಸುವುದು ಕಷ್ಟ. ಆಸ್ತಿ ಕಳೆದು ಹೋದರೆ, ಮತ್ತೊಂದು ಖರೀಧಿಸಬಹುದು. ಆದರೆ, ಜೀವನ ಹಾಳಾದರೆ ಸರಿ ಮಾಡುವುದು ಕಷ್ಟ. ಒಡೆದ ಮನಸ್ಸನ್ನು ಒಂದುಗೂಡಿಸುವುದು ಕಷ್ಟದ ಕೆಲಸ. ಅದನ್ನು ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ವಕೀಲರು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಅದಾಲತ್‌ನಲ್ಲಿ 23 ವರ್ಷದ ಹಳೆಯ ಸಿವಿಲ್ ಮೊಕದ್ದಮೆಯನ್ನು ರಾಜಿ ಮಾಡಿ ಇತ್ಯರ್ಥ ಮಾಡಲಾಗಿದೆ. ವ್ಯಾಜ್ಯ ಪೂರ್ವ ಪ್ರಕರಣಗಳು, ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಹೆಚ್ಚಿನ ರೀತಿಯಲ್ಲಿ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ. ಇದೇ ವೇಳೆ ಪುನರ್ ಒಂದಾದ ಜೋಡಿಗಳಿಗೆ ಸಿಹಿ ವಿತರಿಸಿ, ಸಹಬಾಳ್ವೆ ನಡೆಸಲು ಪೂರಕವಾದ ಪುಸ್ತಕವನ್ನು ಕೊಡುಗೆ ನೀಡಲಾಯಿತು. ಮತ್ತೆ ಒಂದಾದ ಜೋಡಿಗಳು ನಗುನಗುತ್ತಲೇ ನ್ಯಾಯಾಧೀಶರ ಮುಂದೆ ಉತ್ತಮ ಜೀವನ ಸಾಗಿಸುವ ಭರವಸೆ ಮಾತುಗಳನ್ನಾಡಿದರು. ಈ ವೇಳೆ ನ್ಯಾಯಾಧೀಶರು ಯಾವುದೇ ಕಾರಣಕ್ಕೂ ಜಗಳ ಮಾಡಿಕೊಳ್ಳದಂತೆ ನ್ಯಾಯಾಧೀಶರು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕೌಟುಂಬಿಕ ನ್ಯಾಯಾಲಯದ ನ್ಯಾಯಧೀಶ ರಾದ ವೇಲಾ ಡಿ.ಖೋಡೆ, ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್, ಒಂದನೇ ಪ್ರಧಾನ ಕೌಟುಂಬಿಕ ನ್ಯಾಯಾಲಯದ ನ್ಯಾರುಡಾಲ್ ಪೆರಿಯರ್, 2ನೇ ಕೌಟುಂಬಿಕ ನ್ಯಾಯಾಲಯದ ನ್ಯಾ. ಗಿರೀಶ್ ಭಟ್, 3ನೇ ಕೌಟುಂಬಿಕ ನ್ಯಾಯಾಲಯದ ನ್ಯಾ.ಸುಧಾ ಸೇತುರಾಮ್ ಓಂಕಾರ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶಾರದೆಗೆ ವಿಶೇಷಾಲಂಕಾರ



ಮೈಸೂರಿನ ಶೃಂಗೇರಿ ಅಭಿನವ ಶಂಕರಮಠದಲ್ಲಿ ಮೂರನೇ ಆಷಾಢ ಶುಕ್ರವಾರದ ಪ್ರಯುಕ್ತ ಶ್ರೀ ವೈಷ್ಣವಿ ಅಲಂಕಾರವನ್ನು ಏರ್ಪಡಿಸಲಾಗಿತ್ತು. ಸಾವಿರಾರು ಭಕ್ತಾದಿಗಳು ಶಾರದೆಯ ದರ್ಶನ ಪಡೆದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಉತ್ತಮ ಬಜೆಟ್

ಮೈಸೂರಲ್ಲಿ ಸಿಹಿ ವಿತರಿಸಿ ಸಂಭ್ರಮಾಚರಣೆ

ಮೈಸೂರು,ಜು.8–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 14ನೇ ಬಜೆಟ್‌ನಲ್ಲಿ ಮೈಸೂರಿಗೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಹಾಗೂ ಚಿತ್ರನಗರಿ ಸೇರಿದಂತೆ ರಾಜ್ಯಾದ್ಯಂತ ಅನ್ವಯವಾಗುವ ಉತ್ತಮ ಬಜೆಟ್ ನೀಡಿರುವುದನ್ನು ಸ್ವಾಗತಿಸಿ, ಮೈಸೂರಿನ ನಂಜುಮಳಿಗೆ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ, ಸಿದ್ದರಾಮಯ್ಯನವರ ಅಭಿಮಾನಿಗಳು ಸಂಭ್ರಮಿಸಿದರು.

ಈ ವೇಳೆ ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಮಾತನಾಡಿ, ಈ ಬಜೆಟ್‌ನಲ್ಲಿ ವಿಶೇಷವಾಗಿ ಮೈಸೂರು ನಗರಕ್ಕೆ ಹೆಚ್ಚು ಒತ್ತು ನೀಡಿದ್ದು, ಅದರಲ್ಲೂ ಚಾಮುಂಡಿಬೆಟ್ಟದ ಸಮಗ್ರ ಅಭಿವೃದ್ಧಿಗಾಗಿ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವುದು ನಿಜಕ್ಕೂ ಸಂತೋಷದ ಸಂಗತಿ. ರಾಜ್ಯ ಹಾಗೂ ಇತರೆ ಭಾಗದಿಂದ ಲಕ್ಷಾಂತರ ಭಕ್ತರು ತಾಯಿ ದರ್ಶನಕ್ಕೆ ಬರುತ್ತಾರೆ. ಭಕ್ತಾದಿಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಪ್ರಾಧಿಕಾರದಿಂದ ಅನುಕೂಲವಾಗಲಿದೆ ಎಂದು ತಿಳಿದರು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಲೋಕೇಶ್, ಮೋಹನ್‌ಕುಮಾರ್, ನವೀನ್ ಕೆಂಪಿ, ರವಿಚಂದ್ರ, ರಾಜೇಶ್, ರಾಕೇಶ್, ಮಂಜು, ತೀರ್ಥಕುಮಾರ್, ಕನಕಮೂರ್ತಿ ಹಡಜನ, ಎಸ್.ಎನ್.ರಾಜೇಶ್, ಮಂಜಪ್ಪ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಲ್ಲಿ ಸಿಹಿ ವಿತರಿಸಿ ಸಂಭ್ರಮಿಸಿದ ಸಿದ್ದರಾಮಯ್ಯನವರ ಅಭಿಮಾನಿಗಳು.

ಆಹಾರ ತಯಾರಿಕೆಗೆ ಹಾನಿಕಾರಕ ಬಣ್ಣ ಬಳಕೆ ಮಾಡಿದರೆ ಪ್ರಕರಣ ದಾಖಲಿಸಿ

ಡಿಸಿ ಡಾ.ರಾಜೇಂದ್ರ ಆದೇಶ



ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006ರ ಕುರಿತಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಭೆ ನಡೆಸಿದರು.

ಮೈಸೂರು, ಜು.8(ಬಿಎಲ್ ಯು)– ಹಾನಿಕಾರಕ ಬಣ್ಣ ಹಾಗೂ ಕಳಪೆ ಗುಣಮಟ್ಟದ ಅಡುಗೆ ಎಣ್ಣೆ ಬಳಸಿ ಆಹಾರ ತಯಾರಿಸುತ್ತಿರುವ ಮಾರಾಟಗಾರರ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಿಧಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006 ಅನ್ನು ಪರಿಣಾಮಕಾರಿ ಅನುಷ್ಠಾನ ಮಾಡುವ ಕುರಿತಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಆಹಾರ ತಯಾರಿಕೆಗೆ ಕಡಿಮೆ ಬೆಲೆಯ ಕೆಟ್ಟ ಕೊಲೆಸ್ಟ್ರಾಲ್ ಇರುವ ಅಡುಗೆ ಎಣ್ಣೆಗಳನ್ನು ಬಳಸುತ್ತಾರೆ. ಜೊತೆಗೆ ಹಣ್ಣು ಮತ್ತು ತರಕಾರಿಗಳು ಕೆಡದಂತೆ ಕಾಪಾಡಲು ವ್ಯಾಕ್ಸ್ ಬಳಸಲಾಗುತ್ತದೆ. ಇದರಿಂದ ಜನರ ಆರೋಗ್ಯ ಹಾಳಾಗಲಿದ್ದು, ಹೃದಯ ಸಂಬಂಧಿ ಖಾಯಿಲೆಗಳು ಬರುತ್ತದೆ ಎಂದು ಡಾ.ರಾಜೇಂದ್ರ ಆತಂಕ ವ್ಯಕ್ತಪಡಿಸಿದರು.

ಕೆಲವು ಹೋಟೆಲ್, ಬೇಕರಿ ಹಾಗೂ ಇತರೆ ಆಹಾರ ಮಾರಾಟ ಕೇಂದ್ರಗಳಲ್ಲಿ ಆರೋಗ್ಯಕ್ಕೆ ಹಾನಿಕಾರಿಯಾದ ಬಣ್ಣ ಬೆರೆಸಿ, ಕಲಬೆರಕೆ ಮಾಡಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಾರೆ. ಇವುಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಿ. ಆಹಾರಗಳ ಗುಣಮಟ್ಟ ಪರೀಕ್ಷಿಸಿ, ಆಹಾರಗಳಲ್ಲಿ ಕಳಪೆ ಹಾಗೂ ಕಲಬೆರಕೆ ಆಗದಂತೆ ಪರಿಶೀಲನೆ ನಡೆಸಿ ಎಂದು ಅಧಿಕಾರಿಗಳಿಗೆ ಡಿಸಿ ತಾಕೀತು ಮಾಡಿದರು.

ಕಳಪೆ ಗುಣಮಟ್ಟದ ಆಹಾರ ಮಾರಾಟ ಮಾಡುತ್ತಿದ್ದರೆ ಅಂತಹವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸಿ ಎಂದು ಡಾ.ರಾಜೇಂದ್ರ ಸೂಚನೆ ನೀಡಿದರು. ಆಹಾರ ಉತ್ಪನ್ನಗಳನ್ನು ತಯಾರಿಸುವ ಸಿಬ್ಬಂದಿ ಸ್ವಚ್ಛತೆ ಕಾಪಾಡಬೇಕು. ಮಾಂಸ ಮಾರಾಟ ಅಂಗಡಿಗಳಲ್ಲಿ ಸ್ವಚ್ಛತೆ ಇರಬೇಕು. ತ್ಯಾಜ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಮಾರಾಟಗಾರರು ಈ ನಿಯಮ ಪಾಲಿಸುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಅಂಕಿತ ಅಧಿಕಾರಿ ಡಾ.ಪ್ರಸಾದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

27ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ



ಮೈಸೂರು,ಜು.8–ಮೈಸೂರಿನ ಬನ್ನಿಮಂಟಪದಲ್ಲಿರುವ ಭಾವಸಾರ ಕ್ಷತ್ರಿಯ ಸಂಘದ ವತಿಯಿಂದ ಜು.11 ಮತ್ತು 12ರಂದು 27ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ. ಜು.11ರಂದು ಬೆಳಗ್ಗೆ 11ರಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕಳಶ ಸ್ಥಾಪನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮ ಬನ್ನಿಮಂಟಪದಲ್ಲಿರುವ ಮೆಂದರ್‌ಕರ್ ಪ್ರಭಾಕರ್‌ರಾವ್ ಮನೆಯಲ್ಲಿ ನಡೆಯಲಿದೆ.

ಜು.12ರಂದು ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಗೆ ಮಹಾಮಂಗಳಾರತಿ, ನಂತರ ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಶ್ರೀ ದೇವಿಯ ಕಳಸ ವಿಸರ್ಜನಾ ಕಾರ್ಯಕ್ರಮ ನಡೆಯಲಿದೆ. ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪರಂಪರೆ, ಸಂಸ್ಕಾರ, ಧಾರ್ಮಿಕ ಅರಿವು ಮೂಡಿಸಿ: ವಿಶ್ವ ಪ್ರಸನ್ನ ತೀರ್ಥ ಶ್ರೀಗಳು



ಮೈಸೂರು,ಜು.8–ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ ವ್ರತ ನಡೆಸುತ್ತಿರುವ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರಿಗೆ ಗುರುಪೂರ್ಣಿಮೆ ಅಂಗವಾಗಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಗುರುವಂದನೆ ಸಲ್ಲಿಸಲಾಯಿತು.

ಗುರುವಂದನೆಯಲ್ಲಿ ಮಾತನಾಡಿದ ಶ್ರೀಗಳು, ಮಾನವನಾಗಿ ಜನಿಸಿದ ಮೇಲೆ ನಮ್ಮ ಸಂಸ್ಕಾರಗಳನ್ನು ಅರಿತು ಬದುಕು ಸಾಗಿಸಬೇಕು. ಯಾರು ಸದಾ ಭಗವಂತನ ನಾಮಸ್ಮರಣೆಯಲ್ಲಿ ಇರುತ್ತಾರೋ ಅವರಿಗೆ ಕಷ್ಟದ ಅರಿವು ಬರುವುದಿಲ್ಲ. ಅದಕ್ಕಾಗಿ ಪ್ರತಿಯೊಬ್ಬರೂ ಧರ್ಮ ಸಂರಕ್ಷಣೆಗೆ ಬದ್ಧರಾಗಿ ಎಂದು ಸಲಹೆ ನೀಡಿದರು.

ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಶ್ರೀ ಕೃಷ್ಣ ಮಿತ್ರ ಮಂಡಳಿಯ ಸುಬ್ರಮಣ್ಯ ತಂತ್ರಿ, ಉದ್ಯಮಿ ಜಯರಾಮ್, ಧನರಾಜ್, ಚಕ್ರಪಾಣಿ, ಮೋಹನ್, ವಾಸು ಇನ್ನಿತರರು ಹಾಜರಿದ್ದರು.

ಜಿಲ್ಲಾ ಮಟ್ಟದ ಪತ್ರಕರ್ತರ ಗುರುತಿಸುವ ಕೆಲಸವಾಗಲಿ

'ಮೈಸೂರು ಮಿತ್ರ' ವರದಿಗಾರರು ಸೇರಿ ಹಲವಾರು ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ



ಮೈಸೂರು, ಜು.8(ಜಿಎ)–ಪತ್ರಕರ್ತರ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿದಾಗ ಅವರಲ್ಲಿ ಮತ್ತಷ್ಟು ಉತ್ಸಾಹ ಮತ್ತು ಪ್ರೇರಣೆ ಮೂಡಲಿ ಎಂದು ಮೈಸೂರು ಆಕಾಶವಾಣಿ ನಿರ್ದೇಶಕ ಎಸ್.ಎಸ್. ಉಮೇಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಸಂಘದಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಪತ್ರಕರ್ತ ಕೆ.ವಿ.ಶ್ರೀನಿವಾಸನ್ (ಬ್ರದರ್) ಸ್ಥಾಪಿತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಪತ್ರಕರ್ತರನ್ನು ಮಾತ್ರ ಗುರುತಿಸುತ್ತಾರೆ. ಆದರೆ, ಜಿಲ್ಲಾ ಮಟ್ಟದ ಪತ್ರಕರ್ತರನ್ನು ಗುರುತಿಸುವ ಕೆಲಸವಾಗಬೇಕು ಎಂದರು.

ಈ ಹಿಂದೆ ಆಕಾಶವಾಣಿಯಲ್ಲಿ 'ಕರ್ತ ಪತ್ರಕರ್ತ' ಎಂಬ ಕಾರ್ಯಕ್ರಮದ ಮೂಲಕ 163 ಪತ್ರಕರ್ತರ ಸಂದರ್ಶನ ಮಾಡಿದ್ದೇನೆ. ಅದು ಇಂದಿಗೂ ನೆನಪಿನಲ್ಲಿ ಇದೆ, ಕನ್ನಡದ ಪತ್ರಕರ್ತರಿಗೆ ಜಿಲ್ಲಾ ಮಟ್ಟದಲ್ಲಿಯೂ ಈ ರೀತಿ ಕಾರ್ಯಕ್ರಮ ಮಾಡಿ ಅಥವಾ ಪುಸ್ತಕ ರಚಿಸಿ, ಅವರ ಕಾರ್ಯವೈಖರಿಯನ್ನು ದಾಖಲಿಸಿ. ಇದರಿಂದ ಮುಂದಿನ ಪೀಳಿಗೆಗೆ ಸಹಕಾರಿಯಾಗಲಿದೆ ಎಂದು ಸಲಹೆ ನೀಡಿದರು.

ಪ್ರಶಸ್ತಿ ಸ್ಥಾಪಕ ಮತ್ತು ಆಕಾಶವಾಣಿ ನಿವೃತ್ತ ವರದಿಗಾರರೂ ಆದ ಕೆ.ವಿ.ಶ್ರೀನಿವಾಸ್ (ಬ್ರದರ್) ಮಾತನಾಡಿ, 2002ರಿಂದ ಪ್ರಶಸ್ತಿ ನೀಡುತ್ತಿದ್ದು, ಎಂಟು ಪ್ರಶಸ್ತಿ ಒಳಗೊಂಡಿದೆ. ಯುವಕರಿಗೆ ಪ್ರೋತ್ಸಾಹ ನೀಡುವುದೇ ಪ್ರಶಸ್ತಿಯ ಮುಖ್ಯ ಉದ್ದೇಶ. ದೇಶ ಕೇವಲ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಎಂಬ ಮೂರು ಕಾಲುಗಳಿಂದ ನಿಲ್ಲಲು ಸಾಧ್ಯವಿಲ್ಲ. ಮಾಧ್ಯಮ ಎಂಬ ನಾಲ್ಕನೇ ಕಾಲು ಕೂಡಬೇಕು. ಆ ಕಾಲನ್ನು ಗಟ್ಟಿಗೊಳಿಸುವುದಕ್ಕೆ ಯುವ ಪತ್ರಕರ್ತರು ಮುಂದಾಗಬೇಕು ಎಂದು ಕರೆ ನೀಡಿದರು.

ಹಿರಿಯ ಪತ್ರಕರ್ತ ಡಿ.ಮಹದೇವಪ್ಪ ಮಾತನಾಡಿ, ಇಂದಿನ ಪತ್ರಕರ್ತರಲ್ಲಿ ಕೆಲಸದ ಕುರಿತ ಸಾಮಾಜಿಕ ಬದ್ಧತೆ ಕಡಿಮೆಯಾಗುತ್ತಿದೆ. ಇಂದಿನ ತಂತ್ರಜ್ಞಾನದಿಂದ ಸುಲಭದ ದಾರಿಗಳು ಕೂಡ ಇದಕ್ಕೆ ಕಾರಣವಾಗಿರಬಹುದು. ಸ್ಥಳಕ್ಕೆ ತೆರಳಿ ಅನುಭವ ಪಡೆದು ವರದಿಗಾರಿಕೆ ಮಾಡುವವರ ಸಂಖ್ಯೆ ಕಡಿಮೆಯಾಗಿದೆ ಎಂದರು.

ಪತ್ರಕರ್ತರಾದ ಆರ್.ಸುವರ್ಣ ಅವರಿಗೆ ಮಹಾತ್ಮ ಗಾಂಧಿ ಪ್ರಶಸ್ತಿ, ಎಂ.ಎ. ಶ್ರೀರಾಮ್ ಅವರಿಗೆ ಜಾನಕಮ್ಮ ವೆಂಕಟಪ್ಪಗೌಡ ಪ್ರಶಸ್ತಿ, ಬೀಚನಹಳ್ಳಿ ಮಂಜುನಾಥ್ ಅವರಿಗೆ ಕೆ.ವಿ.ಶ್ರೀನಿವಾಸನ್ ಪ್ರಶಸ್ತಿ, ಬಾಪುಲಿಂಗರಾಜ್ ಅರಸ್ ಅವರಿಗೆ ಜೆ.ಪಿ.ಸ್ಮಾರಕ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಉಪಾಧ್ಯಕ್ಷ ಬಸವಣ್ಣ, ಖಜಾಂಚಿ ನಾಗೇಶ್ ಪಾಣತ್ತಲೆ, ಗ್ರಾಮಾಂತರ ಸಂಘದ ಉಪಾಧ್ಯಕ್ಷ ಧರ್ಮಪುರ ನಾರಾಯಣ್, ಕಾರ್ಯಕಾರಿ ಸದಸ್ಯರಾದ ಮಲ್ಲಿಗೆ ಮಾಚಮ್ಮ, ಸುರೇಶ್, ಕೃಷ್ಣೋಜಿರಾವ್ ಉಪಸ್ಥಿತರಿದ್ದರು.

ವಂದೇ ಭಾರತ್ ಸೇರಿ ಎಲ್ಲಾ ರೈಲುಗಳ ಎಸಿ ಚೇರ್ ಕಾರ್, ಎಕ್ಸಿಕ್ಯೂಟಿವ್ ಟಿಕೆಟ್ ದರ ಶೇ.25ರವರೆಗೆ ಕಡಿತ

ನವದೆಹಲಿ: ವಂದೇ ಭಾರತ್ ರೈಲು ಸೇರಿದಂತೆ ಎಲ್ಲಾ ರೈಲುಗಳ ಎಸಿ ಚೇರ್ ಕಾರ್ ಮತ್ತು ಎಕ್ಸಿಕ್ಯೂಟಿವ್ ಕ್ಲಾಸ್‌ಗಳ ಟಿಕೆಟ್ ದರ ಮತ್ತು ಅನುಭೂತಿ ಹಾಗೂ ವಿಸ್ಟಾಡೋಮ್ ಕೋಚ್‌ಗಳ ದರವನ್ನು ಲಭ್ಯತೆಗೆ ಅನುಗುಣವಾಗಿ ಶೇ.25ರಷ್ಟು ಕಡಿತಗೊಳಿಸಲಾಗುವುದು ಎಂದು ರೈಲ್ವೆ ಮಂಡಳಿ ಆದೇಶ ಹೊರಡಿಸಿದೆ. ಈ ದರಗಳು ಸಹ ಸ್ಪರ್ಧಾತ್ಮಕ ಸಾರಿಗೆ ವಿಧಾನಗಳ ಮೇಲೆ ಅವಲಂಬಿತವಾಗಿರುತ್ತದೆ. ಲಭ್ಯವಿರುವ ಸ್ಥಾನಗಳ ಬಳಕೆಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ ರೈಲ್ವೆ ಸಚಿವಾಲಯವು ರೈಲ್ವೆ ವಲಯ ಪ್ರಧಾನ ಮುಖ್ಯ ವಾಣಿಜ್ಯ ವ್ಯವಸ್ಥಾಪಕರಿಗೆ ಎಸಿ ಚೇರ್ ಕಾರ್ ರೈಲುಗಳಲ್ಲಿ ರಿಯಾಯಿತಿ ದರದ ಯೋಜನೆಗಳನ್ನು ಪರಿಚಯಿಸುವ ಅಧಿಕಾರ ನೀಡಲು ನಿರ್ಧರಿಸಿದೆ. ಈ ಯೋಜನೆಯು ಅನುಭೂತಿ ಮತ್ತು ವಿಸ್ಟಾಡೋಮ್ ಕೋಚ್‌ಗಳು ಸೇರಿದಂತೆ ಎಸಿ ಆಸನ ಸೌಕರ್ಯಗಳನ್ನು ಹೊಂದಿರುವ ಎಲ್ಲಾ ರೈಲುಗಳ ಎಸಿ ಚೇರ್ ಕಾರ್ ಮತ್ತು ಎಕ್ಸಿಕ್ಯೂಟಿವ್ ಕ್ಲಾಸ್‌ಗಳಿಗೆ ಅನ್ವಯಿಸುತ್ತದೆ. ರಿಯಾಯಿತಿಯೂ ಮೂಲ ದರದಲ್ಲಿ ಗರಿಷ್ಟ ಶೇ.25ರವರೆಗೆ ಇರುತ್ತದೆ. ರಿಸರ್ವೇಷನ್ ಶುಲ್ಕ, ಸೂಪರ್ ಫಾಸ್ಟ್ ಸರ್ಚಾರ್ಜ್, ಜಿಎಸ್ಟಿ ಇತ್ಯಾದಿಗಳಂತಹ ಇತರ ಶುಲ್ಕಗಳನ್ನು ಪ್ರತ್ಯೇಕವಾಗಿ ವಿಧಿಸಲಾಗುತ್ತದೆ.

ಮೈಸೂರು ರಿಂಗ್ ರಸ್ತೆಯಲ್ಲಿ ಮರಕ್ಕೆ ಬೈಕ್ ಡಿಕ್ಕಿ: ಸಾಫ್ಟ್‌ವೇರ್ ಇಂಜಿನಿಯರ್ ಸಾವು

ಮೈಸೂರು, ಜು. 8 (ಆರ್‌ಕೆ)– ಬೇವಿನ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸಾಫ್ಟ್‌ವೇರ್ ಇಂಜಿನಿಯರ್ ಸಾವನ್ನಪ್ಪಿರುವ ದುರಂತ ಮೈಸೂರಿನ ಬೋಗಾದಿ ಬಳಿ ರಿಂಗ್ ರಸ್ತೆಯಲ್ಲಿ ಜುಲೈ 6 ರಂದು ಸಂಭವಿಸಿದೆ.

ಮೈಸೂರಿನ ಜಯನಗರ ಚಿಕ್ಕಹರದನಹಳ್ಳಿ ನಿವಾಸಿ ಮಂಜುನಾಥ್ ಅವರ ಮಗ ಶರತ್ (28) ಸಾವನ್ನಪ್ಪಿದ ಯುವಕ. ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಬಡಾವಣೆಯ ಪ್ರೈವೇಟ್ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅವರು, ಬುಧವಾರ ರಾತ್ರಿ ಪಾಳಿಯ ಕರ್ತವ್ಯ ಮುಗಿಸಿ ಬೈಕಿನಲ್ಲಿ ಮನೆಗೆ ಹಿಂದಿರುಗುತ್ತಿದ್ದಾಗ ಬೋಗಾದಿ ಜಂಕ್ಷನ್ ಸಮೀಪ ಪೆಟ್ರೋಲ್ ಬಂಕ್ ಎದುರು ನಿಯಂತ್ರಣ ತಪ್ಪಿ ಮೀಡಿಯನ್‌ನಲ್ಲಿರುವ ಬೇವಿನ ಮರಕ್ಕೆ ಅಪ್ಪಳಿಸಿತು. ಪರಿಣಾಮ ಎದೆಗೆ ತೀವ್ರ ಗಾಯಗಳಾಗಿದ್ದ ಶರತ್ ಅವರನ್ನು ಕುವೆಂಪುನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಹೆಲ್ಮೆಟ್ ಧರಿಸಿದ್ದರಿಂದ ಶರತ್ ತಲೆಗೆ ಗಾಯಗಳಾಗದಿದ್ದರೂ ಮರದ ಕಾಂಡ ಎದೆಯ ಭಾಗಕ್ಕೆ ಬಡಿದಿದ್ದರಿಂದ ಶ್ವಾಸ ಕೋಶ ನಜ್ಜು ಗುಜ್ಜಾಗಿ ಅವರು ಸಾವನ್ನಪ್ಪಿದ್ದಾರೆ ಎಂದು ಸಬ್‌ಇನ್ಸ್‌ಪೆಕ್ಟರ್ ಮದನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.7.2023 ಭಾನುವಾರ, ಮಳೆ ನಕ್ಷತ್ರ: ಪುನರ್ವಸು 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಬಾರ್ಕೆರ್ ಕರಿಯಪ್ಪ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಬಿ.ವಿ.ವಸಂತಕುಮಾರ್, 9.05 ವಸುಧೈವ ಕುಟುಂಬಕ್ಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಸಕ್ಕರೆ ಕಾಯಿಲೆಯನ್ನು ಚಿಕಿತ್ಸೆಯಿಂದ ಸಂಪೂರ್ಣ ಗುಣಪಡಿಸಲು ಸಾಧ್ಯವೆ ಕುರಿತು ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ವೈಲಿನ್ ಕಲಾವಿದೆ ಅನ್ವಿತಾ ಕಿರಣ್ ಜೊತೆ ಮಾತುಕತೆ. ನಡೆಸಿಕೊಡುತ್ತಾರೆ ಎಂ.ಎಸ್.ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ–ಸಣ್ಣಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಇಂದ್ರಾಣಿ ಅನಂತರಾಂ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಗದಾಯುದ್ಧ, ಪ್ರಸ್ತುತಿ– ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಲಾಭದಾಯಕ ಕುರಿ ಸಾಕಾಣಿಕಾ ಉದ್ದಿಮೆಗೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಡಾ.ಬಿ.ಎನ್.ಷಡಕ್ಷರಮೂರ್ತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ–ಕೋಟಿ ವೃಕ್ಷ ಅಭಿಯಾನದ ಮೈಸೂರಿನ ಶ್ರೀಕಾಂತ್ ಭಟ್ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ತಪನ್ ನಟ್ಟಾ–ಕ್ಲಾರಿಯೋನೆಟ್

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು ತಪಾಸಣಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸಂಧಿವಾತ, ಮಂಡಿನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.
- **ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ :** ದಿ ಗ್ರಾಜುಯೇಟ್ಸ್ ಕೋ ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿಲಾನ್ಯಾಸ ಅನಾವರಣ : ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಉಪಸ್ಥಿತರು : ಸಚಿವ ಕೆ.ಎನ್. ರಾಜಣ್ಣ, ಅಧ್ಯಕ್ಷತೆ : ಬ್ಯಾಂಕಿನ ಅಧ್ಯಕ್ಷ ಎನ್.ಶ್ರೀನಿವಾಸ, ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಮರಿತಿಬ್ಬೇಗೌಡ, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಮಧು ಜಿ. ಮಾದೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಎ.ಎಚ್. ವಿಶ್ವನಾಥ್, ಸಹಕಾರ ಸಂಘಗಳ ನಿಬಂಧಕ ಡಾ. ಕೆ. ರಾಜೇಂದ್ರ, ಮೈಸೂರು ಸಹಕಾರಿ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ವಿಧಾನ ಪರಿಷತ್ ಸದಸ್ಯರಾದ ವೈ. ಮಹೇಶ್, ಎಂ. ಸತ್ಯನಾರಾಯಣ ರಾವ್ ಹಾಗೂ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಜೆ.ಕೆ. ಮೈದಾನ, ಬೆಳಗ್ಗೆ 10ಕ್ಕೆ.
- **ಮೈಸೂರು ವೀರಶೈವ ಸಜ್ಜನ ಸಂಘ :** 25ನೇ ವರ್ಷದ ಗಾಳಿಪಟ ಹಾರಿಸುವ ಸ್ಪರ್ಧೆ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಪ್ರಾಂಶುಪಾಲರಾದ ಸುನಂದ ಗುರಪ್ಪ ಭೂಪಾಳಿ, ಸನ್ಮಾನಿತರು: ಮೈಸೂರು ಬಿ.ನಾಗರಾಜ್, ಎಂ.ಎಸ್.ರಮೇಶ್, ಅಧ್ಯಕ್ಷತೆ: ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ರಮಾನಂದ, ಸ್ಥಳ: ಲಲಿತ ಮಹಲ್ ಅರಮನೆ ಹಿಂಭಾಗ, ಬೆಳಗ್ಗೆ 10ಕ್ಕೆ.
- **ಪ್ರಯೋಗ ಮೈಸೂರು :** ಚಂದಮಾಮ ಹಳೆ ಬೇರು ಹೊಸ ಚಿಗುರು, ಮಕ್ಕಳ ವಾರಾಂತ್ಯ ಅಭಿಯನ –ರಂಗ ತರಬೇತಿ, ನಿರ್ದೇಶನ: ಪ್ರವೀಣ್ ಬೆಳ್ಳಿ, ಸ್ಥಳ: ಪ್ರಯೋಗ ಮೈಸೂರು, ಬೆಳಗ್ಗೆ 10ರಿಂದ.
- **ಅರಸು ಮಂಡಳಿ ಸಂಘ:** ಮಾತೋಶ್ರೀ ಶ್ರೀಮತಿ ಕೆಂಪನಂಜಮ್ಮಣ್ಣಿ ವಾಣಿ ವಿಲಾಸ ಸನ್ನಿಧಾನ ಅವರ ವರ್ಧಂತಿ ಹಾಗೂ ಮಹಿಳಾ ದಿನಾಚರಣೆ, ಉದ್ಘಾಟನೆ: ಶ್ರೀಮತಿ ತ್ರಿಷಿಕಾಕುಮಾರಿ ದೇವಿ ಒಡೆಯರ್, ಪುಷ್ಪಾರ್ಚನೆ: ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಮುಖ್ಯ ಅತಿಥಿಗಳು: ಉಪಮೇಯರ್ ಡಾ.ರೂಪ ಯೋಗೀಶ್, ಮುಖ್ಯ ಅತಿಥಿಗಳು: ಶ್ರೀ ಚಾಮರಾಜೇಂದ್ರ ಎಜುಕೇಷನ್ ಟ್ರಸ್ಟ್ ಉಪಾಧ್ಯಕ್ಷೆ ಶ್ರೀಮತಿ ಡಾ. ಭಾರತಿ ಅರಸ್, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಬೆಳಗ್ಗೆ 10ಕ್ಕೆ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್:** ಕೃಷ್ಣ ಜನಮನ ಅವರ ಕಾದಂಬರಿ 'ಕೊಂಡವಾಡೆ', ಲೇಖನ ಬರಹ 'ಶಾಂತಿಯಾತ್ರೆ' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಚಿಂತಕ ಪ್ರೊ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಚಿಂತಕ ಪ್ರೊ.ಚ.ಸರ್ವಮಂಗಳ, ಪುಸ್ತಕ ಕುರಿತು ಮಾತನಾಡುವವರು: ಚಿಂತಕ ಮಹೇಶ್ ಹರವೆ, ಡಾ.ಎಸ್.ನರೇಂದ್ರಕುಮಾರ್, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 10.30ಕ್ಕೆ.
- **ಸಿದ್ದಾರ್ಥ ಕ್ಷೇಮಾಭಿವೃದ್ಧಿ ಸಂಘ :** ವಾರ್ಷಿಕ ವಿಶೇಷ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಹಿರಿಯಣ್ಣ, ಸ್ಥಳ: ಸೌಹಾರ್ದ ಸೊಸೈಟಿ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಶ್ರೀ ಚೌಡೇಶ್ವರಿ ಕಲ್ಯಾಣ ಮಹೋತ್ಸವ ಕಾರ್ಯಕಾರಿ ಸಮಿತಿ :** 55ನೇ ವರ್ಷದ ಶ್ರೀ ಗಿರಿಜಾ ಕಲ್ಯಾಣೋತ್ಸವ ಬೆಳಗ್ಗೆ ಸಂಬಂಧ ಮಾಲೆ, ಧಾರಾಮುಹೂರ್ತ, ನಂತರ ಲಾಜಾ ಹೋಮ, ಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಸಮಿತಿ ಆವರಣ, ಕಾಳಮ್ಮನ ಗುಡಿ ಬೀದಿ, ಮಂಡಿ ಮೊಹಲ್ಲಾ, ಬೆಳಗ್ಗೆ 10.50 ರಿಂದ.
- **ಶ್ರೀ ವಿಠ್ಠಲ ರುಕ್ಮಿಣಿ ಚಾರಿಟೆಬಲ್ ಟ್ರಸ್ಟ್ :** ಭಾವಸಾರ ಕ್ಷತ್ರಿಯ ಸಮಾಜದ 8ನೇ ವರ್ಷದ ವಧು–ವರರ ಸಮಾವೇಶ, ಸ್ಥಳ: ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್ಷನ್ ಹಾಲ್, ಬೆಳಗ್ಗೆ 11 ರಿಂದ.
- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ನಿತ್ಯಸ್ಥಾನಂದ ಅವರಿಂದ ಶ್ರೀ ರಾಮಕೃಷ್ಣರ ಸಾರ್ವತ್ರಿಕ ಸಾಧನ ಚತುಷ್ಟಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ
- **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ಮೈಸೂರಿನ ಧ್ವನಿನಾದ ಥಿಯೇಟರ್ಸ್ ಕಲಾವಿದರಿಂದ ಡೋರ್ ನಂ.8 ನಾಟಕ ಪ್ರದರ್ಶನ, ರಚನೆ: ಕಾವ್ಯ ಕಡಮೆ ನಾಗರಕಟ್ಟೆ, ವಿನ್ಯಾಸ: ಹೆಚ್.ಕೆ. ದ್ವಾರಕನಾಥ್, ಸಂಗೀತ, ನಿರ್ದೇಶನ: ಧನಂಜಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 9 ಭಾನುವಾರ 2023

ಸಂಪುಟ: 44 | ಸಂಚಿಕೆ: 84 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಬಿಜೆಪಿ ವಿಪಕ್ಷ ನಾಯಕನ ಸ್ಥಾನ ಮಾರಾಟಕ್ಕಿಟ್ಟಿದೆ!

ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಲೇವಡಿ



ಬೆಂಗಳೂರು, ಜು.8(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನವನ್ನು ಬಿಜೆಪಿ ಮಾರಾಟಕ್ಕಿಟ್ಟಿದೆ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ವ್ಯಂಗ್ಯವಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರಿಗೆ ಒಬ್ಬ ಪ್ರತಿಪಕ್ಷದ ನಾಯಕನ ಆಯ್ಕೆ ಮಾಡಲಾಗಿಲ್ಲ. ಇದೇ ಮೊದಲ ಬಾರಿ ಬಜೆಟ್‌ನಲ್ಲಿ ಪ್ರತಿಪಕ್ಷದ ನಾಯಕರಿಲ್ಲದಂತಾಗಿತ್ತು. ಈ ಹಿಂದೆ ಮುಖ್ಯಮಂತ್ರಿ ಸ್ಥಾನವನ್ನೇ ಬಿಜೆಪಿ ಮಾರಾಟಕಿಟ್ಟಿತ್ತು. ಅಂದು 2500 ಕೋಟಿ ದರ ನಿಗದಿ ಮಾಡಿತ್ತು ಎಂದು ಆ ಪಕ್ಷದ ನಾಯಕರೇ ಹೇಳಿಕೊಂಡಿದ್ದಾರೆ. ಇದೀಗ ಪ್ರತಿಪಕ್ಷದ ನಾಯಕನ ಸ್ಥಾನವನ್ನು ಮಾರಾಟಕ್ಕಿಟ್ಟು, ನೂರಾರು ಕೋಟಿ ದರ ನಿಗದಿ ಮಾಡಿರಬಹುದೆಂದು ಲೇವಡಿ ಮಾಡಿದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಯ ಬಗ್ಗೆ ಅಪಹಾಸ್ಯ ಮಾಡುತ್ತಿದ್ದಾರೆ. ಅವರಿಗೆ ನಮ್ಮ ಸರ್ಕಾರದ ಅಭಿವೃದ್ಧಿ ಬಗ್ಗೆ ಹೊಟ್ಟೆ ಉರಿ ಎಂದರು.

ಜೋಶಿ ಅವರಿಗೆ ಬಡವರ ಬಗ್ಗೆ ಎಳ್ಳಷ್ಟು ತಿಳಿದಿಲ್ಲ. ನಾವು ಭಾಗ್ಯಗಳನ್ನು ನೀಡಿರುವುದು ಆ ವರ್ಗಕ್ಕೆ ಶ್ರೀಮಂತರಿಗಲ್ಲ ಎಂದರು. ಚುನಾವಣೆಗೂ ಮುನ್ನ ನಾವು ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸಲು ದಿಟ್ಟ ಹೆಜ್ಜೆ ಇಟ್ಟಿದ್ದೇವೆ. ಅದರ ಮೊದಲ ಭಾಗವಾಗಿಯೇ ಮುಖ್ಯಮಂತ್ರಿಯವರು ನಿನ್ನೆ ತಮ್ಮ ಆಯವ್ಯಯದಲ್ಲಿ ಪ್ರಮುಖ ಯೋಜನೆಗಳನ್ನು ಪ್ರಕಟಿಸಿದ್ದಾರೆ ಎಂದರು.

ಒತ್ತುವರಿ ಸರ್ಕಾರಿ ಭೂಮಿ

ಭೂರಹಿತರಿಗೆ ಹಂಚುವ ಚಿಂತನೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ ● ಸರ್ಕಾರಿ ಉದ್ದೇಶಕ್ಕೆ ಬೇಕಾದ್ದನ್ನು ಉಳಿಸಿಕೊಂಡು ಬಾಕಿ ಹಂಚಲು ಪರಿಶೀಲನೆ ● ಇದಕ್ಕಾಗಿ ಈಗಾಗಲೇ ಆಗಿರುವ 2ರ ಜೊತೆಗೆ ಮತ್ತೊಂದು ಸಮೀಕ್ಷೆಗೆ ನಿರ್ಧಾರ ● ಯುವ ನಿಧಿ ನಿರುದ್ಯೋಗಕ್ಕೆ ಶಾಶ್ವತ ಪರಿಹಾರವಲ್ಲ: ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ





ಬೆಂಗಳೂರು, ಜು.8(ಕೆಎಂಶಿ)– ಸರ್ಕಾರಿ ಭೂಮಿ ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಿ, ಭೂರಹಿತರಿಗೆ ಭೂಮಿ ಕೊಡುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಸರ್ಕಾರದ ಎಲ್ಲಾ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಿ, ನಿರುದ್ಯೋಗಿಗಳಿಗೆ ಅವಕಾಶ ಮಾಡಿಕೊಡುವುದಾಗಿ ತಿಳಿಸಿದ್ದಾರೆ. ಹೊರ ಗುತ್ತಿಗೆಯಲ್ಲೂ ಮೀಸಲಾತಿ ತರುವ ಉದ್ದೇಶವನ್ನು ಸರ್ಕಾರ ಹೊಂದಿದ್ದು, ಈ ಬಗ್ಗೆ ಶೀಘ್ರವೇ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ.

ಜನಮನ ಪ್ರತಿಷ್ಠಾನ ಮತ್ತು ಸಮತಾ ಅಧ್ಯಯನ ಕೇಂದ್ರ ಹಮ್ಮಿಕೊಂಡಿದ್ದ ಪ್ರಬುದ್ಧ ಕರ್ನಾಟಕ ಜನಮನ ಸಮಾವೇಶದ ಸಂವಾದದಲ್ಲಿ ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದ ಮುಖ್ಯಮಂತ್ರಿಯವರು ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ ಈಗಾಗಲೇ ನಮ್ಮಲ್ಲಿ ಎರಡು ವರದಿಗಳಿವೆ ಆ ವರದಿಯ ಜೊತೆಗೆ ಮತ್ತೊಂದು ಸಮೀಕ್ಷೆ ನಡೆಸಲಾಗುವುದು. ಸಮೀಕ್ಷಾ ವರದಿ ಬಂದ ನಂತರ ಸರ್ಕಾರದ ಯೋಜನೆಗಳಿಗೆ ಅಗತ್ಯ ಭೂಮಿ ಉಳಿಸಿಕೊಂಡು, ಉಳಿದ ಭೂಮಿಯನ್ನು ಭೂರಹಿತರಿಗೆ ಕೊಡಲು ಚಿಂತನೆ ನಡೆದಿದೆ. ಈ ಹಿಂದೆಯು ಇಂತಹ ಕ್ರಮಗಳು ಜರುಗಿವೆ. ಮತ್ತೆ ಆ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ನಮ್ಮ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದರು.

ನಿರುದ್ಯೋಗ ನಿವಾರಣೆಗೆ ಒತ್ತು: ಅಧಿಕಾರಕ್ಕೆ ಬರುವ ಮುನ್ನ ನಾವು ಜನತೆಗೆ ನೀಡುವ ಭರವಸೆಯಂತೆ ನಿರುದ್ಯೋಗ ಸಮಸ್ಯೆಗೆ ಒತ್ತು ಕೊಡಲಾಗುವುದು. ನಿರುದ್ಯೋಗಿಗಳಿಗೆ ತಾತ್ಕಾಲಿಕವಾಗಿ ಯುವ ನಿಧಿ ಯೋಜನೆಯಡಿ ಪದವೀಧರರಿಗೆ ಮಾಸಿಕ ಮೂರು ಸಾವಿರ ರೂ ಕೊಡುವ ಯೋಜನೆಗೆ ಸರ್ಕಾರ ಅನುಮತಿ ನೀಡಿದೆ. ಆದರೆ ಶಾಶ್ವತವಾಗಿ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು.

ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ: ಸರ್ಕಾರಿ ವಲಯದಲ್ಲಿ ಮಾತ್ರ ಮೀಸಲಾತಿ ಸೌಲಭ್ಯವಿದ್ದು, ಇದನ್ನು ಖಾಸಗಿ ● 9ನೇ ಪುಟಕ್ಕೆ

ಹಾಲು ಉತ್ಪಾದಕರಿಗೆ ಲೀಟರ್‌ಗೆ ಐದು ರೂ. ಖರೀದಿ ದರ ಹೆಚ್ಚಳ

ಹಾಗೆಯೇ ಹಾಲಿನ ಮಾರಾಟ ದರ ಏರಿಕೆ ಸುಳಿವು ನೀಡಿದ ಸಹಕಾರ ಸಚಿವ ರಾಜಣ್ಣ



ಮೈಸೂರು, ಜು.8(ಬಿಎಲ್‌ಯು)–ಕರ್ನಾಟಕದ ಹಾಲು ಉತ್ಪಾದಕರಿಗೆ ಲೀಟರ್‌ಗೆ 5 ರೂಪಾಯಿ ಖರೀದಿ ದರ ಹೆಚ್ಚಳ ಮಾಡುವುದಾಗಿ ಸಹಕಾರ ಸಚಿವ ರಾಜಣ್ಣ ತಿಳಿಸಿದ್ದಾರೆ. ಹಾಗೆಯೇ ಹಾಲಿನ ಮಾರಾಟ ದರ ಹೆಚ್ಚಳ ಮಾಡುವ ಸುಳಿವು ಸಹ ನೀಡಿ, ಜನಸಾಮಾನ್ಯರಿಗೆ ಶಾಕ್ ನೀಡಿದ್ದಾರೆ. ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಇಂದು ನಡೆದ ಮೈಸೂರು ಪ್ರಾಂತ್ಯದ ಸಹಕಾರ ಇಲಾಖೆಯ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಇವತ್ತು ಯಾವ ಬೆಳೆಗಳಿಂದಲೂ ರೈತರಿಗೆ ಹೆಚ್ಚು ಲಾಭ ಇಲ್ಲ. ಸಾಕಷ್ಟು ಮಳೆ ಬಾರದೇ ಇಳುವರಿ ಇಲ್ಲದೆ ರೈತರಿಗೆ ನಷ್ಟವಾಗುತ್ತಿದೆ. ಹಾಗಾಗಿ ಬಹುತೇಕ ರೈತರು ಹಾಲು ಉತ್ಪಾದನೆಯನ್ನೇ ಮೂಲ ಆದಾಯವಾಗಿ ಮಾಡಿಕೊಂಡಿದ್ದಾರೆ ಎಂದರು.

ಪಶು ಆಹಾರ ಹಾಗೂ ಹುಲ್ಲಿನ ಬೆಲೆ ಹೆಚ್ಚಳವಾಗಿದೆ. ಲಾಭ ಸಿಗುವುದಿಲ್ಲ ಎಂದು ರೈತರು ಈಗ ಹಾಲು ಉತ್ಪಾನೆಯಿಂದಲೂ ವಿಮುಖವಾದರೆ ಏನು ಮಾಡುವುದು ಎಂದು ಆತಂಕ ವ್ಯಕ್ತಪಡಿಸಿದ ಸಚಿವರು, ರೈತರು ಹಾಲು ಉತ್ಪಾದನೆಯಲ್ಲೇ ಮುಂದುವರೆಯಲು ನಾವು ಪ್ರೋತ್ಸಾಹಿಸಬೇಕಿದೆ. ಈ ಹಿನ್ನಲೆಯಲ್ಲಿ ಹಾಲು ಉತ್ಪಾದಕರಿಗೆ 5 ರೂಪಾಯಿ ಖರೀದಿ ದರ ಹೆಚ್ಚಳ ಮಾಡಲು ಸರ್ಕಾರ ಚಿಂತನೆ ನಡೆಸಿದೆ. ಈ ಸಂಬಂಧ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳು ಹಾಗೂ ಹಾಲು ಒಕ್ಕೂಟಗಳ ಸಭೆ ನಡೆಯಲಿದೆ. ಅಂದು ಈ ಬಗ್ಗೆ ತೀರ್ಮಾನ ಆಗಲಿದೆ. ನೀವು ಬನ್ನಿ. ಅಲ್ಲಿ ರೈತರಿಗೆ ಖರೀದಿ ದರ ಹೆಚ್ಚಳ ಮಾಡಬೇಕಾದ ಅನಿವಾರ್ಯತೆಯನ್ನು ಅಂಕಿ-ಅಂಶ ಸಹಿತ ಮನವರಿಕೆ ಮಾಡಿಕೊಡಿ ಎಂದು ರಾಜಣ್ಣ ಹಾಲು ಒಕ್ಕೂಟಗಳಿಗೆ ಸೂಚನೆ ನೀಡಿದರು.


ಇದೇ ವಿಚಾರವಾಗಿ ಸಭೆಯ ನಂತರ ಪ್ರತಿಕ್ರಿಯೆ ನೀಡಿದ ರಾಜಣ್ಣ, ಹಾಲಿನ ದರ ಏರಿಕೆ ಎಂದ ಕೂಡಲೇ ಎಲ್ಲರೂ ಗಾಬರಿ ಆಗುತ್ತಾರೆ. ದರ ಏರಿಕೆ ಅಂದರೆ ಎರಡು ರೀತಿ ಇದೆ. ಒಂದು ಹಾಲು ಉತ್ಪಾದಕರಿಗೆ ಹೆಚ್ಚಿನ ದರ ಕೊಡುವುದು, ಮತ್ತೊಂದು ಗ್ರಾಹಕರು ಖರೀದಿಸುವ ಹಾಲಿನ ದರ ಹೆಚ್ಚಳ ಮಾಡುವುದು. ಇದರಲ್ಲಿ ಯಾರಿಗೂ ಅನಾನುಕೂಲ ಹಾಗೂ ಹೊರೆ ಆಗದಂತೆ ಸಾಧಕ-ಬಾಧಕಗಳ ಸಮಾಲೋಚನೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಯಾವುದೇ ಕಾರಣಕ್ಕೂ ನಂದಿನಿಯನ್ನು ಅಮೂಲ್ ಜೊತೆ ವಿಲೀನ ಮಾಡುವ ಪ್ರಶ್ನೆಯೆ ಇಲ್ಲ. ಅಮೂಲ್‌ನಂತೆ ನಂದಿನಿ ಕೂಡ ಪ್ರತ್ಯೇಕ ಸಂಸ್ಥೆ. ● 9ನೇ ಪುಟಕ್ಕೆ

ಜೈನ ಮುನಿಯ ಭೀಕರ ಹತ್ಯೆ

ದೇಹ ತುಂಡು ತುಂಡಾಗಿ ಕತ್ತರಿಸಿ ತೆರೆದ ಕೊಳವೆ ಬಾವಿಗೆ ತುಂಬಿದ ದುಷ್ಕರ್ಮಿಗಳು

● ಕೊಟ್ಟ ಸಾಲದ ಹಣ ಕೇಳಿದ್ದಕ್ಕೆ ಈ ಘೋರ ಕೃತ್ಯ
● ಮುನಿಗಳ ಆಪ್ತ ಸೇರಿದಂತೆ ಇಬ್ಬರ ಬಂಧನ
● ದೇಹದ ಭಾಗಗಳು ಪೊಲೀಸ್ ವಶಕ್ಕೆ





ಬೆಳಗಾವಿ, ಜು.8–ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಹೀರೇಕುಡಿ ನಂದಿ ಪರ್ವತ ಆಶ್ರಮದ ಜೈನಮುನಿ ಆಚಾರ್ಯ ಶ್ರೀ 108 ಕಾಮಕುಮಾರ ನಂದಿ ಮಹಾರಾಜ್ ಅವರನ್ನು ಅಪಹರಿಸಿ ಭೀಕರವಾಗಿ ಹತ್ಯೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಪರಿಚಿತನಾಗಿದ್ದು, ಜೈನಮುನಿಗಳಿಂದ ಆರ್ಥಿಕ ಸಹಾಯ ಪಡೆದಿದ್ದವನೇ ಅವರನ್ನು ಅಪಹರಿಸಿ ಹತ್ಯೆಗೈದ ನಂತರ ದೇಹವನ್ನು 9 ತುಂಡುಗಳಾಗಿ ಕತ್ತರಿಸಿ ಬಟ್ಟೆಯಲ್ಲಿ ಸುತ್ತಿ ತೆರೆದ ಬೋರ್‌ವೆಲ್‌ನಲ್ಲಿ ಹಾಕಿರುವುದನ್ನು ಚಿಕ್ಕೋಡಿ ಪೊಲೀಸರು ಪತ್ತೆ ಮಾಡಿದ್ದಾರೆ.

ವಿವರ: ಜೈನಮುನಿ ಕಾಮಕುಮಾರ ನಂದಿ ಮಹಾರಾಜ್ ಅವರು ಜು.5ರಿಂದ ನಾಪತ್ತೆಯಾಗಿದ್ದರು. ಅವರ ಭಕ್ತಾದಿಗಳು ಎರಡು ದಿನಗಳ ಕಾಲ ಹುಡುಕಾಟ ನಡೆಸಿ ಜೈನಮುನಿಗಳು ಪತ್ತೆಯಾಗದ ಹಿನ್ನೆಲೆಯಲ್ಲಿ ನಿನ್ನೆ (ಜು.7) ಚಿಕ್ಕೋಡಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಪೊಲೀಸರು ಆಶ್ರಮಕ್ಕೆ ಭೇಟಿ ನೀಡಿ ತನಿಖೆ ಆರಂಭಿಸಿದ್ದರು. ಸಂಶಯಗೊಂಡು ಜೈನಮುನಿಗಳ ಆಪ್ತನಾಗಿದ್ದ ರಾಯಭಾರ ತಾಲೂಕು ಖಟಕಬಾವಿ ಗ್ರಾಮದ ನಾರಾಯಣ ಮಾಳಿ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಈತ ತನ್ನ ಸ್ನೇಹಿತ ಹುಸೇನ್ ಡಾಲಾಯತ್ ಹಾಗೂ ಇನ್ನೋರ್ವನೊಡಗೂಡಿ ಜೈನಮುನಿಯನ್ನು ಹತ್ಯೆಗೈದು ದೇಹವನ್ನು ತುಂಡು ಮಾಡಿ ಬೋರ್‌ವೆಲ್‌ಗೆ ಹಾಕಿರುವುದಾಗಿ ಬಾಯಿ ಬಿಟ್ಟಿದ್ದಾನೆ. ದೂರು ದಾಖಲಾದ ಕೇವಲ 4 ಗಂಟೆ ಕಾಲದಲ್ಲೇ ಪ್ರಕರಣವನ್ನು ಭೇದಿಸಿದ್ದ ಪೊಲೀಸರು, ಇಂದು ಬೆಳಗ್ಗೆ ಆರೋಪಿಗಳೊಂದಿಗೆ ಖಟಕಬಾವಿ ಗ್ರಾಮದ ಗದ್ದೆಯೊಂದರ ತೆರೆದ ಕೊಳವೆ ಬಾವಿ ಪರಿಶೀಲಿಸಿದಾಗ ಅದರಲ್ಲಿ ಬಟ್ಟೆಯಲ್ಲಿ ಸುತ್ತಿದ್ದ ದೇಹದ ತುಂಡುಗಳು ಕಾಣಿಸಿವೆ. ನಂತರ ಜೆಸಿಬಿ ಮೂಲಕ ಬೋರ್‌ವೆಲ್ ಅಗೆದು ಪರಿಶೀಲನೆ ಮಾಡಲಾಗಿ 30 ಅಡಿ ಆಳದಲ್ಲಿ ದೇಹದ ತುಂಡುಗಳು ಪತ್ತೆಯಾಗಿವೆ. ಸಂಜೆ ವೇಳೆಗೆ ಅವೆಲ್ಲವನ್ನು ವಶಪಡಿಸಿಕೊಂಡ ಪೊಲೀಸರು ಮರಣೋತ್ತರ ಪರೀಕ್ಷೆಗಾಗಿ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ರವಾನಿಸಿದ್ದಾರೆ.

ಹತ್ಯೆ ಯಾಕೆ?: ಖಟಕಬಾವಿ ಗ್ರಾಮದ ನಾರಾಯಣ ಮಾಳಿ ಆಶ್ರಮದ ಸಮೀಪದ ಜಮೀನೊಂದನ್ನು ಗುತ್ತಿಗೆ ಪಡೆದು ಬೇಸಾಯ ಮಾಡುತ್ತಿದ್ದ. ಈತ ಜೈನಮುನಿಗಳಿಗೆ ಆಪ್ತನಾಗಿದ್ದು, ಪದೇ ಪದೆ ಆಶ್ರಮಕ್ಕೆ ಭೇಟಿ ನೀಡುತ್ತಿದ್ದ ಎಂದು ಹೇಳಲಾಗಿದೆ. ಮುನಿಗಳ ಬಳಿ ಈತ 6 ಲಕ್ಷ ರೂ. ಸಾಲ ಪಡೆದಿದ್ದ ಎಂದು ಹೇಳಲಾಗಿದ್ದು, ಹಣ ಹಿಂತಿರುಗಿಸುವಂತೆ ಜೈನಮುನಿಗಳು ಪದೇ ಪದೆ ಒತ್ತಡ ಹೇರುತ್ತಿದ್ದರಿಂದ ಅವರನ್ನು ತಮ್ಮ ಇಬ್ಬರು ಸ್ನೇಹಿತರ ● 9ನೇ ಪುಟಕ್ಕೆ

ಸಾವಿರ ಅಲ್ಲ... ಅಲ್ಲ... ಸಾವಿರದೈನೂರು ಸುಳ್ಳು ಹೇಳಿ

15ಕ್ಕೂ ಅಧಿಕ ಮಹಿಳೆಯರ ಮದುವೆಯಾದ

ಮಹಾ ಖತರ್ನಾಕ್ ನಕಲಿ ವೈದ್ಯ



ನಕಲಿ ವೈದ್ಯ ಕೆ.ಬಿ.ಮಹೇಶ್

● ಈಗ ಮೈಸೂರು ಪೊಲೀಸರ ಅತಿಥಿ ● ಮೋಸ ಹೋದರೂ ದೂರು ನೀಡಲು ಹಿಂದೆ ಮುಂದೆ ನೋಡುವ ಅಮಾಯಕರು ● ಓದಿರುವುದು ಬರೀ ಐದನೇ ತರಗತಿ ಆದರೂ ಎಂಬಿಬಿಎಸ್, ಎಂಡಿ ಮಾಡಿದ್ದಾನೆ!

ಮೈಸೂರು, ಜು. 8– ಶಾದಿ ಡಾಟ್ ಕಾಂ ಮತ್ತು ಡಾಕ್ಟರ್ಸ್ ಮ್ಯಾಟ್ರಿಮೋನಿಯಲ್ಲಿ ನಕಲಿ ಐಡಿ ಸೃಷ್ಟಿಸಿಕೊಂಡು, ತಾನು ವೈದ್ಯನೆಂದು ನಂಬಿಸಿ, ಸುಮಾರು 15ಕ್ಕೂ ಹೆಚ್ಚು ಮಹಿಳೆಯರನ್ನು ವಿವಾಹವಾಗಿ ವಂಚಿಸಿರುವ ಮಹಾ ನಯವಂಚಕನನ್ನು ಬಂಧಿಸುವಲ್ಲಿ ಕುವೆಂಪುನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ಬನಶಂಕರಿ ನಿವಾಸಿ ಕೆ.ಬಿ. ಮಹೇಶ್(35) ಬಂಧಿತ ವಂಚಕನಾಗಿದ್ದು, ಈತ ಓದಿರುವುದು ಬರೀ 5ನೇ ತರಗತಿಯಾದರೂ, ತಾನು ಡಾಕ್ಟರ್ ಎಂದು ನಂಬಿಸಿ ಮಹಿಳೆಯರ ಮದುವೆಯಾದ ನಂತರ ಅವರ ಬಳಿ ಇದ್ದ ಚಿನ್ನಾಭರಣ ಹಾಗೂ ನಗದು ದೋಚುತ್ತಿದ್ದ. ಈತ, ಇನ್ನು ಮದುವೆಯಾಗದ ಮಹಿಳೆಯರು, ವಿಚ್ಛೇದಿತರು ಹಾಗೂ ವಿಧವೆಯರನ್ನೇ ಟಾರ್ಗೆಟ್ ಮಾಡುತ್ತಿದ್ದ. ಹಾಗೆಯೇ ಈ ಮಹಿಳೆಯರು ಒಳ್ಳೆಯ ಉದ್ಯೋಗದಲ್ಲಿದ್ದು, ಹಣವಂತರಾಗಿರುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದ. 2007ರಿಂದಲೇ ಹೀಗೆ ವಂಚಿಸುತ್ತಾ ಬಂದಿದ್ದ ಈತ, ಈವರೆಗೆ 15ಕ್ಕೂ ಹೆಚ್ಚು ಮಹಿಳೆಯರ ವಿವಾಹವಾಗಿರುವುದಾಗಿ ಪೊಲೀಸರಿಗೆ ತಿಳಿಸಿದ್ದಾನೆ. ಅವರಲ್ಲಿ ಕೆಲವರಿಗೆ ಮಕ್ಕಳೂ ಆಗಿವೆ ಎಂದು ಈತ ತಿಳಿಸಿದ್ದು, ತಾನು ಹೀಗೆ ಮದುವೆಯಾಗಿದ್ದ ಮೂವರನ್ನು ಮೈಸೂರಿನಲ್ಲಿ ಬಾಡಿಗೆ ಮನೆ ಮಾಡಿ ಇರಿಸಿಕೊಂಡಿರುವುದಾಗಿ ಪೊಲೀಸರಿಗೆ ತಿಳಿಸಿದ್ದಾನೆ. ಆದರೆ ಈವರೆವಿಗೂ ಒಬ್ಬರನ್ನು ಬಿಟ್ಟರೆ ಬೇರೆ ಯಾರೂ ಈತನ ವಿರುದ್ಧ ಪೊಲೀಸರಿಗೆ ದೂರು ಸಲ್ಲಿಸಿಲ್ಲ.

ಸಿಕ್ಕಿಬಿದ್ದದ್ದು ಹೇಗೆ: ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಹೇಮಲತಾ (45) ಎಂಬುವರು ಶಾದಿ ಡಾಟ್ ಕಾಂನಲ್ಲಿ ವರನನ್ನು ಹುಡುಕುತ್ತಿದ್ದಾಗ ಅವರಿಗೆ ರಿಕ್ವೆಸ್ಟ್ ಕಳುಹಿಸಿ, ಮೈಸೂರಿನಲ್ಲಿ ಮೂಳೆ ತಜ್ಞರಾಗಿದ್ದು, ನಿಮ್ಮನ್ನು ಮದುವೆಯಾಗಲು ಇಚ್ಛಿಸುವುದಾಗಿ ಹೇಳಿದ್ದಾನೆ. ಅದರಂತೆ ಇವರಿಬ್ಬರೂ ಬೆಂಗಳೂರಿನ ಮಾರತ್‌ಹಳ್ಳಿಯ ಜ್ಯೂಸ್ ಅಂಗಡಿಯೊಂದರಲ್ಲಿ ಭೇಟಿಯಾದ ನಂತರ 2022ರ ಡಿಸೆಂಬರ್ 22ರಂದು ಅವರನ್ನು ಮೈಸೂರಿಗೆ ಕರೆಸಿಕೊಂಡು ಚಾಮುಂಡಿಬೆಟ್ಟಕ್ಕೆ ಹೋಗಿ ದೇವರ ದರ್ಶನ ಮಾಡಿಸಿದ ನಂತರ ಆರ್.ಟಿ.ನಗರದ ಮನೆಯೊಂದಕ್ಕೆ ಕರೆತಂದಿದ್ದಾನೆ. ಅಲ್ಲದೇ, ವಿಜಯನಗರ 4ನೇ ಹಂತದಲ್ಲಿ ತಾನು ಕ್ಲಿನಿಕ್ ತೆರೆಯಲಿರುವುದಾಗಿಯೂ ತಿಳಿಸಿದ್ದಾನೆ. ಈತನ ಮಾತನ್ನು ನಂಬಿದ ಹೇಮಲತಾ, ಕುಟುಂಬದವರಿಗೆ ವಿಷಯ ತಿಳಿಸಿದ್ದು, 2023ರ ಜನವರಿ 28ರಂದು ವಿಶಾಖಪಟ್ಟಣದ ಡಾಲ್ಫಿನ್ ಹೋಟೆಲ್‌ನಲ್ಲಿ ಮಹೇಶ್ ಮತ್ತು ಹೇಮಲತಾ ವಿವಾಹ ಅದ್ದೂರಿಯಾಗಿ ನಡೆದಿದೆ. ಮರುದಿನವೇ ಅವರನ್ನು ಆರ್.ಟಿ. ನಗರದ ಮನೆಗೆ ಕರೆತಂದ ನಂತರ ತಾನು ಕ್ಲಿನಿಕ್ ತೆರೆಯಲು ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಲಾಯರ್ ಸರ್ ನನಗೆ ಗಂಡ ಬೇಕು.
ಲಾಯರ್ : ಡೈವೋರ್ಸ್ ಆಗಿ ಆರು ತಿಂಗಳಾಗಿಲ್ಲ ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ?
ಹೆಂಡ್ತಿ : ಅವನ ಖಜಿನಾ ನನ್ನ ಕೈಯಲ್ಲಿ ನೋಡೋಕ್ಕೆ ಆಗ್ತಾ ಇಲ್ಲ?

ಮೈಸೂರು ಮಿತ್ರ
ಭಾನುವಾರ, 9 ಜುಲೈ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........
ಶಾಸನಗಳು ಸಾಯುತ್ತವೆ, ಗ್ರಂಥಗಳಿಗೆ ಸಾವಿಲ್ಲ –ಒಲಿವರ್ ಲಿಟ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿಶ್ವದಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಜಾಸ್ತಿ

ನಿಮ್ಮ ಪತ್ರಗಳು

■ ಕೃಷ್ಣರಾಜ ಸಂಚಾರ ಪೊಲೀಸರ ಗಮನಕ್ಕೆ!

ಮಾನ್ಯರೆ,

ಮೈಸೂರಿನ ಜಯನಗರ ಎರಡನೇ ಮುಖ್ಯರಸ್ತೆ(ಕೃಷ್ಣದೇವರಾಯ ರಸ್ತೆ)ಯ ಮಧ್ಯದಲ್ಲಿ ಬಹುತೇಕ ಕಾರು ಚಾಲಕರು ತಮ್ಮ ಕಾರುಗಳನ್ನು ನಿಲ್ಲಿಸುವುದರಿಂದ ಈ ಭಾಗದಲ್ಲಿ ಪದೇಪದೇ ಟ್ರಾಫಿಕ್ ಜಾಮ್ ಆಗುತ್ತಿರುತ್ತದೆ.

ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುತ್ತಿರುತ್ತದೆ. ಕೋರ್ಟ್–ಕಚೇರಿಯ ಸಮಯದಲ್ಲಿ ಹಳೆಯ ಕೋರ್ಟಿನಿಂದ ಹೊಸ ಕೋರ್ಟಿನತ್ತ ಹೋಗಿ ಬರುವ ವಾಹನಗಳೆಲ್ಲಾ ಇದೇ ರಸ್ತೆಯನ್ನು ಅವಲಂಬಿಸಿರುತ್ತವೆ. ಈ ರಸ್ತೆಯ ನಡುವೆಯೇ ರಾಜಾರೋಷವಾಗಿ ಕಾರುಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುವವರ ಸಂಖ್ಯೆ ಹೆಚ್ಚಾಗಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಪ್ರತಿದಿನ ಅಡ್ಡಿ ಉಂಟಾಗುತ್ತಿರುತ್ತದೆ. ಒಂದೇ ಒಂದು ಕೆಎಸ್‌ಆರ್‌ಟಿಸಿ ಬಸ್ ಅಥವಾ ಲಾರಿ ಬಂದರೆ ಈ ರಸ್ತೆಯ ಕತೆ ಗೋವಿಂದ!!

ಕೃಷ್ಣರಾಜ ಸಂಚಾರ ಠಾಣೆಯ ಪೊಲೀಸರೂ ಸಹ ಇದೇ ರಸ್ತೆಯಲ್ಲಿ ಪ್ರತಿದಿನ ಸಂಚರಿಸುತ್ತಿರುತ್ತಾರೆ. ಆದರೂ ಸಹ ಈ ರಸ್ತೆಯ ಮಧ್ಯದಲ್ಲಿ ನಿಂತಿರುವ ಕಾರುಗಳಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದರೂ ಸಹ ಯಾವುದೇ ಕ್ರಮ ಜರುಗಿಸದಿರುವುದು ಆಶ್ಚರ್ಯ ತಂದಿದೆ.

ಈ ಕೂಡಲೇ ಕೃಷ್ಣರಾಜ ಸಂಚಾರ ಪೊಲೀಸರು ಎಚ್ಚೆತ್ತು ಜಯನಗರ ಎರಡನೇ ಮುಖ್ಯರಸ್ತೆಯ ಮಧ್ಯದಲ್ಲಿ ಕಾರುಗಳನ್ನು ನಿಲ್ಲಿಸಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸುವವರ ವಿರುದ್ಧ ಕ್ರಮ ಜರುಗಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

■ ಕ್ರೀಡೆಗೆ ಸಿಗುವ ಸ್ಥಾನಮಾನ ಜಾನಪದ, ರಂಗಭೂಮಿ ಕ್ಷೇತ್ರಕ್ಕೆ ಯಾಕಿಲ್ಲ?

ಮಾನ್ಯರೆ,

ಪ್ರಸಕ್ತ ಬಜೆಟ್‌ನಲ್ಲಿ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆಗೆ 55 ಕೋಟಿ ರೂ. ಅನುದಾನ ಘೋಷಿಸಲಾಗಿದೆ. ರಾಜ್ಯದ ಪೊಲೀಸ್ ಮತ್ತು ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ ಪದಕ ವಿಜೇತ ಕ್ರೀಡಾಪಟುಗಳಿಗೆ ಗ್ರೂಪ್ ಬಿ ಉದ್ಯೋಗಗಳಿಗೆ ನೇಮಿಸಲಾಗುತ್ತದೆ. ಆದರೆ ಕ್ರೀಡಾ ಕ್ಷೇತ್ರದಲ್ಲಿ ಸಿಗುವ ಸ್ಥಾನಮಾನ ಜಾನಪದ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ಪದಕ ಗಳಿಸಿದ ಕಲಾವಿದರಿಗೆ ಯಾಕೆ ಸಿಗುತ್ತಿಲ್ಲ.

ಉದಾಹರಣೆಗೆ ಎನ್. ಅಂಕರಾಜು ಆದ ನಾನು ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ 2016ರಲ್ಲಿ ಲಕ್ನೋದಲ್ಲಿ ನಡೆದ ಅಂತರಾಷ್ಟ್ರೀಯ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳಿಸಿ ರಾಜ್ಯಕ್ಕೆ ಕೀರ್ತಿ ತಂದಿರುವೆ. ಇದನ್ನು ಯಾವ ಸಂಸ್ಥೆಯಾಗಲಿ, ಸರ್ಕಾರವಾಗಲಿ ಗುರುತಿಸಲು ವಿಫಲವಾಗಿದೆ. ದಯಮಾಡಿ ಕ್ರೀಡೆಗೆ ಸಿಗುವ ಗೌರವ ಸ್ಥಾನಮಾನ ಜಾನಪದ ಮತ್ತು ರಂಗಭೂಮಿ ಕ್ಷೇತ್ರಕ್ಕೆ ಸಿಗುವಂತೆ ಮುಖ್ಯಮಂತ್ರಿಗಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಗಮನ ಹರಿಸಬೇಕೆಂದು ವಿನಂತಿ.

–ಅಂಕರಾಜು ಎನ್, ಹೊಸಮಾಲಂಗಿ, ಕೊಳ್ಳೇಗಾಲ

■ ಬಜೆಟ್‌ನಲ್ಲಿ ದೂರದೃಷ್ಟಿ ಬೇಕಿತ್ತು?

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯ 14ನೇ ಬಾರಿಗೆ 3,27,000 ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದು, 5 ಗ್ಯಾರಂಟಿಗಳ ಜೊತೆಗೆ ಬ್ರಾಂಡ್ ಬೆಂಗಳೂರು, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಶಿಕ್ಷಣ, ಕೈಗಾರಿಕೆ ಇತ್ಯಾದಿ ಸೇರಿದಂತೆ ಬಜೆಟ್ ಮೇಲ್ನೋಟಕ್ಕೆ ಸರ್ವರಿಗೂ ಸಮಾನ ಅನಿಸಬಹುದು. ಆದರೆ ಕೆಲ ಯೋಜನೆಗಳು ಮಾತ್ರ ತಾತ್ಕಾಲಿಕ ಸಮಾಧಾನ ನೀಡಿದಂತಿದೆ. 5 ಗ್ಯಾರಂಟಿ ಯೋಜನೆಗಳ ಉದ್ದೇಶ ಒಳ್ಳೆಯದು. ಆದರೆ ಅದು ಕೇವಲ ಅವಶ್ಯಕತೆ ಇರುವ ಜನರಿಗೆ ಸೀಮಿತವಾಗಿದ್ದರೆ ಒಳಿತಾಗುತ್ತಿತ್ತು. ಮಕ್ಕಳಿಗೆ ಆಸ್ತಿ ಮಾಡುವ ಬದಲು, ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡಬೇಕು ಎನ್ನುವ ಮಾತಿನಂತೆ ಸರ್ಕಾರ ನಿರುದ್ಯೋಗಿಗಳಿಗೆ 3 ಸಾವಿರ ಹಣ ಸಮಾಧಾನಕರ ಬಹುಮಾನ ಕೊಟ್ಟಂತೆ. ಇದಕ್ಕೆ ಪರ್ಯಾಯವಾಗಿ ಉತ್ಸಾಹಿ ಯುವ ಪ್ರತಿಭೆಗಳ ಸ್ಟಾರ್ಟ್‌ಅಪ್ ಐಡಿಯಾಗಳಿಗೆ ಪ್ರೋತ್ಸಾಹ, ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಬೇಕು. ಹೀಗೆ ಸರ್ಕಾರಿ ದೂರದೃಷ್ಟಿಯತ್ತ ಚಿಂತಿಸಿದಾಗ ಸಾಲದ ಹೊರೆ ಕಡಿಮೆಯಾಗುವುದರ ಜೊತೆಗೆ ನಮ್ಮ ರಾಜ್ಯ ಪ್ರಗತಿಯ ವೇಗವು ಹೆಚ್ಚಿಸಬಹುದು.

– ಆನಂದ ಜೇವೂರ್, ಕಲಬುರಗಿ

■ ದೊಡ್ಡ ಅಂಚೆ ಪೆಟ್ಟಿಗೆ ಅಳವಡಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರದಲ್ಲಿರುವ ಗೊಬ್ಬಳಿಮರ ವೃತ್ತವು ಬಡಾವಣೆಯ ಪ್ರಮುಖ ಸ್ಥಳವಾಗಿದೆ. ಜೆ.ಪಿ.ನಗರದ ಅಂಚೆ ಕಚೇರಿಯ ಮುಂಭಾಗ ದೊಡ್ಡ ಅಂಚೆ ಪೆಟ್ಟಿಗೆಯನ್ನು ಅಳವಡಿಸಲಾಗಿದೆ. ಇದನ್ನು ಹೊರತುಪಡಿಸಿ ನನಗೆ ತಿಳಿದಂತೆ ಸುತ್ತಮುತ್ತ ಬೇರೆ ಸ್ಥಳದಲ್ಲಿ ಅಂಚೆ ಪೆಟ್ಟಿಗೆ ಇರುವುದಿಲ್ಲ. ಗೊಬ್ಬಳಿ ಮರ ತಂಗುದಾಣದಲ್ಲಿ ಅಳವಡಿಸಿರುವ ಅಂಚೆ ಪೆಟ್ಟಿಗೆಯು ಚಿಕ್ಕಗಾತ್ರದ್ದಾಗಿದ್ದು, ದೊಡ್ಡ ಲಕೋಟೆಗಳನ್ನು ಈ ಪೆಟ್ಟಿಗೆಯಲ್ಲಿ ಹಾಕಲು ಕಷ್ಟವಾಗುತ್ತದೆ ಮತ್ತು ಹೆಚ್ಚು ಪತ್ರಗಳನ್ನು ಈ ಪೆಟ್ಟಿಗೆಯಲ್ಲಿ ಹಾಕಲು ಸಾಧ್ಯವಿರುವುದಿಲ್ಲ. ಗೊಬ್ಬಳಿಮರ ವೃತ್ತದಲ್ಲಿ ಅನೇಕ ಬ್ಯಾಂಕುಗಳು, ಖಾಸಗಿ ಕಚೇರಿಗಳು ಮತ್ತು ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿವೆ.

ಆದಕಾರಣ ಸಂಬಂಧಪಟ್ಟ ಅಂಚೆ ಇಲಾಖೆಯವರು ದಯಮಾಡಿ ಇತ್ತ ಗಮನಹರಿಸಿ ಗೊಬ್ಬಳಿ ಮರ ವೃತ್ತದ ತಂಗುದಾಣದಲ್ಲಿ ಅಳವಡಿಸಿರುವ ಚಿಕ್ಕ ಅಂಚೆ ಪೆಟ್ಟಿಗೆಯನ್ನು ಬದಲಾಯಿಸಿ, ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯ ಮುಂಭಾಗ ಅಥವಾ ಸೂಕ್ತವಾದ ಸ್ಥಳವನ್ನು ಗುರುತಿಸಿ ದೊಡ್ಡ ಅಂಚೆ ಪೆಟ್ಟಿಗೆಯನ್ನು ಆದಷ್ಟು ಶೀಘ್ರ ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

■ ಚಾಮರಾಜ ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ನೂತನ ಸರ್ಕಾರ ಅಧಿಕಾರಕ್ಕೆ ಬಂದು ತಿಂಗಳುಗಳೇ ಕಳೆದಿವೆ. ಚಾಮರಾಜ ಕ್ಷೇತ್ರದಲ್ಲಿ ಅನಧಿಕೃತ ಕ್ಲಬ್‌ಗಳು ನಾಯಿ ಕೊಡೆಯಂತೆ ತಲೆ ಎತ್ತಿವೆ. ಅನೇಕ ಸಂಸಾರಗಳು ಜೂಜಿನಿಂದ ಹಣ ಕಳೆದುಕೊಂಡು ಜೀವ ಮತ್ತು ಜೀವನ ಎರಡೂ ಕಳೆದುಕೊಂಡು ಬೀದಿಗೆ ಬರುತ್ತಿದ್ದಾರೆ. ಮಾಜಿ ಶಾಸಕರಾದ ಎಲ್. ನಾಗೇಂದ್ರ ಅವರು ಸಹ ಈ ಬಗ್ಗೆ ಪತ್ರಿಕೆಗಳಲ್ಲಿ ದನಿ ಎತ್ತಿದ್ದಾರೆ. ಗೃಹ ಸಚಿವರು ಹಾಗೂ ಚಾಮರಾಜ ಕ್ಷೇತ್ರದ ಶಾಸಕರು ಇದಕ್ಕೆಲ್ಲಾ ಕಡಿವಾಣ ಹಾಕಿ ಚಾಮರಾಜ ಕ್ಷೇತ್ರದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಸುವಂತೆ ಕ್ರಮ ಕೈಗೊಳ್ಳಬೇಕು.

– ನೊಂದ ನಾಗರಿಕರು, ಮೈಸೂರು.

ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದಿಂದ ಸಿಗುವುದೇ ಚಾಮುಂಡಿಬೆಟ್ಟದ ನೈಸರ್ಗಿಕ ಪರಿಸರ ಸಂರಕ್ಷಣೆ 'ವರ'





ಮೈಸೂರು, ಜುಲೈ 8– ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ನಿನ್ನೆ ಮಂಡಿಸಿದ 2023–24ನೇ ಸಾಲಿನ ರಾಜ್ಯ ಬಜೆಟ್ಟಿನಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವ ಕುರಿತು ಘೋಷಣೆ ಮಾಡಿದ್ದಾರೆ. ಹಲವು ವರ್ಷಗಳ ಬೇಡಿಕೆಯಾಗಿದ್ದ ಪ್ರಾಧಿಕಾರ ರಚನೆ ನನಸಾಗುತ್ತಿರುವುದರಿಂದ ಚಾಮುಂಡಿ ಬೆಟ್ಟ ಹಾಗೂ ಸುತ್ತಮುತ್ತಲ ಪ್ರದೇಶಗಳ ಸುಸ್ಥಿರ ಅಭಿವೃದ್ಧಿಗೆ ಅನುಕೂಲವಾಗಲಿದೆ ಹಾಗೂ ಪ್ರವಾಸೋದ್ಯಮ ಕೂಡ ಪ್ರಗತಿ ಸಾಧಿಸುವ ನಿರೀಕ್ಷೆ ಇದೆ.

ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರವು ಮೈಸೂರಿನ ಚಾಮುಂಡೇಶ್ವರಿಯ ಅಸಂಖ್ಯಾತ ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವತ್ತ ಗಮನಹರಿಸಲಿದೆ ಎಂದು ಸಿದ್ಧರಾಮಯ್ಯ ಹೇಳಿದರು. ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರೂ ಪ್ರಾಧಿಕಾರ ಯಾವಾಗ ಸ್ಥಾಪನೆಯಾಗುತ್ತದೆ ಅಥವಾ ಅದರ ಅಧಿಕಾರವೇನು ಅಥವಾ ಅದರ ಕಾರ್ಯವೈಖರಿ ಏನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮೈಸೂರಿನಲ್ಲಿ ಚಾಮುಂಡಿ ಬೆಟ್ಟದ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಶಾಸನಬದ್ಧ ಸಂಸ್ಥೆಯಾದ ಪ್ರಾಧಿಕಾರ ಸ್ಥಾಪನೆಗೆ ಹಲವಾರು ವರ್ಷಗಳಿಂದಲೂ ಬೇಡಿಕೆ ಇತ್ತು.

ವೈವಿಧ್ಯಮಯ ಸಸ್ಯ ಸಂಪತ್ತು, ಮತ್ತು ಪ್ರಾಣಿಗಳ ನೆಲೆಯಾಗಿರುವ ಚಾಮುಂಡಿ ಬೆಟ್ಟದ ಅಮೂಲ್ಯ ಪರಿಸರವು ನಿರ್ಲಕ್ಷ್ಯದಿಂದ ಸಾಕಷ್ಟು ಅವನತಿಯತ್ತ ಸಾಗಿತ್ತು. ಮೈಸೂರಿನ ಅತ್ಯಂತ ಪ್ರಸಿದ್ಧ ಧಾರ್ಮಿಕ ಹಾಗೂ ಹೆಸರುವಾಸಿ ಪ್ರವಾಸಿ ತಾಣವೂ ಆಗಿರುವ ಚಾಮುಂಡಿ ಬೆಟ್ಟದ ಆಸುಪಾಸಿನಲ್ಲಿ ನಿರ್ಮಾಣ ಚಟುವಟಿಕೆಗಳೂ ಹೆಚ್ಚಾಗಿವೆ. ಇತ್ತೀಚಿನ ವರ್ಷಗಳಲ್ಲಿ ಬೆಟ್ಟದ ತಪ್ಪಲಿನಲ್ಲಿ ಭಾರೀ ಪ್ರಮಾಣದಲ್ಲಿ ಕಟ್ಟಡಗಳು ತಲೆ ಎತ್ತಿವೆ. ಇದು ಇಲ್ಲಿನ ಪರಿಸರದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂಬುದು ಪರಿಸರ ಪ್ರೇಮಿಗಳು ಹಾಗೂ ಕಾರ್ಯಕರ್ತರ ಆತಂಕವಾಗಿತ್ತು.

ಬೆಟ್ಟದ ಅಭಿವೃದ್ಧಿ, ಅದನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಯೋಜನಾಬದ್ಧವಾಗಿ ಕೊಂಡೊಯ್ಯುವ ಹಾಗೂ ಸೂಕ್ತ ರೀತಿಯಲ್ಲಿ ನಿರ್ವಹಿಸುವ ಜವಾಬ್ದಾರಿ ಈಗ ಪ್ರಾಧಿಕಾರದ ಮೇಲಿದೆ. ಬೆಟ್ಟದ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಮತೋಲಿತ ರೀತಿಯಲ್ಲಿ ಉತ್ತೇಜಿಸುವುದೂ ಈ ಪ್ರಾಧಿಕಾರದ ಹೊಣೆಯಾಗಿದೆ.

ಬೆಟ್ಟದ ಪಾವಿತ್ರ್ಯತೆ ಸಂರಕ್ಷಿಸಿ


ರಂಗರಾಜು

ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಹಾಗೂ ಪಾರಂಪರಿಕ ಸಂರಕ್ಷಣಾ ಸಮಿತಿಯ ಸದಸ್ಯರೂ ಆಗಿರುವ ಪ್ರೊ.ಎನ್.ಎಸ್. ರಂಗರಾಜು "ಮೈಸೂರು ಮಿತ್ರ"ನೊಂದಿಗೆ ಮಾತನಾಡಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯ ನಿರ್ಧಾರ ಸ್ವಾಗತಾರ್ಹ. ಆದರೆ ಈಗಿರುವ ಪ್ರಶ್ನೆ ಎಂದರೆ ಯಾವ ರೀತಿಯಲ್ಲಿ ಇದು ಕಾರ್ಯ ನಿರ್ವಹಿಸುತ್ತದೆ ಎಂಬುದಾಗಿದೆ ಎಂದರು.

ಚಾಮುಂಡಿ ಬೆಟ್ಟವನ್ನು ಪಾರಂಪರಿಕ ಪ್ರದೇಶ ಎಂದು ಘೋಷಿಸಲಾಗಿದೆ. ಇದರಲ್ಲಿ ನೈಸರ್ಗಿಕ ಪರಂಪರೆ, ಸಾಂಸ್ಕೃತಿಕ ಪರಂಪರೆ ಹಾಗೂ ಜೀವವೈವಿಧ್ಯ ಪರಂಪರೆ ಎಂಬ ಮೂರು ವಿಧದ ಪರಂಪರೆ ಇದೆ. ಇಲ್ಲಿರುವ ದೇವಾಲಯಗಳನ್ನು ಸ್ಮಾರಕಗಳು ಎಂದು ಘೋಷಿಸಲಾಗಿದೆ. ಇಲ್ಲಿನ ಐತಿಹಾಸಿಕ ಪ್ರಾಮುಖ್ಯತೆಯನ್ನೂ ನಾವು ಪರಿಗಣಿಸಬೇಕಾಗಿದೆ. 10ನೇ ಶತಮಾನದ ಗಂಗರ ಕಾಲದ ಶಾಸನಗಳು ಹಾಗೂ ಇಲ್ಲಿ ಅತ್ಯಂತ ಪುರಾತನವಾದ ಮಹಾಬಲೇಶ್ವರ ದೇಗುಲ ಕೂಡ ಇದೆ ಎಂದು ಪ್ರೊ.ರಂಗರಾಜು ಹೇಳಿದ್ದಾರೆ.

ನಾವು ಇಲ್ಲಿ ಮತ್ತೊಂದು ಪ್ರಮುಖ ವಿಷಯವನ್ನು ಪರಿಗಣಿಸಬೇಕಾಗಿದೆ. ಈ ಪ್ರದೇಶವನ್ನು ನಾವು ಧಾರ್ಮಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕೇ ಹೊರತು ವಾಣಿಜ್ಯ ಕೇಂದ್ರವನ್ನಾಗಿ ಅಲ್ಲ. ನನ್ನ ಆತಂಕ ಎಂದರೆ ಈ ಚಾಮುಂಡಿ ಬೆಟ್ಟವು ಮತ್ತೊಂದು ನಂದಿ ಬೆಟ್ಟ ಇಲ್ಲವೇ ಮಲೆ ಮಹದೇಶ್ವರದ ಬೆಟ್ಟ ಆಗಬಾರದು ಎಂಬುದಾಗಿದೆ. ಇಲ್ಲಿ ಅತಿ ಹೆಚ್ಚು ವಾಣಿಜ್ಯೀಕರಣ ಹಾಗೂ ಶೋಷಿತ ಪ್ರದೇಶವಾಗಿ ಇವು ಹಾಳಾಗಿವೆ ಎಂದು ಅವರು ತಿಳಿಸಿದರು.

ಅತ್ಯಂತ ಪ್ರಮುಖ ಮತ್ತು ಪ್ರಥಮ ಕೆಲಸ ಎಂದರೆ ಖಾಸಗಿ ಬಸ್‌ಗಳ ಸಂಚಾರ ನಿಷೇಧಿಸಬೇಕು. ಈಗ್ಗೆ 15 ವರ್ಷಗಳ ಹಿಂದೆಯೇ ಅಜಂತಾ ಎಲ್ಲೋರಾ ಗುಹೆಗಳು, ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮೇಲೆ ನಿಷೇಧಿಸಲಾಗಿತ್ತು. ವಿದ್ಯುತ್ ಚಾಲಿತ ಬಸ್‌ಗಳನ್ನು ಹಾಗೂ ಮಿನಿ ಬಸ್‌ಗಳ ಸೇವೆಯನ್ನು ಕೆಎಸ್‌ಆರ್‌ಟಿಸಿ ಆರಂಭಿಸಬೇಕು ಎಂದು ಪ್ರೊ ರಂಗರಾಜು ತಿಳಿಸಿದ್ದಾರೆ.

ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಿ


ಪರಶುರಾಮಗೌಡ

ಪರಿಸರ ಬಳಗ ಹಾಗೂ ಚಾಮುಂಡಿ ಬೆಟ್ಟ ಉಳಿಸಿ ಸಮಿತಿಯ ಪರಶುರಾಮ ಗೌಡ ಮಾತನಾಡಿ, ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ನಮ್ಮ ಬಹುದಿನಗಳ ಬೇಡಿಕೆಯಾಗಿತ್ತು. ಸದ್ಯ ಈ ಬೆಟ್ಟದ ಉಸ್ತುವಾರಿಯನ್ನು ಮುಜರಾಯಿ ಇಲಾಖೆ, ಸ್ಥಳೀಯ ಗ್ರಾಮ ಪಂಚಾಯಿತಿ, ಪ್ರವಾಸೋದ್ಯಮ ಇಲಾಖೆ ನಿರ್ವಹಿಸುತ್ತಿದೆ. ಆದರೆ ಮೂರರ ನಡುವೆ ಯಾವುದೇ ಸಮನ್ವಯತೆ ಇಲ್ಲ. ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಲು ನಿಯಂತ್ರಣ ಪ್ರಾಧಿಕಾರದ ವ್ಯಾಪ್ತಿಯೊಳಗೆ ಎಲ್ಲವೂ ಇದ್ದರೆ ಒಳಿತು. ಈ ಪ್ರಾಧಿಕಾರದ ಮುಖ್ಯ, ಪ್ರಾಥಮಿಕ ಉದ್ದೇಶ ಸುಸ್ಥಿರ ಹಾಗೂ ಸಮಗ್ರ ಅಭಿವೃದ್ಧಿಯಾ ಗಿರಬೇಕು. ಜತೆಗೆ ಬೆಟ್ಟದ ಭೌಗೋಳಿಕತೆ, ಸೌಂದರ್ಯ ಮತ್ತು ಧಾರ್ಮಿಕ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು.

ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ರಚನೆ ಸ್ವಾಗತಾರ್ಹ



ಮೈಸೂರು,ಜು.8(ಆರ್‌ಕೆ)–ಶ್ರೀಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ನಿರ್ಧಾರ ಸ್ವಾಗತಾರ್ಹ ಎಂದು ಸಂಸದ ಪ್ರತಾಪ್ ಸಿಂಹ ಪ್ರತಿಕ್ರಿಯಿಸಿದ್ದಾರೆ. ಬಜೆಟ್‌ನಲ್ಲಿ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ಪ್ರಸ್ತಾಪಿಸಿರುವುದು ನಿಸರ್ಗ ತಾಣದ ಚಾಮುಂಡಿಬೆಟ್ಟದಲ್ಲಿ ನಿಯಮ ಉಲ್ಲಂಘಿಸಿ ಅಡ್ಡಾದಿಡ್ಡಿಯಾಗಿ ಬೆಳವಣಿಗೆಯಾಗುತ್ತಿರುವುದನ್ನು ತಡೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಅಲ್ಲಿನ ಗ್ರಾಮ ಪಂಚಾಯ್ತಿಯಾಗಲೀ, ಅರಣ್ಯ, ಪಾರಂಪರಿಕ, ಧಾರ್ಮಿಕ ದತ್ತಿ, ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾಡಳಿತ ಚಾಮುಂಡಿಬೆಟ್ಟದ ನಿಸರ್ಗ ಪರಿಸರವನ್ನು ಉಳಿಸಿ ಯೋಜನಾಬದ್ಧ ಅಭಿವೃದ್ಧಿಗೆ ಗಮನಹರಿಸುವುದಿಲ್ಲ. ಅದಕ್ಕೆಂದೇ ಪ್ರತ್ಯೇಕ ಪ್ರಾಧಿಕಾರ ರಚನೆಯಾದಲ್ಲಿ ಒತ್ತುವರಿ, ನಿಯಮ ಉಲ್ಲಂಘಿಸಿ ಕಟ್ಟಡಗಳ ನಿರ್ಮಾಣ, ಅಭಿವೃದ್ಧಿ ಹೆಸರಲ್ಲಿ ಬೆಟ್ಟದ ನೈಸರ್ಗಿಕ ಸೌಂದರ್ಯ ಹಾಳಾಗುವುದನ್ನು ತಡೆಯಲು ಸಹಕಾರಿಯಾಗುತ್ತದೆ ಎಂದರು.

ಆದರೆ, ಪ್ರಾಧಿಕಾರ ಕೇವಲ ಬಜೆಟ್‌ಗಷ್ಟೇ ಸೀಮಿತವಾಗದೇ ಶೀಘ್ರ ಕಾರ್ಯರೂಪಕ್ಕೆ ತರಬೇಕು. ಸರ್ಕಾರದ ಅನುದಾನ ನೀಡಿ ರೂಪು–ರೇಷೆ ತಯಾರಿಸಿ ಅನುಷ್ಠಾನಗೊಳಿಸುವತ್ತ ಗಮನಹರಿಸಬೇಕೆಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಕೇಂದ್ರ ಸರ್ಕಾರವು 'ಪ್ರಸಾದ್' (Pilgrimage Rejuvenation and Spirituality Augmentation Drive) ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, 45.70 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಇಷ್ಟರಲ್ಲೇ ಪ್ರವಾಸೋದ್ಯಮ ಸೇರಿದಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದ ಬಳಿಕ ಚಾಮುಂಡಿಬೆಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಕೇಂದ್ರ ಸರ್ಕಾರವು ರಾಜ್ಯದ ಪ್ರವಾಸೋದ್ಯಮ ಇಲಾಖೆಗೆ ಅನುದಾನ ಬಿಡುಗಡೆ ಮಾಡಿರುವುದರಿಂದ ಉದ್ದೇಶಿತ ಅಭಿವೃದ್ಧಿ ಕಾಮಗಾರಿಗಳನ್ನು ಅಧಿಕಾರಿಗಳು ಅನುಷ್ಠಾನ ಮಾಡಬೇಕಿದೆ. ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರಕ್ಕೂ 'ಪ್ರಸಾದ್' ಯೋಜನೆಗೂ ಯಾವುದೇ ಸಂಬಂಧವಿಲ್ಲ. ಲಭ್ಯವಾಗುವ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಸಮನ್ವಯತೆ ಮೂಲಕ ಅಭಿವೃದ್ಧಿ ಮಾಡಬೇಕು ಎಂದು ಪ್ರತಾಪ್‌ಸಿಂಹ ತಿಳಿಸಿದರು.

ಈಗಾಗಲೇ ಸರಕಾರಕ್ಕೆ ಕರಡು ಸಲ್ಲಿಕೆ

ಶ್ರೀ ಬಸವರಾಜ ಬೊಮ್ಮಾಯಿಯವರು
ಗೌರವಾನ್ವಿತ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು.

ದಿನಾಂಕ: 11.10.2022

ಸನ್ಮಾನ್ಯರೇ,


ಸಾಂಸ್ಕೃತಿಕ ನಗರಿ ಮೈಸೂರಿಗೆ ಮುಕುಟ ಪ್ರಾಯವಾಗಿರುವ ಪ್ರಕೃತಿದತ್ತ ಚಾಮುಂಡಿಬೆಟ್ಟ ಸಹಜ ಸಂರಕ್ಷಣೆಗೆ 'ಪ್ರಾಧಿಕಾರ' ರಚನೆ ಅನಿವಾರ್ಯ ಎಂಬುದು ಮೈಸೂರು ಮಹಾಜನತೆಯ ಒತ್ತಾಸೆಯಾಗಿದ್ದು, ಈ ಮೇರೆಗೆ ವಿವಿಧ ಕ್ಷೇತ್ರದ ತಜ್ಞರು, ಜನಪ್ರತಿನಿಧಿಗಳು ಹಾಗೂ ಮೈಸೂರು ಕಳಕಳಿಯುಳ್ಳ ನಾಗರಿಕ ಮುಖಂಡರು ಸೇರಿ, ಸುದೀರ್ಘ ಚರ್ಚೆ, ಪರಾಮರ್ಶೆ ನಂತರ ಉದ್ದೇಶಿತ ಚಾಮುಂಡೇಶ್ವರಿ ಶ್ರೀಕ್ಷೇತ್ರ **ಪ್ರಾಧಿಕಾರ ಕಾಯ್ದೆ–2022** ಕರಡನ್ನು ರೂಪಿಸಿದ್ದು, ಇದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇವೆ.

ವಂದನೆಗಳೊಂದಿಗೆ,

ಚಾಮುಂಡಿಬೆಟ್ಟ ಸಹಜ ಸಂರಕ್ಷಣೆ ಪರ ಚಿಂತಕರು

(ಶ್ರೀ ಮೇ.ಜ. ಎಸ್.ಜಿ. ಒಂಬತ್ಕೆರೆ) sg9kere@live.com Mob : 9480475925 / 2975187	(ಶ್ರೀ ಭಾಮಿ ವಿ. ಶೆಣೈ) bhamysuman@gmail.com Mob: 8861096205	(ಶ್ರೀ ಚಂದ್ರಪ್ರಕಾಶ್) chandra.rep166@gmail.com Mob : 9845142770
(ಶ್ರೀ ಕೆ.ಬಿ. ಗಣಪತಿ, ಹಿರಿಯ ಪತ್ರಕರ್ತರು) kbg@starofmysore.com Mob : 9008010294	(ಶ್ರೀ ಪ್ರತಾಪ್ ಸಿಂಹ, ಸಂಸದರು) Mob: 8277219999	(ಶ್ರೀ ಜಿ.ಟಿ. ದೇವೇಗೌಡ, ಶಾಸಕರು) gtdevegowda1949@gmail.com Mob : 9900260968
(ಶ್ರೀ ಎಸ್.ಎ. ರಾಮದಾಸ್, ಶಾಸಕರು) Mob : 9742480855	(ಶ್ರೀ ನಾಗೇಂದ್ರ, ಶಾಸಕರು) Mob: 7760589999	(ಶ್ರೀ ಎಂ.ಕೆ. ಸೋಮಶೇಖರ್, ಮಾಜಿ ಶಾಸಕರು) Mob : 9448042005
(ಶ್ರೀ ಡಿ. ಮಾದೇಗೌಡ, ಮಾಜಿ ಶಾಸಕರು) Mob : 9945329698	(ಶ್ರೀ ಕೌಟಿಲ್ಯ ರಘು) kvraghu67@gmail.com Mob : 9448061101	(ಶ್ರೀ ಪರಶುರಾಮೇಗೌಡ) Mob: 9686772661/9483526611
(ಶ್ರೀ ಯು.ಎನ್. ರವಿಕುಮಾರ್, ಪರಿಸರವಾದಿ) Ph : 0821-2544014	(ಶ್ರೀ ಗೋವಿಂದ) Mob: 9448403326	(ಶ್ರೀ ಎಂ. ಗೋವಿಂದೇಗೌಡ) mgovindegowda@gmail.com Mob : 9972124844

ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಲಾದ 15 ಮಂದಿಯ ಸಹಿಯುಳ್ಳ ಕರಡಿನ ಮುಖಪುಟ


ಒಂಬತ್ಕೆರೆ

ಮೈಸೂರು: ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ಅವರು ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯ ಘೋಷಣೆಯನ್ನು ಸ್ವಾಗತಿಸಿದ್ದು, ಇದೊಂದು ಅಭಿವೃದ್ಧಿ ಪೂರಕ ಬೆಳವಣಿಗೆ ಎಂದು ಹೇಳಿದ್ದಾರೆ.

ಬೆಟ್ಟದ ಸಮಗ್ರ ಅಭಿವೃದ್ಧಿಗೆ ಸ್ಪಷ್ಟವಾದ ಮಾರ್ಗಸೂಚಿ ಮತ್ತು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಗುರಿಯೊಂದಿಗೆ ನಾವು ನಿರಂತರ ಬೇಡಿಕೆಯನ್ನು ಸಲ್ಲಿಸುತ್ತಾ ಬಂದಿದ್ದೆವು.

ಚಾಮುಂಡಿ ಬೆಟ್ಟವನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಅಥವಾ ಇಲ್ಲಿ ಕಟ್ಟಡಗಳ ನಿರ್ಮಿಸುವ ಅಭಿವೃದ್ಧಿ ಯೋಜನೆಗಳಿಗೆ ಅವಕಾಶ ನೀಡಬಾರದು. ಬದಲಾಗಿ, ಬೆಟ್ಟದ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವತ್ತ ಹೆಚ್ಚು ಗಮನಹರಿಸಬೇಕು ಎಂದು ಅವರು ತಿಳಿಸಿದರು.

"ವಾಸ್ತವವಾಗಿ, ನಾವು "ಸ್ಟಾರ್ ಆಫ್ ಮೈಸೂರ್" ಮತ್ತು "ಮೈಸೂರು ಮಿತ್ರ" ಸಂಸ್ಥಾಪಕ–ಸಂಪಾದಕರಾದ ಕೆ.ಬಿ ಗಣಪತಿ ಅವರ ಅತೀವ ಆಸಕ್ತಿ ಹಾಗೂ ಸಹಕಾರದೊಂದಿಗೆ ಕರಡು ತಯಾರಿಸಿದ್ದೆವು. ಚಾಮುಂಡೇಶ್ವರಿ ಶ್ರೀ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ) ಕರಡು ಸಿದ್ಧಪಡಿಸಿ 10 ತಿಂಗಳ ಹಿಂದೆಯೇ ಅಂದಿನ ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ ಸರ್ಕಾರ ಈ ಬಗ್ಗೆ ಏನೂ ಮಾಡಿಲ್ಲ ಮತ್ತು ಕರಡು ಸಹ ಕೆಲವು ಅಧಿಕಾರಿಗಳ ಮೇಜಿನ ಮೇಲೆ ಬಿದ್ದಿತ್ತು. ನಾವು ಈಗ ಆ ಕರಡನ್ನು ಮತ್ತೆ ಮಂಡಿಸಲು ಬಯಸುತ್ತೇವೆ. ಏಕೆಂದರೆ ಬಜೆಟ್ ಅನುದಾನವನ್ನು ಬಳಸಿಕೊಂಡು ಚಾಮುಂಡಿ ಬೆಟ್ಟದಲ್ಲಿ ಧಾರ್ಮಿಕ ಅಥವಾ ಯಾತ್ರಾ ಪ್ರವಾಸೋದ್ಯಮಕ್ಕೆ ಮಾತ್ರ ವಿನಿಯೋಗಿಸಿಕೊಳ್ಳಬೇಕಿದೆ. ಯಾವುದೇ ಕಾರಣಕ್ಕೂ ವಾಣಿಜ್ಯ ಪ್ರವಾಸೋದ್ಯಮಕ್ಕೆ ಅದನ್ನು ಬಳಸಬಾರದು. ಈ ಬಗ್ಗೆ ಒಂದು ಖಚಿತತೆ ಬೇಕು ಎಂದು ಒಂಬತ್ಕೆರೆ ಅಭಿಪ್ರಾಯಪಟ್ಟಿದ್ದಾರೆ.

"ನಾವು ವಿವರವಾದ ಕರಡು ಮಸೂದೆಯನ್ನು ಸಿದ್ಧಪಡಿಸಿದ್ದೇವೆ. ಈ ಕರಡು ಕೆ.ಬಿ.ಗಣಪತಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ. ದೇವೇಗೌಡ, ಪರಿಸರ ಬಳಗ ಮತ್ತು ಚಾಮುಂಡಿಬೆಟ್ಟ ಉಳಿಸಿ ಸಮಿತಿಯ ಪರಶುರಾಮಗೌಡ ಹಾಗೂ ಜಲ ಸಂರಕ್ಷಣಾ ತಜ್ಞ ಯು.ಎನ್.ರವಿಕುಮಾರ್ ಅವರೊಂದಿಗೆ ಸುದೀರ್ಘ ಸಮಾಲೋಚನೆ ಕೂಡ ನಡೆಸಿದ್ದೆವು. ನಾಲ್ಕು ವರ್ಷಗಳ ಹಿಂದೆಯೇ ನಾನು ಕರಡು ಸಿದ್ಧಪಡಿಸಿದ್ದೆ ಮತ್ತು ಅದನ್ನು ಸರ್ಕಾರಕ್ಕೆ ಕಳುಹಿಸುವ ಮೊದಲು ಹಲವು ಅಂಶಗಳನ್ನು ಪರಾಮರ್ಶಿಸಿ ಅಂತಿಮ ರೂಪವನ್ನು ನೀಡಲಾಗಿತ್ತು ಎಂದು ಒಂಬತ್ಕೆರೆ ಹೇಳಿದರು.

ಮನಸೂರೆಗೊಂಡ ಅಮೋಘ ನಾಟ್ಯ ಪ್ರದರ್ಶನ



ಮೈಸೂರು, ಜು.8(ಎಂಕೆ)– ಗುರುವೆಂಬ ದೀಪದ ಬೆಳಕಿನಲ್ಲಿ ಸಾಗಿದರೆ ಯಶಸ್ಸು ತಾನಾಗಿಯೇ ದೊರೆಯುತ್ತದೆ ಎಂಬುದನ್ನು ತಿಳಿಸುವುದರ ಜೊತೆಗೆ ಅಮೋಘ ಭರತನಾಟ್ಯ ಪ್ರದರ್ಶನ ನೀಡಿದ ಮುಂಬೈನ ಖ್ಯಾತ ಭರತನಾಟ್ಯ ಕಲಾವಿದರು ಕಲಾಪ್ರೇಮಿಗಳ ಮನಗೆದ್ದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಶಾಂಭವಿ ಸ್ಕೂಲ್ ಆಫ್ ಡ್ಯಾನ್ಸ್ ವತಿಯಿಂದ ಆಯೋಜಿಸಿರುವ 'ಮೂಲಂ–2023(ದಿ ರೂಟ್ಸ್)' ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ನೃತ್ಯೋತ್ಸವದಲ್ಲಿ ಮುಂಬೈನ ಭರತನಾಟ್ಯ ಕಲಾವಿದರಾದ ದಿವ್ಯಾ ವಾರಿಯರ್ ಮೋಹಿನಿಯಟ್ಟಂ ನೃತ್ಯ ಪ್ರದರ್ಶನ ನೀಡಿದರೆ, ನಮ್ರತಾ ಮೆಹತಾ ಒಡಿಸ್ಸಿ ಹಾಗೂ ಪವಿತ್ರ ಕೃಷ್ಣಭಟ್ ಭರತನಾಟ್ಯಂ ಪ್ರಸ್ತುತಪಡಿಸಿದರು. ಭರತನಾಟ್ಯ ನೃತ್ಯ ಪ್ರದರ್ಶನಕ್ಕೂ ಮುನ್ನ ತಾವು ಪಡೆದ ಭರತನಾಟ್ಯ ಶಿಕ್ಷಣ ಹಾಗೂ ತಮ್ಮ ಗುರುಗಳ ಪರಿಚಯ ಮಾಡಿಕೊಟ್ಟ ಕಲಾವಿದರು, ಗುರು ಪರಂಪರೆಯ ಮಹತ್ವ ತಿಳಿಸಿಕೊಟ್ಟರು. ಗುರುಗಳ ಮಾರ್ಗದರ್ಶನ ಹಾಗೂ ಏಕಾಗ್ರತೆಯಿಂದ ಹೊಸತನ್ನು ಕಲಿಯಲು ಸಾಧ್ಯ. ಕಲಿಕೆ ಎಂಬುದು ಗುರು ಪರಂಪರೆಯ ತತ್ವದ ಮೇಲೆ ನಿಂತಿದೆ ಎಂದು ತಿಳಿಸಿಕೊಟ್ಟರು.

ಉದ್ಘಾಟನೆ: ಇದೇ ವೇಳೆ ಹಿರಿಯ ಸುಗಮ ಸಂಗೀತ ಕಲಾವಿದೆ ಹೆಚ್.ಆರ್.ಲೀಲಾವತಿ 'ಮೂಲಂ–2023(ದಿ ರೂಟ್ಸ್)' ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ನೃತ್ಯೋತ್ಸವವನ್ನು ಉದ್ಘಾಟಿಸಿದರು. ರಂಗಕರ್ಮಿ ಮಂಡ್ಯ ರಮೇಶ್, ಪದ್ಮಶ್ರೀ ಪುರಸ್ಕೃತರಾದ ಗೀತಾ ಚಂದ್ರನ್, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪುರಸ್ಕೃತರಾದ ವೈಜಯಂತಿ ಕಾಶಿ, ವಿದುಷಿ ತುಳಸಿ ರಾಮಚಂದ್ರ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಂತ್ರಸ್ತರ ರಕ್ಷಣೆಗೆ ಏರ್ ಆಂಬುಲೆನ್ಸ್ ಸೇವಾನಿರತ ಡಾ.ಶಾಲಿನಿ ನಲ್ವಾಡ್‌ಗೆ

ಡಾ.ಸಿ.ಎನ್.ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ

● ಏರ್ ಆಂಬುಲೆನ್ಸ್ ಸೇವೆಗೆ ಸುಮಲತಾ ಸಹಮತ ● ವೈದ್ಯಕೀಯ ಸೇವೆಯಲ್ಲಿ ಡಾ.ಶಾಲಿನಿ ಸಾಧನೆಗೆ ಪ್ರಶಂಸೆ



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸುತ್ತೂರು ಶ್ರೀಗಳ ಸಾನಿಧ್ಯದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಂಸದೆ ಸುಮಲತಾ ಅಂಬರೀಷ್, ಐಕ್ಯಾಟ್(ICATT) ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿ ಡಾ.ಶಾಲಿನಿ ನಲ್ವಾಡ್ ಅವರಿಗೆ 'ಡಾ.ಸಿ.ಎನ್.ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಿದರು.

ಮೈಸೂರು, ಜು.8(ಎಸ್‌ಬಿಡಿ)– ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ಸಂಭವಿಸಿದಾಗ ಹೆಲಿಕಾಪ್ಟರ್ ಮೂಲಕ ತುರ್ತು ವೈದ್ಯಕೀಯ ನೆರವು ನೀಡುವ ಪ್ರಯತ್ನ ನಡೆದರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲ ಇರಲಿದೆ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಮತ್ತು ನಗರ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ವತಿಯಿಂದ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸುತ್ತೂರು ಶ್ರೀಗಳ ಸಾನಿಧ್ಯದಲ್ಲಿ ಶನಿವಾರ ಐಕ್ಯಾಟ್ (ICATT) ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿ ಡಾ.ಶಾಲಿನಿ ನಲ್ವಾಡ್ ಅವರಿಗೆ 'ಡಾ.ಸಿ.ಎನ್.ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ಡಾ.ಶಾಲಿನಿ ನಲ್ವಾಡ್ ಅವರು ಇಂಟರ್‌ನ್ಯಾಷನಲ್ ಕ್ರಿಟಿಕಲ್ ಕೇರ್ ಏರ್ ಟ್ರಾನ್ಸ್‌ಫರ್ ಟೀಮ್ (ICATT)' ಸಂಸ್ಥೆ ಸ್ಥಾಪಿಸಿ ಯಶಸ್ವಿಯಾಗಿ ಏರ್ ಆಂಬುಲೆನ್ಸ್ ಸೇವೆ ಕಲ್ಪಿಸುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಎಮರ್ಜೆನ್ಸಿ ಹೆಲಿಕಾಪ್ಟರ್ ಸರ್ವೀಸ್ ನೀಡಬೇಕೆಂಬ ಗುರಿ ಹೊಂದಿದ್ದಾರೆ. ಹೈವೇಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸಿ ತುರ್ತು ಚಿಕಿತ್ಸೆ ಲಭ್ಯವಾಗದೆ ಜೀವ ಹಾನಿಯಾಗುತ್ತಿರುವುದರಿಂದ ಈ ಸೇವೆ ಅಗತ್ಯವಾಗಿದೆ. ಈ ಪ್ರಯತ್ನಕ್ಕೆ ನನ್ನ ಸಹಕಾರ ಇದ್ದೇ ಇರಲಿದೆ ಎಂದು ಭರವಸೆ ನೀಡಿದರು.

ಏರ್ ಆಂಬುಲೆನ್ಸ್ ಬಗ್ಗೆ ನನಗೂ ಅನುಭವವಾಗಿದೆ. 2014ರಲ್ಲಿ ಅಂಬರೀಷ್ ಅವರ ಆರೋಗ್ಯ ಸ್ಥಿತಿ ಗಂಭೀರವಾದಾಗ ಸಿಂಗಾಪೂರ್‌ಗೆ ಕರೆದೊಯ್ಯಬೇಕೆಂದು ವೈದ್ಯರು ಸಲಹೆ ನೀಡಿದಾಗ ಪರದಾಡಬೇಕಾಯ್ತು. ಏರ್ ಆಂಬುಲೆನ್ಸ್ ಸೇವೆ ಸುಲಭವಾಗಿ ಸಿಗುತ್ತಿರಲಿಲ್ಲ. ಎಷ್ಟೋ ದಾಖಲೆಗಳ ಪರಿಶೀಲನೆ, ಅನುಮತಿ ಇನ್ನಿತರ ಪ್ರಕ್ರಿಯೆ ಪೂರ್ಣಗೊಳಿಸುವಷ್ಟರಲ್ಲಿ ಒಂದು ವಾರ ಅಮೂಲ್ಯವಾದ ದಿನಗಳನ್ನು ಕಳೆದುಕೊಳ್ಳಬೇಕಾಯ್ತು. ನಮ್ಮ ದೇಶದಲ್ಲಿ ಈ ಸೇವೆ ಇರುವುದರಿಂದ ಸಂಕಷ್ಟದ ಸಮಯದಲ್ಲಿ ಭರವಸೆ ಉಳಿಯುತ್ತದೆ. ನಮ್ಮ ಕನ್ನಡತಿ, ಮಂಡ್ಯದ ಹೆಣ್ಣು ಈ ಸೇವೆಯನ್ನು ಯಶಸ್ವಿಯಾಗಿ ನೀಡುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಪ್ರಧಾನಿ ಮೋದಿ ಅವರು 'ಬೇಟಿ ಪಡಾವ್ ಬೇಟಿ ಬಚಾವ್(ಹೆಣ್ಣಿಗೆ ಕಲಿಸಿ ಹೆಣ್ಣನ್ನು ಉಳಿಸಿ) ಎಂದಿದ್ದಾರೆ. ಆದರೆ ನನಗಿಲ್ಲಿ 'ಬೇಟಿ ಪಡಾವ್, ಓ ಸಬ್ ಕೊ ಬಚಾಯಿಯೆ(ಹೆಣ್ಣಿಗೆ ಶಿಕ್ಷಣ ನೀಡಿದರೆ ಆಕೆ ಎಲ್ಲವನ್ನೂ ಉಳಿಸುತ್ತಾಳೆ) ಎನ್ನಿಸುತ್ತಿದೆ ಎಂದು ಬಣ್ಣಿಸಿದರು.

ಡಾ.ಶಾಲಿನಿ ನನಗೆ ಹೆಚ್ಚು ಪರಿಚಯವಿಲ್ಲ. ಆದರೆ ಇವರ ತಂದೆ ಮಂಡ್ಯ ಜಿಲ್ಲೆಯವರು, ಅಂಬರೀಷ್‌ಗೆ ಪರಿಚಿತರು. ಇವರ ಕುಟುಂಬದ ಬಗ್ಗೆ ಅಭಿಮಾನ, ಗೌರವ ಇದೆ. ಎರಡು ವಾರಗಳ ಹಿಂದಷ್ಟೇ ಶಾಲಿನಿ ಅವರನ್ನು ಭೇಟಿ ಮಾಡಿ, ಅರ್ಧ ಗಂಟೆ ಮಾತನಾಡಿದೆ. ಆಗ ಒಬ್ಬ ಮಹಿಳೆ ಮನಸ್ಸು ಮಾಡಿದರೆ ಯಾವ ಮಟ್ಟಕ್ಕೆ ಸಾಧನೆ ಮಾಡಬಹುದು ಎಂಬುದು ಅರಿವಾಯಿತು. ಸಾಮಾನ್ಯವಾಗಿ ಹೆಣ್ಣು ಮಕ್ಕಳು ಒಂದು ಹಂತದ ವಿದ್ಯಾಭ್ಯಾಸ ಮುಗಿಸಿದ ಬಳಿಕ ಅವರಿಗೆ ವಿವಾಹ ಮಾಡಿಬಿಡುತ್ತಾರೆ. ಇದು ನಮ್ಮ ಸಂಸ್ಕೃತಿಯಾದ್ದು, ತಪ್ಪು ಎನ್ನುತ್ತಿಲ್ಲ. ಆದರೆ ಪೋಷಕರ ಪ್ರೋತ್ಸಾಹ ಹಾಗೂ ಪತಿಯ ಬೆಂಬಲ ಸಿಗುವುದು ಅಪರೂಪ. ಹೀಗೆ ಕುಟುಂಬದ ಬೆಂಬಲವಿದ್ದಾಗ ಹೆಣ್ಣು ಯಾವ ಮಟ್ಟಕ್ಕೆ ಸಾಧಿಸಬಹುದು ಎಂಬುದಕ್ಕೆ ಡಾ.ಶಾಲಿನಿ ಬಹುದೊಡ್ಡ ನಿದರ್ಶನವಾಗಿದ್ದಾರೆ. ಯುಕೆಯಲ್ಲೇ ಸಾಕಷ್ಟು ಒಳ್ಳೆಯ ಅವಕಾಶಗಳಿದ್ದರೂ ನಮ್ಮ ದೇಶಕ್ಕೆ ವಾಪಸ್ಸಾಗಿ ಐಕ್ಯಾಟ್ ಸಂಸ್ಥೆ ಸ್ಥಾಪಿಸಿ, ಪರಿಶ್ರಮ, ಬದ್ಧತೆ, ವೃತ್ತಿ ಪ್ರೇಮದಿಂದ ಯಶಸ್ಸು ಸಾಧಿಸಿದ್ದಾರೆ. ನಿಜವಾದ ಸಾಧಕಿಯನ್ನು ಸನ್ಮಾನ ಮಾಡಿ ಗೌರವಿಸುವ ಮೂಲಕ ನನಗೆ ಗೌರವ ಸಿಕ್ಕಂತಾಗಿದೆ ಎಂದು ಪ್ರಶಂಸಿಸಿದರು.

ಇದೇ ಸಂದರ್ಭದಲ್ಲಿ ಸುತ್ತೂರು ಶ್ರೀಗಳು, ಡಾ.ಶಾಲಿನಿ ನಲ್ವಾಡ್ ಅವರ ಪೋಷಕರಾದ ನಾಗರಾಜಪ್ಪ ಹಾಗೂ ನಾಗಮಣಿ ಅವರನ್ನು ಅಭಿನಂದಿಸಿ, ಆಶೀರ್ವದಿಸಿದರು. ಚಿತ್ರದುರ್ಗದ ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಪ್ರಶಸ್ತಿ ಪ್ರಾಯೋಜಕರಾದ ಸುಧಾ ಮೃತ್ಯುಂಜಯಪ್ಪ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯ ಮೂಲದ ಡಾ.ಶಾಲಿನಿ ನಲ್ವಾಡ್, ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂಬಿಬಿಎಸ್, ಐರ್ಲೆಂಡಿನ ಕಾಲೇಜ್ ಆಫ್ ಅನಸ್ತೇಷಿಯಾದಿಂದ ಅರವಳಿಕೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಯು.ಕೆ.ರಾಯಲ್ ಕಾಲೇಜ್ ಆಫ್ ಅನೆಸ್ಥಟಿಸ್ಟ್‌ನಿಂದ ಸದಸ್ಯತ್ವ ಪಡೆದು ಅಲ್ಲಿಯೇ ಅನಸ್ತೇಷಿಯಾ ಕ್ರಿಟಿಕಲ್ ಕೇರ್ ಯೂನಿಟ್‌ನಲ್ಲಿ ಸೇವೆ ಸಲ್ಲಿಸಿದರು. ಸದ್ಯ ಐಕ್ಯಾಟ್ ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿಯಾಗಿದ್ದಾರೆ. ದಾನಿಗಳ ಅಂಗಾಂಗಗಳನ್ನು ಏರ್ ಆಂಬುಲೆನ್ಸ್ ಮೂಲಕ ಸಾಗಿಸಿದ್ದಾರೆ. ಏರೋ ಮೆಡಿಕಲ್ ಕಮಾಂಡೋಗಳಿಗೆ ತರಬೇತಿ ನೀಡಿದ್ದಾರೆ. ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಯವರನ್ನು ಏರ್ ಆಂಬುಲೆನ್ಸ್ ಮೂಲಕ ಚೆನ್ನೈಗೆ ಕರೆದೊಯ್ದು ಚಿಕಿತ್ಸೆ ನಂತರ ಮಠಕ್ಕೆ ವಾಪಸ್ ಕರೆತಂದಿದ್ದವರು ಇವರೇ.

ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮ

ಸಹಕಾರ ಸಚಿವ ಕೆ.ಎನ್.ರಾಜಣ್ಣ



ಮದ್ದೂರು, ಜು.8– ರಾಜ್ಯದಲ್ಲಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ಕ್ರಮ ವಹಿಸಲಾಗಿದ್ದು, ಈ ಸಂಬಂಧ ಅಧಿಕಾರಿಗಳು ಮತ್ತು ಸಹಕಾರ ಸದಸ್ಯರ ಜೊತೆ ಚರ್ಚೆ ನಡೆಸಿರುವುದಾಗಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಪಟ್ಟಣದ ಶಿವಪುರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ಪ್ರತಿ ಜಿಲ್ಲಾವಾರು ಸಭೆ ನಡೆಸಿ ಅಗತ್ಯ ಮಾಹಿತಿ ಸಂಗ್ರಹಿಸುವ ಮೂಲಕ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸುತ್ತಿರುವುದಾಗಿ ಹೇಳಿದರು.

ರೈತರನ್ನು ಆರ್ಥಿಕವಾಗಿ ಸದೃಢಗೊಳಿಸುವ ಸದುದ್ದೇಶದಿಂದ ಶೂನ್ಯ ಬಡ್ಡಿ ದರದಲ್ಲಿ 5 ಲಕ್ಷ ರೂ. ಸಾಲ, ಶೇ.3ರಂತೆ 10 ಲಕ್ಷ ನೀಡುತ್ತಿದ್ದ ಸಾಲವನ್ನು ಪ್ರಸಕ್ತ ದಿನಗಳಲ್ಲಿ 15 ಲಕ್ಷ ರೂ.ಗಳಿಗೆ ಏರಿಕೆ ಮಾಡುವ ಮೂಲಕ ಸಹಕಾರಿ ಸಂಘಗಳ ಬಂಧುಗಳು ಮತ್ತು ರೈತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿರುವುದಾಗಿ ತಿಳಿಸಿದರು.

ಮುಂದಿನ ದಿನಗಳಲ್ಲಿ ಸಹಕಾರ ಸಂಘಗಳಿಗೆ ಸರ್ಕಾರ ಮತ್ತಷ್ಟು ಸೌಲಭ್ಯ ಕಲ್ಪಿಸಲಿದ್ದು, ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸುವ ಸದುದ್ದೇಶ ತಮ್ಮ ಸರ್ಕಾರದ್ದಾಗಿದೆ. ಹಂತ–ಹಂತವಾಗಿ ಪರಿಶೀಲಿಸಿ ಯೋಜನೆಗಳನ್ನು ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಅನ್ನು ಜನರು ಸ್ವಾಗತಿಸಿರುವುದು ಸಂತಸದ ವಿಚಾರ. ಸರ್ವರಿಗೂ ಸಮಬಾಳು, ಸಮಪಾಲು ಕಾಂಗ್ರೆಸ್ ಉದ್ದೇಶವಾಗಿದ್ದು, ಇದರಿಂದ ರಾಜ್ಯ ಆರ್ಥಿಕ ಪ್ರಗತಿಯತ್ತ ಮುಖ ಮಾಡಲಿದೆ ಎಂದರು.

ವಿರೋಧ ಪಕ್ಷಗಳ ಟೀಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿರೋಧ ಪಕ್ಷದವರಿರುವುದೇ ಟೀಕೆ ಮಾಡಲು. ಅವರಿಗೆ ಏನು ಕೆಲಸವಿಲ್ಲದ ಕಾರಣ ಟೀಕೆ ಮತ್ತು ಆರೋಪಗಳಿಗೆ ಮುಂದಾಗಿದ್ದಾರೆ ಎಂದರು.

ಈ ವೇಳೆ ಮನ್‌ಮುಲ್ ನಿರ್ದೇಶಕ ಕದಲೂರು ರಾಮಕೃಷ್ಣ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗೀಗೌಡ, ಪುರಸಭೆ ಮಾಜಿ ಅಧ್ಯಕ್ಷ ಎಂ.ಪಿ.ಅಮರ್‌ಬಾಬು, ತಾಪಂ ಮಾಜಿ ಸದಸ್ಯ ಕೆ.ಆರ್.ಮಹೇಶ್, ಮುಖಂಡರಾದ ತಿಮ್ಮಣ್ಣ, ಕೆ.ಆರ್.ಅಭಿಷೇಕ್, ಎಂ.ಎಚ್. ಅವಿನಾಶ್, ಕರೀಗೌಡ, ಕಿರಣ್ ಇತರರಿದ್ದರು.

ಎಸ್‌ಟಿಜಿಯಲ್ಲಿ ಮಾನ್ಸೂನ್ ಮ್ಯಾರಥಾನ್‌ಗೆ ಸಿಎಸ್‌ಪಿ ಚಾಲನೆ



ಚಿನಕುರಳಿ, ಜು.8– ಇಲ್ಲಿನ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಮಾನ್ಸೂನ್ ಮ್ಯಾರಥಾನ್‌ಗೆ ಸಂಸ್ಥೆಯ ಅಧ್ಯಕ್ಷರೂ ಆದ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಪುತ್ರ ಸಿಇಓ ಸಿ.ಪಿ. ಶಿವರಾಜು ಚಾಲನೆ ನೀಡಿದರು.

ಎಸ್‌ಟಿಜಿ ಪಬ್ಲಿಕ್ ಶಾಲೆ ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ನಮ್ಮ ತಂದೆ ಸಿ.ಎಸ್.ಪುಟ್ಟರಾಜು ಅವರ ತಂದೆ–ತಾಯಿ ಸ್ಮರಣಾರ್ಥ ಈ ಮಾನ್ಸೂನ್ ಮ್ಯಾರಥಾನ್ ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು ಎಂದು ಸಲಹೆ ನೀಡಿದ ಅವರು ಈ ಮ್ಯಾರಥಾನ್‌ನಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಕೋರುವುದಾಗಿ ತಿಳಿಸಿದರು. ಶಾಲೆಯ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳು ಮಾನ್ಸೂನ್ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು. ಸುಮಾರು 6 ಕಿಮೀವರೆಗೆ ಈ ಮ್ಯಾರಥಾನ್ ಏರ್ಪಡಿಸಲಾಗಿತ್ತು ಶಾಲೆ ಮಂಭಾಗದಿಂದ ಹೊರಟ ಮ್ಯಾರಥಾನ್ ಕೆ.ಆರ್.ಪೇಟೆ–ಮೈಸೂರು ಮುಖ್ಯರಸ್ತೆ ಮೂಲಕ ಸಾಗಿ ಊರಿನ ಪ್ರಮುಖ ಬೀದಿಗಳ ಮೂಲಕ ಆಗಮಿಸಿ ಶಾಲೆ ಬಳಿಯೇ ಕೊನೆಗೊಂಡಿತು. ಮಕ್ಕಳ ಸುರಕ್ಷತೆ ಸೃಷ್ಟಿಯಿಂದ ಚಿನಕುರಳಿ ಉಪಠಾಣೆ ಸಿಬ್ಬಂದಿ ಬಂದೋಬಸ್ತ್ ಕೈಗೊಂಡಿದ್ದರು. ಈ ವೇಳೆ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿ ಉಪಸ್ಥಿತರಿದ್ದರು.

ಮ್ಯಾರಥಾನ್‌ನಲ್ಲಿ 5ನೇ, 6ನೇ ತರಗತಿ ವಿಭಾಗ, 7ನೇ ಮತ್ತು 8ನೇ ತರಗತಿ ವಿಭಾಗ ಹಾಗೂ 9ನೇ ಹಾಗೂ 10ನೇ ತರಗತಿ ವಿಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರನ್ನು ಒಳಗೊಂಡ ತಲಾ 5 ಮಂದಿಗೆ ಬಹುಮಾನವನ್ನು ಶಾಲೆಯ ಪ್ರಾಂಶುಪಾಲರಾದ ಮಾಚಮ್ಮ, ಆಡಳಿತಾಧಿಕಾರಿ ನಿವೇದಿತಾ ನಾಗೇಶ್ ವಿತರಿಸಿದರು.

ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ 700ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಸಿ.ಎಸ್.ಪುಟ್ಟರಾಜು ತಂದೆ–ತಾಯಿ ಸ್ಮರಣಾರ್ಥ ಮಾನ್ಸೂನ್ ಮ್ಯಾರಥಾನ್ ಆಯೋಜಿಸಲಾಗಿತ್ತು. ಈ ವೇಳೆ ಶಾಲೆ ಸಮನ್ವಯಾಧಿಕಾರಿ, ಶಿಕ್ಷಕ ವೃಂದ ಹಾಗೂ ಆಡಳಿತ ಸಿಬ್ಬಂದಿ ಇನ್ನಿತರರಿದ್ದರು.

ಹೆಚ್‌ಡಿಕೆಗೆ ಏಕವಚನ: ನರೇಂದ್ರಸ್ವಾಮಿ ವಿರುದ್ಧ ಆಕ್ರೋಶ



ಮಳವಳ್ಳಿ, ಜು.8– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಏಕವಚನ ಪದಬಳಕೆ ಮಾಡಿರುವ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರ ನಡೆಯನ್ನು ಖಂಡಿಸುತ್ತೇನೆ ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ತಿಳಿಸಿದರು.

ತಾಲೂಕಿನ ಮೂಗನಕೊಪ್ಪಲು ಗ್ರಾಮದ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಜನಸೇವೆ ಮೂಲಕ ನಾಡಿನ ಜನರ ಮನಗೆದ್ದಿರುವ ಹೆಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಮಳವಳ್ಳಿ ಶಾಸಕರು ಅಸಂಸದೀಯ ಪದಗಳನ್ನು ಬಳಸಿರುವುದು ಸರಿಯಲ್ಲ ಎಂದರು.

ನಮ್ಮ ತಪ್ಪುಗಳಿಂದ ಹಾಗೂ ಕಾಂಗ್ರೆಸ್‌ನ 5 ಗ್ಯಾರಂಟಿಗಳಿಂದ ಗೆದ್ದಿರುವ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರು ಹೆಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಏಕವಚನದಲ್ಲಿ ಮಾತನಾಡಿರುವುದು ಸರಿಯಲ್ಲ. ಕೂಡಲೇ ಅವರು ಕ್ಷಮೆಯಾಚಿಸಬೇಕು. ಇಲ್ಲದಿದ್ದರೇ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ನಿಮಗೆ 46 ಸಾವಿರ ಮತಗಳ ಅಂತರದ ಗೆಲುವು ತಲೆ ತಿರುಗುವಂತೆ ಮಾಡಿದ್ದು, ನಿಮ್ಮ ದುರಂಹಕಾರ ಮತ್ತು ಯೋಗ್ಯತೆ ಜನರಿಗೆ ಈಗ ಗೊತ್ತಾಗುತ್ತಿದೆ. 2010ರಲ್ಲಿ ಅನರ್ಹರಾಗಿದ್ದ ನೀವು ಯಾರ ಕಾಲು ಹಿಡಿದಿದ್ದೀರಿ ಎನ್ನುವುದು ಗೊತ್ತಿದೆ. ಅಂದು ನಿಮ್ಮ ಶಾಸಕ ಸ್ಥಾನ ಉಳಿಸಲು ಸುಪ್ರೀಂ ಕೋರ್ಟ್ ಹೋಗಲು ನೆರವಾಗಿದ್ದವರು ಕುಮಾರಸ್ವಾಮಿ ಎಂಬುದು ಗೊತ್ತಿಲ್ಲವೇ. ಜೆಡಿಎಸ್ ಬಗ್ಗೆ ಮಾತಾಡಲು ಯಾವ ಯೋಗ್ಯತೆ ಇದೆ. ಜೆಡಿಎಸ್ 19 ಸ್ಥಾನ ಗೆದ್ದಿರುವುದನ್ನು ಗೇಲಿ ಮಾಡಿರುವ ನೀವು ಲೋಕಸಭೆಯಲ್ಲಿ ಗೆದ್ದಿರುವ ಸ್ಥಾನಗಳು ಎಷ್ಟು ಎಂದು ಪ್ರಶ್ನಿಸಿದರು.

ಅಧಿಕಾರ ವಹಿಸಿಕೊಂಡ ತಕ್ಷಣ 5 ಗ್ಯಾರಂಟಿಗಳನ್ನು ನೀಡುತ್ತೇವೆಂದು ಹೇಳಿದ ಕಾಂಗ್ರೆಸ್ ಪಕ್ಷ ಅಧಿಕಾರ ಪಡೆದು ತಿಂಗಳು ಕಳೆಯುತ್ತಿದ್ದರೂ ಗ್ಯಾರಂಟಿಗಳನ್ನು ಈಡೇರಿಸಿಲ್ಲ. ಮೊದಲು ಜನರಿಗೆ ಕೊಟ್ಟ ಭರವಸೆ ಈಡೇರಿಸಲಿ ಎಂದರು.

ಈ ವೇಳೆ ಜೆಡಿಎಸ್ ಯುವ ಘಟಕ ಜಿಲ್ಲಾಧ್ಯಕ್ಷ ರವಿ ಕಂಸಾರ, ತಾಲೂಕು ಅಧ್ಯಕ್ಷ ವಿಶ್ವನಾಥ್, ಪುರಸಭೆ ಸದಸ್ಯರಾದ ಎಂ.ಟಿ.ಪ್ರಶಾಂತ್, ನಾಗೇಶ್, ತಾಲೂಕು ಘಟಕದ ಕಾರ್ಯಾಧ್ಯಕ್ಷ ಪುಟ್ಟಬುದ್ಧಿ, ಟೌನ್ ಘಟಕದ ಅಧ್ಯಕ್ಷ ಪ್ರಭು, ಮುಖಂಡರಾದ ನಾಗರಾಜು, ಮಲ್ಲೇಗೌಡ, ಮಹೇಶ್ ಸಿದ್ಧಾಚಾರಿ ಇದ್ದರು.

ಬಾಕಿ 25 ಕೋಟಿ ಹಲ್ಲಿಂಗ್ ಶುಲ್ಕ ಬಿಡುಗಡೆಗೆ ಆಗ್ರಹ

ಅನ್ನಭಾಗ್ಯಕ್ಕೆ ಅಕ್ಕಿ ನೀಡಲು ಅಕ್ಕಿ ಮಾಲೀಕರ ಸಂಘ ಸಿದ್ಧ: ಅಧ್ಯಕ್ಷ ರಮೇಶ್



ಕೆಆರ್.ಪೇಟೆ, ಜು.8– ಭತ್ತವನ್ನು ಹಲ್ಲಿಂಗ್ ಮಾಡಿ ಸರ್ಕಾರಕ್ಕೆ ಸರಬರಾಜು ಮಾಡಿರುವ ಹಲ್ಲಿಂಗ್ ಶುಲ್ಕದ ಬಾಕಿ 25 ಕೋಟಿ ರೂ.ಗಳನ್ನು ಕೂಡಲೇ ಸರ್ಕಾರ ಬಿಡುಗಡೆ ಮಾಡುವ ಮೂಲಕ ಸಂಕಷ್ಟದಲ್ಲಿರುವ 11 ಜಿಲ್ಲೆಗಳ 2 ಸಾವಿರ ಅಕ್ಕಿ ಗಿರಣಿ ಮಾಲೀಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮಂಡ್ಯ ಜಿಲ್ಲಾ ಅಕ್ಕಿಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಎಂ.ಎಸ್.ರಮೇಶ್ ಆಗ್ರಹಿಸಿದರು.

ಪಟ್ಟಣದ ಶ್ರೀಲಕ್ಷ್ಮಿ ರೈಸ್ ಮಿಲ್ ಆವರಣದಲ್ಲಿ ನಡೆದ ತಾಲೂಕು ಅಕ್ಕಿಗಿರಣಿ ಮಾಲೀಕರ ಸಂಘದ ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಅಕ್ಕಿ ಗಿರಣಿಗಳು ರೈತರಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ಅಕ್ಕಿ ಗಿರಣಿ ಬಿಡಿಭಾಗಗಳ ಬೆಲೆ ಗಗನಕ್ಕೇರಿದೆ. ಸೇವಾ ಭಾವನೆಯಿಂದ ಭತ್ತ ಹಲ್ಲಿಂಗ್ ಮಾಡುವ ಮೂಲಕ ರೈತರು ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಹಾಗಾಗಿ ಅಕ್ಕಿಗಿರಣಿ ಉದ್ಯಮವನ್ನು ಕೃಷಿ ಆಧಾರಿತ ಉದ್ಯಮ ಎಂದು ಪರಿಗಣಿಸಿ ಹೆಚ್ಚಾಗಿರುವ ರೈಸ್ ಮಿಲ್‌ಗಳ ವಿದ್ಯುತ್ ಬಿಲ್ ಅನ್ನು ಶೇ.50ರಷ್ಟು ಇಳಿಕೆ ಮಾಡಬೇಕು. ಇಲ್ಲದಿದ್ದರೆ ರೈಸ್‌ಮಿಲ್ ಮುಚ್ಚಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ಎಪಿಎಂಸಿ ಕಾಯ್ದೆಯಿಂದ ಅಕ್ಕಿ ಗಿರಣಿಗಳನ್ನು ಹೊರಗಿಡಬೇಕು ಎಂದ ಅವರು ಎಂಎಸ್‌ಪಿ ಪದ್ಧತಿಯಲ್ಲಿ ಕಳೆದೆರಡು ಸಾಲಿನಲ್ಲಿ 23 ಲಕ್ಷ ಟನ್ ಭತ್ತ ಖರೀದಿಸಿ, ಹಲ್ಲಿಂಗ್ ಮಾಡಿ ನಂತರ ಅಕ್ಕಿಯನ್ನು ಸರ್ಕಾರಕ್ಕೆ ನೀಡಲಾಗಿತ್ತು. ಆದರೆ ಅಧಿಕಾರಿಗಳ ಚಿತಾವಣೆಯಿಂದ ರೈಸ್ ಮಿಲ್‌ಗಳಿಗೆ ಹೊಣೆ ನೀಡದೇ ನೇರವಾಗಿ ಖರೀದಿ ಕೇಂದ್ರಗಳ ಮೂಲಕ ಅಧಿಕಾರಿಗಳೇ ಖರೀದಿ ಮಾಡಿದ್ದು ಕೇವಲ 2 ಲಕ್ಷ ಟನ್ ಭತ್ತವನ್ನು ಮಾತ್ರ. ಏಕೆಂದರೆ ಭತ್ತ ಕಟಾವು ವೇಳೆ ಖರೀದಿ ಕೇಂದ್ರ ಆರಂಭಿಸದೆ ಕೊನೆ ಹಂತದಲ್ಲಿ ಖರೀದಿ ಕೇಂದ್ರ ತೆರೆದ ಕಾರಣ ಕಡಿಮೆ ಖರೀದಿ ನಡೆದಿದೆ. ಭತ್ತ ಕಟಾವು ಸಮಯ ನಮ್ಮ ರೈಸ್‌ಮಿಲ್ ಮಾಲೀಕರಿಗೆ ತಿಳಿದಿರುವ ಕಾರಣ ರೈತರಿಂದ ಸಕಾಲದಲ್ಲಿ ಭತ್ತ ಖರೀದಿ ಮಾಡಿ ಸರ್ಕಾರಕ್ಕೆ ಅನ್ನಭಾಗ್ಯ ಯೋಜನೆಗೆ ಸಾಕಾಗುವಷ್ಟು ಅಕ್ಕಿಯನ್ನು ಕೇವಲ 34 ರೂ.ಗಳಿಗೆ ಕೊಡಲು ನಮ್ಮ ಕರ್ನಾಟಕ ರಾಜ್ಯ ಅಕ್ಕಿಗಿರಣಿ ಮಾಲೀಕರ ಸಂಘ ಸಿದ್ಧವಿದೆ ಎಂದರು.

ರೈಸ್‌ಮಿಲ್ ಮಾಲೀಕರ ಸಂಘದ ಮೂಲಕ ಖರೀದಿಸಿದರೆ ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬಹುದು. ಜೊತೆಗೆ ಉದ್ಯೋಗ ಸೃಷ್ಟಿಗೂ ಕಾರಣವಾಗುತ್ತದೆ ಎಂದರು.

ಸಭೆ ಅಧ್ಯಕ್ಷತೆಯನ್ನು ತಾಲೂಕು ಅಕ್ಕಿಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಕೆ.ಕೆ.ವೇಣುಗೋಪಾಲ್ ವಹಿಸಿದ್ದರು. ಇದೇ ವೇಳೆ ಕ್ವಿಂಟಾಲ್ ಹಲ್ಲಿಂಗ್ ವೆಚ್ಚವನ್ನು 150 ರೂ.ಗಳಿಗೆ ಹೆಚ್ಚಿಸಲು ಜಿಲ್ಲಾ ಮತ್ತು ತಾಲೂಕು ಸಂಘದ ರೈಸ್‌ಮಿಲ್ ಮಾಲೀಕರು ಒಮ್ಮತದ ತೀರ್ಮಾನ ಕೈಗೊಂಡರು.

ಸಭೆಯಲ್ಲಿ ಮಂಡ್ಯ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾ ಖಜಾಂಚಿ ಉದಯಕುಮಾರ್, ಮದ್ದೂರು ರೈಸ್‌ಮಿಲ್ ಮಾಲೀಕರ ಸಂಘದ ಅಧ್ಯಕ್ಷ ಶಂಕರೇಗೌಡ, ಮಂಡ್ಯ ತಾಲೂಕು ಘಟಕದ ಅಧ್ಯಕ್ಷ ಆತ್ಮಾನಂದ, ನಿರಂಜನ್, ಶಂಕರಣ್ಣ, ಕಪನೀಗೌಡ, ಮಳವಳ್ಳಿ ತಾಲೂಕು ಅಧ್ಯಕ್ಷ ಮಾರ್ಕಂಡೇಯ, ಚಿಕ್ಕಣ್ಣಗೌಡ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಮಸೂದ್, ತಾಲೂಕು ಘಟಕದ ಅಧ್ಯಕ್ಷ ಕೆ.ವೇಣುಗೋಪಾಲ್, ಉಪಾಧ್ಯಕ್ಷ ವಾಸು, ಕಾರ್ಯದರ್ಶಿ ಶ್ಯಾಂಪ್ರಸಾದ್, ಖಜಾಂಚಿ ದೀಪಕ್, ಗೌರವಾಧ್ಯಕ್ಷ ಕಿಕ್ಕೇರಿ ಶ್ಯಾಮಣ್ಣ, ತಾಲೂಕು ಘಟಕದ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ವಿ.ಅರುಣ್ ಕುಮಾರ್, ಕೆ.ಎಸ್. ಹರಪ್ರಸಾದ್, ಉದಯಕುಮಾರ್, ರಮೇಶ್, ಅಮ್ಜದ್ ಇತರರಿದ್ದರು.

ವಾಹನ ತಪಾಸಣೆ ವೇಳೆ ಹೈಡ್ರಾಮಾ: ಲಾಠಿ ಚಾರ್ಜ್

ಮಂಡ್ಯ, ಜು.8– ನಗರದಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಯುವಕರ ಗುಂಪು ಪ್ರತಿಭಟನೆ ನಡೆಸಿದ್ದು, ಅವರ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿರುವ ಘಟನೆ ನಗರದ ಫ್ಯಾಕ್ಟರಿ ವೃತ್ತದಲ್ಲಿ ನಡೆದಿದೆ.

ಶನಿವಾರ ಮಂಡ್ಯ ನಗರದ ವಿವಿಧೆಡೆ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದರು. ನಗರದ ಹಳೇ ಮೈಸೂರು–ಬೆಂಗಳೂರು ಹೆದ್ದಾರಿಯ ಫ್ಯಾಕ್ಟರಿ ವೃತ್ತದಲ್ಲಿ ವಾಹನ ತಪಾಸಣೆ ವೇಳೆ ಪೊಲೀಸರ ತಪಾಸಣೆಗೆ ಕೆಲ ಬೈಕ್ ಸವಾರರು ವಿರೋಧ ವ್ಯಕ್ತಪಡಿಸಿದ್ದಾರೆ.

ಸಂಚಾರಿ ನಿಯಮ ಪಾಲಿಸದ್ದಕ್ಕೆ ದಂಡ ಹಾಕುತ್ತಿದ್ದ ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಕೆಲ ಯುವಕರು ಆಕ್ರೋಶ ವ್ಯಕ್ತಪಡಿಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಪಡಿಸಿದ್ದಲ್ಲದೆ ರಸ್ತೆ ಮಧ್ಯೆ ಪ್ರತಿಭಟನೆ ನಡೆಸಿ ಹೈಡ್ರಾಮಾ ಸೃಷ್ಟಿಸಿದ್ದಾರೆ.

ಈ ವೇಳೆ ಯುವಕರ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಲಾಠಿ ಏಟು ಬೀಳುತ್ತಿದ್ದಂತೆಯೇ ಯುವಕರ ತಂಡ ಪೇರಿ ಕಿತ್ತಿದ್ದು, ಬಳಿಕ ಸ್ಥಳದಲ್ಲಿ ಉಂಟಾಗಿದ್ದ ಭಾರೀ ಟ್ರಾಫಿಕ್ ಪೊಲೀಸರು ಕ್ಲಿಯರ್ ಮಾಡಿದರು.


ಅವಧಿ ವಿಸ್ತರಣೆ

ಮಂಡ್ಯ, ಜು.8– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2022–23ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿಗೆ ದಿನಾಂಕವನ್ನು ಜು.15 ರವರೆಗೆ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳು https://ssp.postmetric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ: 8050770005/ 080–35254757 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ: ಮತದಾನದ ವೇಳೆ ಹಿಂಸಾಚಾರ; 20 ಮಂದಿ ಸಾವು, ಮತಪೆಟ್ಟಿಗೆಗಳಿಗೆ ಬೆಂಕಿ!







ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಮೂರು ಹಂತದ ಪಂಚಾಯತಿ ಚುನಾವಣೆಗೆ ಮತದಾನ ನಡೆಯುತ್ತಿದ್ದು, ಈ ವೇಳೆ ಹಿಂಸಾಚಾರ ಭುಗಿಲೆದ್ದು ಟಿಎಂಸಿ ಕಾರ್ಯಕರ್ತ ಸೇರಿ ಕನಿಷ್ಠ 20 ಮಂದಿ ಸಾವನ್ನಪ್ಪಿದ್ದಾರೆ. ಮತದಾನ ಆರಂಭಕ್ಕೆ ಕೆಲವೇ ಗಂಟೆಗಳ ಮೊದಲು ಮುರ್ಷಿದಾಬಾದ್‌ನಲ್ಲಿ ತಡರಾತ್ರಿ ಟಿಎಂಸಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಹೊಡೆದಾಡಿಕೊಂಡಿದ್ದು, ಮನೆಯೊಂದನ್ನು ಧ್ವಂಸ ಮಾಡಿದ್ದಾರೆ. ಕೂಚ್‌ಬೆಹಾರ್ ಜಿಲ್ಲೆಯ ಫಲಿಮಾರಿ ಗ್ರಾಮ ಪಂಚಾಯಿತಿಯಲ್ಲಿ ಬಿಜೆಪಿ ಮತಗಟ್ಟೆ ಏಜೆಂಟ್ ಮಾಧಬ್ ಬಿಸ್ವಾಸ್ ಅವರನ್ನು ಹತ್ಯೆ ಮಾಡಲಾಗಿದೆ.

ಬಿಸ್ವಾಸ್ ಮತಗಟ್ಟೆಗೆ ಪ್ರವೇಶಿಸಲು ಪ್ರಯತ್ನಿಸಿದಾಗ ಅವರನ್ನು ಟಿಎಂಸಿ ಬೆಂಬಲಿಗರು ತಡೆದಿದ್ದಾರೆ. ನಂತರ ಪರಿಸ್ಥಿತಿ ಉಲ್ಬಣಗೊಳ್ಳುತ್ತಿದ್ದಂತೆ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಈ ನಡುವೆ ಸ್ವತಂತ್ರ ಅಭ್ಯರ್ಥಿಯ ಬೆಂಬಲಿಗರೊಬ್ಬರನ್ನು ಪರಗಣ ಜಿಲ್ಲೆಯ ಕದಂಬಗಚಿ ಪ್ರದೇಶದಲ್ಲಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಮೃತ ವ್ಯಕ್ತಿಯನ್ನು 41 ವರ್ಷದ ಅಬ್ದುಲ್ಲಾ ಎಂದು ಗುರುತಿಸಲಾಗಿದೆ. ಹಲ್ಲೆ ಬಳಿಕ ಅಬ್ದುಲ್ಲಾ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಬೆಳಗ್ಗೆ ಮೃತಪಟ್ಟಿದ್ದಾರೆಂದು ಪೊಲೀಸ್ ವರಿಷ್ಠಾಧಿಕಾರಿ ಭಾಸ್ಕರ್ ಮುಖರ್ಜಿ ತಿಳಿಸಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯ ಕಪಾಸ್‌ದಂಗ ಪ್ರದೇಶದಲ್ಲೂ ರಾತ್ರೋರಾತ್ರಿ ಹಿಂಸಾಚಾರ ಸಂಭವಿಸಿದ್ದು, ಘಟನೆಯಲ್ಲಿ ಟಿಎಂಸಿ ಕಾರ್ಯಕರ್ತನೊಬ್ಬ ಸಾವನ್ನಪ್ಪಿದ್ದು, ಮೃತ ವ್ಯಕ್ತಿಯನ್ನು ಬಾಬರ್ ಅಲಿ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ,

ಕೇಂದ್ರ ಪಡೆಗಳ ಭದ್ರತೆ ಮಧ್ಯೆಯೂ ಸಾವಿನ ಸಂಖ್ಯೆ ಹೆಚ್ಚುತ್ತಿವೆ. ಮಾಲ್ಡಾದ ಮಾಣಿಕ್‌ಚಕ್‌ನಲ್ಲಿ ಬಾಂಬ್ ದಾಳಿಯ ನಡೆಸಲಾಗಿದೆ. ಇದು ನಮ್ಮ ಪಕ್ಷದ ಕಾರ್ಯಕರ್ತನನ್ನು ಬಲಿ ತೆಗೆದುಕೊಂಡಿದೆ. ನಾಡಿಯಾದ ನಾರಾಯಣಪುರ ಗ್ರಾಮ ಪಂಚಾಯತಿ ಅಭ್ಯರ್ಥಿ ಹಸೀನಾ ಸುಲ್ತಾನ್ ಅವರ ಪತಿಯ ಮೇಲೆ ಗುಂಡು ಹಾರಿಸಲಾಗಿದೆ. ಮತದಾನ ಆರಂಭವಾಗುವ ಕೆಲವೇ ಕ್ಷಣಗಳ ಮೊದಲು ಕಚ್ಚಾ, ದೇಶಿ ನಿರ್ಮಿತ ಬಾಂಬ್‌ಗಳನ್ನು ನಮ್ಮ ಕಾರ್ಯಕರ್ತರ ಮೇಲೆ ಎಸೆಯಲಾಗಿದೆ ಎಂದು ಆರೋಪಿಸಿದೆ. ಮತ್ತೊಂದೆಡೆ ಮಾಲ್ಡಾ ಜಿಲ್ಲೆಯಲ್ಲಿ ಕಾಂಗ್ರೆಸ್ ಬೆಂಬಲಿಗರೊಂದಿಗೆ ನಡೆದ ಘರ್ಷಣೆಯಲ್ಲಿ ಟಿಎಂಸಿ ನಾಯಕನ ಸಹೋದರ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಮಾಣಿಕ್ಚಕ್ ಪೊಲೀಸ್ ಠಾಣೆ ವ್ಯಾಪ್ತಿಯ ಜಿಶಾರತ್ತೋಲಾದಲ್ಲಿ ಈ ಘಟನೆ ನಡೆದಿದೆ. ಮೃತರನ್ನು ಮಾಲೆಕ್ ಶೇಖ್ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಳೆಯಿಂದ ಅನ್ನಭಾಗ್ಯ ಹಣ ಫಲಾನುಭವಿಗಳ ಖಾತೆಗೆ



ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ ಅಕ್ಕಿಯ ಬದಲಾಗಿ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡುವ ಯೋಜನೆ ಸೋಮವಾರದಿಂದ ಜಾರಿಗೆ ಬರಲಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಮಾಹಿತಿ ನೀಡಿದ್ದಾರೆ.

ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆಗೆ ಸಿಎಂ ಸಿದ್ದರಾಮಯ್ಯ ಸೋಮವಾರ ಸಂಜೆ ಚಾಲನೆ ನೀಡಲಿದ್ದಾರೆ. 15 ದಿನಗಳಲ್ಲಿ ಎಲ್ಲಾ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಸಚಿವರು ತಿಳಿಸಿದ್ದಾರೆ. ದೇವನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಜು.10ರಂದು ಸಂಜೆ 5 ಗಂಟೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಡಿಬಿಟಿಗೆ ಚಾಲನೆ ನೀಡಲಿದ್ದಾರೆ. ಇದರಿಂದ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮೆಯಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಸಚಿವರ ಪ್ರಕಾರ ರಾಜ್ಯದಲ್ಲಿ 4 ಸದಸ್ಯರನ್ನೊಳಗೊಂಡ 1.29 ಕೋಟಿ ಬಿಪಿಎಲ್ ಕಾರ್ಡ್ ಕುಟುಂಬಗಳಿದ್ದು ಒಟ್ಟು 4.1 ಕೋಟಿ ಫಲಾನುಭವಿಗಳಿದ್ದಾರೆ. ಅನ್ನಭಾಗ್ಯ ಯೋಜನೆಯಡಿಯಲ್ಲಿ 10 ಕೆ.ಜಿ ಅಕ್ಕಿ ಕೊಡುವುದು ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿಗಳ ಪೈಕಿ ಒಂದಾಗಿತ್ತು.



ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಡಾ.ರಾಮೇಗೌಡ ಮತ್ತು ಪ್ರೊ.ಗಂಗಾಧರ್ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಶನಿವಾರ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು.

ಮಣಿಪುರದಲ್ಲಿ ಮುಂದುವರಿದ ಹಿಂಸಾಚಾರ

ಇಂಫಾಲ್‌ನಲ್ಲಿ ಗುಂಡಿನ ದಾಳಿ, ವಾಹನಗಳಿಗೆ ಬೆಂಕಿ

ಇಂಫಾಲ್: ಮಣಿಪುರದಲ್ಲಿ ಹಿಂಸಾಚಾರ ಮುಂದುವರೆದಿದ್ದು, ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಗುಂಡಿನ ಚಕಮಕಿ ನಡೆದಿದ್ದು, ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಗುಂಪೊಂದು ಎರಡು ವಾಹನಗಳಿಗೆ ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.



ಐತಿಹಾಸಿಕ ಕಂಗ್ಲಾ ಕೋಟೆ ಬಳಿಯ ಮಹಾಬಲಿ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಒಂದು ನಿರ್ದಿಷ್ಟ ಸಮುದಾಯಕ್ಕೆ ಗೃಹೋಪಯೋಗಿ ವಸ್ತುಗಳನ್ನು ಸಾಗಿಸಲು ನಾಲ್ಕು ಚಕ್ರಗಳ ವಾಹನಗಳನ್ನು ಬಳಸಲಾಗುತ್ತಿದೆ ಎಂದು ಶಂಕಿಸಿ ಜನರ ಗುಂಪೊಂದು ಎರಡು ಖಾಸಗಿ ವಾಹನಗಳನ್ನು ಸುಟ್ಟು ಹಾಕಿದೆ. ಪೊಲೀಸರು ಮಧ್ಯ ಪ್ರವೇಶಿಸಿ ಗುಂಪು ಚದುರಿಸಿದ್ದು, ಎರಡೂ ವಾಹನಗಳ ಚಾಲಕರು ಪರಾರಿಯಾಗಿದ್ದು, ಘಟನೆಯಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಅವರು ತಿಳಿಸಿದ್ದಾರೆ. ಇನ್ನು ಶುಕ್ರವಾರ ತಡರಾತ್ರಿ ಇಂಫಾಲ್ ಪಶ್ಚಿಮ ಜಿಲ್ಲೆಯ ಯಂಗಂಗ್‌ಪೋಕ್ಪಿ ಬಳಿಯ ಲೈಕೋಟ್‌ನಲ್ಲಿ ಎರಡು ಸಮುದಾಯಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಬಿಷ್ಣುಪುರ ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ ಮಣಿಪುರ ಪೊಲೀಸ್ ಕಮಾಂಡೋ ಸೇರಿದಂತೆ ನಾಲ್ವರು ಗುಂಡಿಕ್ಕಿ ಹತ್ಯೆ ಮಾಡಿದ ನಂತರ ಈ ಘಟನೆಗಳು ಸಂಭವಿಸಿವೆ.

ಮೈಸೂರು ಸ್ಟೇಟ್ಸ್‌ಮನ್‌ಗಳ ತಯಾರು ಮಾಡಿದಂತಹ ಪುಣ್ಯಭೂಮಿ

● ಸಹಕಾರ ಸಚಿವ ಕೆ.ಎನ್.ರಾಜಣ್ಣ ಸ್ಮರಣೆ ● ಉತ್ತಮ ಸಮಾಜ ನಿರ್ಮಾಣಕ್ಕೆ ಮೈಸೂರು ಕೊಡುಗೆ ಅಪಾರ ● ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಸಚಿವರಿಗೆ ಅಭಿನಂದನೆ



ಮೈಸೂರು,ಜು.8(ಎಂಕೆ)–ಮೈಸೂರು ರಾಜಕಾರಣಿಗಳಿಗಿಂತ ಹೆಚ್ಚಾಗಿ ಸ್ಟೇಟ್ಸ್‌ಮನ್(ರಾಜನೀತಿಜ್ಞ)ಗಳನ್ನು ತಯಾರು ಮಾಡಿರುವ ಪುಣ್ಯಭೂಮಿಯಾಗಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಸ್ಮರಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಶನಿವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲ ರಾಜಕಾರಣಿಗಳು ಮುಂದಿನ ಚುನಾವಣೆಯಲ್ಲಿ ವೋಟ್ ತೆಗೆದುಕೊಂಡು ಮತ್ತೆ ಅಧಿಕಾರಕ್ಕೆ ಬರುದ್ಹೇಗೆ, ಸುಳ್ಳು ಹೇಳಬೇಕಾ... ಮೋಸ ಮಾಡಬೇಕಾ.. ಎಂಬುದರ ಚಿಂತನೆಯಲ್ಲಿರುತ್ತಾರೆ. ಆದರೆ ಸ್ಟೇಟ್‌ಮನ್‌ಗಳು ತಮ್ಮ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ನಿರ್ಮಿಸಲು ಏನೂ ಮಾಡಬೇಕು ಎಂಬ ಚಿಂತನೆ ಮಾಡುತ್ತಾರೆ ಈ ನಿಟ್ಟಿನಲ್ಲಿ ಮೈಸೂರು ರಾಜಕಾರಣಿಗಳಿಗಿಂತ ಹೆಚ್ಚಾಗಿ ಸ್ಟೇಟ್ಸ್‌ಮನ್‌ಗಳನ್ನು ತಯಾರು ಮಾಡಿರುವ ಪುಣ್ಯ ಭೂಮಿಯಾಗಿದೆ ಎಂದರು.

ವಿದ್ಯಾರ್ಥಿಗಳ ಪ್ರತಿನಿಧಿಯಾಗಿ ಮೈಸೂರು ವಿವಿಗೆ ಬರುತ್ತಿದ್ದೆ. ವಿದ್ಯಾರ್ಥಿ ದೆಸೆಯಿಂದಲೂ ಮೈಸೂರಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದೇನೆ. ನಾಲ್ವಡಿ ಕೃಷ್ಣರಾಜ ಒಡೆಯರ್ ವಿದ್ಯೆಗೆ, ಸಾಂಸ್ಕೃತಿಕ ಜೀವನ ನಡೆಸುವವರಿಗೆ ಹಾಗೂ ಸಮಾಜದ ಪ್ರತಿಭಾವಂತ ನಾಗರಿಕನಾಗಲೂ ಏನೆಲ್ಲಾ ಸೌಲಭ್ಯಗಳು ಬೇಕೋ ಅದೆಲ್ಲವನ್ನು ಒದಗಿಸಿಕೊಟ್ಟಿದ್ದಾರೆ. ಮೈಸೂರು ವಿವಿ, ಕೆಆರ್‌ಎಸ್, ಹತ್ತು–ಹಲವು ಕಾಲೇಜು ಹಾಗೂ ಕಾರ್ಖಾನೆಗಳು ಹೀಗೆ ಜನರ ಬದುಕು ಹಾಗೂ ಉತ್ತಮ ಸಮಾಜ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆಯನ್ನು ನಾವುಗಳು ಮರೆಯುವಂತಿಲ್ಲ ಎಂದು ಸ್ಮರಿಸಿದರು.

ರಾಜಕಾರಣದಲ್ಲಿ ಯಾವುದಾದರೂ ಒಂದು ಮೈಲುಗಲ್ಲನ್ನು ಮುಟ್ಟಿದಾಗ ಸಂತೋಷದ ಜೊತೆಗೆ ಜವಾಬ್ದಾರಿ ಹೆಚ್ಚಾಗುತ್ತದೆ. ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡಿ ಜನರ ವಿಶ್ವಾಸವನ್ನು ಗಳಿಸಿದರಷ್ಟೇ ಅಧಿಕಾರಕ್ಕೆ ಬಂದದ್ದು ಸಾರ್ಥಕವಾಗುತ್ತದೆ. ಅಧಿಕಾರ ಎಂಬುದು ವಿಷವಿದ್ದಂತೆ ಎಂದು ಬಹಳಷ್ಟು ಮಹನೀಯರು ಹೇಳುತ್ತಾರೆ. ಆದರೆ ವಿಷವನ್ನೇ ನಾವು ಸಂಸ್ಕರಣೆ ಮಾಡಿ ಔಷಧಿ ತಯಾರಿಸುತ್ತೇವೆ. ನಾವು ಸಂಸ್ಕರಣೆ ಮಾಡದಿದ್ದರೇ ಅದು ವಿಷವಾಗಿ ಪ್ರಾಣವನ್ನೆ ತೆಗೆಯುತ್ತದೆ. ಹಾಗಾಗಿ ನಮ್ಮ ರಾಜಕೀಯ ಅಧಿಕಾರವನ್ನು ಯಾವ ರೀತಿ ಬಳಸುತ್ತೇವೆ ಎಂಬುದು ಮುಖ್ಯವಾಗುತ್ತದೆ ಎಂದರು.

ಜಿಪಂ, ತಾಪಂ ಗೆಲುವು: ಸದ್ಯದಲ್ಲಿಯೇ ಜಿಪಂ, ತಾಪಂ ಚುನಾವಣೆಗಳು ಎದುರಾಗಲಿವೆ. ರಾಜ್ಯ ಕಾಂಗ್ರೆಸ್ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ತಿಳಿಸುವ ಮೂಲಕ ಹೆಚ್ಚಿನ ಮತಗಳನ್ನು ಪಡೆವುದರ ಜೊತೆಗೆ ಸಂಘಟಿತರಾಗಿ ಗೆಲುವು ಸಾಧಿಸುವ ಮೂಲಕ ಸರ್ಕಾರಕ್ಕೆ ಮತ್ತಷ್ಟು ಬಲ ತಂದುಕೊಡಬೇಕು. ಹಾಗೆಯೇ ಲೋಕಸಭಾ ಚುನಾವಣೆಯೂ ಹತ್ತಿರದಲ್ಲಿದ್ದು, ಕನಿಷ್ಟ 20 ಮಂದಿ ಸಂಸದರ ಆಯ್ಕೆ ಮಾಡಿ ಕಳುಹಿಸಬೇಕು ಎಂದರು.

ಇದೇ ನನ್ನ ಕಡೆಯ ಚುನಾವಣೆಯಾಗಿದ್ದು, ಮುಂದಿನ ದಿನಗಳಲ್ಲಿ ಯಾವ ಚುನಾವಣೆಗಳಿಗೂ ನಾನು ಸ್ಪರ್ಧಿಸುವುದಿಲ್ಲ. ಆದರೆ ಸಹಕಾರ ಕ್ಷೇತ್ರದಲ್ಲಿ ಸಕ್ರಿಯನಾಗಿರುತ್ತೇನೆ. ಸಹಕಾರಿ ಕ್ಷೇತ್ರದಲ್ಲಿನ ಒಂದೇ ಒಂದು ಚುನಾವಣೆಗೂ 10 ರೂ. ಖರ್ಚು ಮಾಡಿಲ್ಲ. ಈ ಚುನಾವಣೆಯಲ್ಲಿ ಹೇಳಿದರೆ ಹೃದಯಾಘಾತವಾಗುತ್ತದೆ. ಆದ್ದರಿಂದ ಮುಂದೆ ನಿಲ್ಲಬಾರದು ಎಂದು ತೀರ್ಮಾನಿಸಿದ್ದೇನೆಂದರು. ಇದೇ ವೇಳೆ ಸಚಿವ ಕೆ.ಎನ್.ರಾಜಣ್ಣ ದಂಪತಿಯನ್ನು ಅಭಿನಂದಿಸಲಾಯಿತು.

ಮೈಸೂರು ಮಿತ್ರ

ಮದ್ಯದ ಮೇಲೆ ಅಧಿಕ ತೆರಿಗೆ



ಮಾರಾಟಗಾರರ ಆದಾಯಕ್ಕೆ ಪೆಟ್ಟು

ಮೈಸೂರು, ಜು.8(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ನಲ್ಲಿ ಮದ್ಯದ ಮೇಲೆ ಶೇ.20 ರಷ್ಟು ತೆರಿಗೆ ವಿಧಿಸಿರುವ ಹಿನ್ನೆಲೆಯಲ್ಲಿ ಮದ್ಯ ಮಾರಾಟದ ವೇಲೆ ಭಾರೀ ಹೊಡೆತ ಬೀಳಲಿದೆ ಎಂದು ಮಾರಾಟಗಾರರು ಆತಂಕ ವ್ಯಕ್ತಪಡಿಸಿದ್ದಾರೆ.

ಮದ್ಯದ ಬೆಲೆ ಎಷ್ಟೇ ದುಬಾರಿಯಾದರೂ ಜನರು ಕುಡಿಯುವುದನ್ನು ಬಿಡುವುದಿಲ್ಲ ಎನ್ನುತ್ತಾರೆ. ಆದರೆ ಈಗ ತೆರಿಗೆ ವಿಧಿಸಿರುವುದರಿಂದ ಶೇ.10ರಷ್ಟು ಮದ್ಯ ಮಾರಾಟ ಕಡಿಮೆ ಆಗಲಿದೆ ಎಂದು ಕರ್ನಾಟಕ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ಗುರುಸ್ವಾಮಿ ಹೇಳಿದ್ದಾರೆ.

ಪ್ರತಿ ದಿನ ಮದ್ಯ ಸೇವಿಸುವ ಕೂಲಿ ಕಾರ್ಮಿಕರು ಮಾತ್ರ ಕುಡಿಯುವುದನ್ನು ಬಿಡುವುದಿಲ್ಲ. ಪ್ರತಿದಿನದ ವೇತನ 600 ರಿಂದ 1000 ರೂ. ಬರುವವರು ತನಗಾಗಿ 100ರಿಂದ 200 ರೂ. ಖರ್ಚು ಮಾಡಲು ಹಿಂಜರಿಯುವುದಿಲ್ಲ. ಆದರೆ ಮದ್ಯದ ದುಬಾರಿ ಬೆಲೆಯ ಕಾರಣ ಕೆಲವರು ಕುಡಿಯುವುದನ್ನು ಕಡಿಮೆ ಮಾಡುತ್ತಾರೆ. ಇದರಿಂದಾಗಿ ಶೇ.10ರಷ್ಟು ವ್ಯಾಪಾರ ಕಡಿಮೆ ಆಗಲಿದೆ ಎಂದರು.

ಕರ್ನಾಟಕದಲ್ಲಿ ಒಟ್ಟು 12,500 ವೈನ್ ಶಾಪ್‌ಗಳಿವೆ. ಒಂದು ದಿನಕ್ಕೆ ಏನಿಲ್ಲವೆಂದರೂ 90 ಕೋಟಿ ರೂ. ವಹಿವಾಟು ನಡೆಯುತ್ತದೆ. ತಿಂಗಳಿಗೆ ಸರಾಸರಿ 3000 ಕೋಟಿ ವ್ಯಾಪಾರ ನಡೆಯಲಿದ್ದು, ಇದರಿಂದ ಹೆಚ್ಚು ಆದಾಯ ಬರಲಿದೆ ಎಂಬ ಕಾರಣಕ್ಕೆ ಮದ್ಯದ ಮೇಲೆ ಅಧಿಕ ತೆರಿಗೆ ವಿಧಿಸಿದ್ದಾರೆ ಎಂದು ತಿಳಿಸಿದರು.

ಈ ಮೊದಲು 6 ಸಾವಿರ ಮದ್ಯದ ಅಂಗಡಿಗಳಿದ್ದವು. ಆದರೆ ಈಗ 12,500 ಆಗಿವೆ. ಇತ್ತೀಚೆಗೆ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸಿಎಲ್ 7 ಬಾರ್‌ಗಳಿಗೆ 6500 ಸಾವಿರ ಲೈಸೆನ್ಸ್ ಕೊಡಲಾಗಿದೆ. ಹೊಸ ಲೈಸೆನ್ಸ್‌ಗಳಿಂದಲೂ ಸರ್ಕಾರಕ್ಕೆ ಆದಾಯ ಬರಲಿದೆ. ಆದರೆ ಹೊಸ ಅಂಗಡಿ ಹೆಚ್ಚಾಗುವ ಕಾರಣ ಇರುವ ಅಂಗಡಿಗಳ ವ್ಯಾಪಾರದಲ್ಲಿ ಖೋತಾ ಆಗಲಿದೆ ಎಂದು ಗುರುಸ್ವಾಮಿ ತಿಳಿಸಿದರು.

ಮದ್ಯ ಮಾರಾಟಗಾರರಿಗೆ ಒಟ್ಟು ಸಿಗುವ ಶೇಕಡಾ 10 ಆದಾಯದಲ್ಲಿ ಶೇ.1.5 ಆದಾಯ ತೆರಿಗೆಗೆ ಹಾಗೂ ಶೇ.1.5 ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಕೊಟ್ಟರೆ ಮದ್ಯ ಮಾರಾಟಗಾರರಿಗೆ ಉಳಿಯುವುದು ಕೇವಲ ಶೇ.7.5 ಆದಾಯ ಅಷ್ಟೆ. ಇದರಲ್ಲೆ ಅಂಗಡಿ ಬಾಡಿಗೆ, ಕೆಲಸಗಾರರಿಗೆ ಸಂಬಳ ಕೊಡಬೇಕು. ಇದರಲ್ಲಿ ನಮಗೆ ಉಳಿಯುವುದು ಅಷ್ಟೋ ಇಷ್ಟು ಎಂದು ಗುರುಸ್ವಾಮಿ ಬೇಸರಿಸಿದರು.

ಸಹಕಾರ ಬ್ಯಾಂಕ್, ಸಂಘಗಳಲ್ಲಿ ಹಣ ದುರುಪಯೋಗವಾದರೆ ನಿರ್ದಾಕ್ಷಿಣ್ಯ ಕ್ರಮ

ಮೈಸೂರು ಪ್ರಾಂತ್ಯದ ಅಧಿಕಾರಿಗಳಿಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಎಚ್ಚರಿಕೆ



ಮೈಸೂರು, ಜು.8(ಬಿಎಲ್‌ಯು)– ಸಹಕಾರ ಬ್ಯಾಂಕ್ ಹಾಗೂ ಸಂಘಗಳಲ್ಲಿ ಅಕ್ರಮ ಎಸಗಿ, ಹಣ ದುರುಪಯೋಗ ಮಾಡಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಇಂದಿಲ್ಲಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಶನಿವಾರ ನಡೆದ ಮೈಸೂರು ಪ್ರಾಂತ್ಯದ ಸಹಕಾರ ಇಲಾಖೆ ಅಧಿ ಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಣ ದುರುಪಯೋಗವಾಗಿ ಹಲವು ವರ್ಷಗಳೇ ಕಳೆದಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಮೈಸೂರು ಜಿಲ್ಲೆಯ ಹುಣಸೂರು ಸಹಕಾರ ಸಂಘದಲ್ಲಿ 2005 ರಲ್ಲಿ ಹಣ ದುರುಪಯೋಗವಾಗಿದೆ. 18 ವರ್ಷವಾದರೂ ಏಕೆ ಕ್ರಮ ಕೈಗೊಂಡಿಲ್ಲ. ಹಣ ದುರುಪಯೋಗ ಮಾಡಿದವನಿಂದ ವಸೂಲಾತಿ ಮಾಡಿಕೊಂಡಿದ್ದೀರಾ ಎಂದು ಪ್ರಶ್ನಿಸಿದರು. ಈ ವಿಚಾರ ಕೋರ್ಟ್‌ನಲ್ಲಿ ಇರುವ ಕಾರಣ ವಸೂಲಾತಿ ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ಸಚಿವರಿಗೆ ಸ್ಪಷ್ಟನೆ ನೀಡಿದರು.

ಇಂತಹ ಪ್ರಕರಣಗಳಲ್ಲಿ ನಮ್ಮ ಅಧಿಕಾರಿಗಳು ಸರಿಯಾಗಿ ಕೋರ್ಟ್‌ಗೆ ಹಾಜರಾಗುವುದಿಲ್ಲ. ಸೂಕ್ತ ದಾಖಲಾತಿ ನೀಡಲ್ಲ, ಸಮರ್ಥವಾದ ಮಂಡನೆ ಮಾಡುವುದಿಲ್ಲ. ಇದರಿಂದ ವಂಚಕರ ಪರ ತೀರ್ಪು ಬರಲಿದೆ. ಹೀಗಾದರೆ ದುರುಪಯೋಗವಾದ ಹಣ ಬರುವುದಾದರೂ ಹೇಗೆ ಎಂದು ಖಾರವಾಗಿ ಪ್ರಶ್ನಿಸಿದ ರಾಜಣ್ಣ, ಇದರಿಂದ ಠೇವಣಿದಾರರ ನಂಬಿಕೆ ದೂರವಾಗುತ್ತದೆ. ಈ ಕಾರಣದಿಂದ ಇನ್ನು ಮುಂದೆ ಸಹಕಾರ ಬ್ಯಾಂಕ್ ಹಾಗೂ ಸಂಘಗಳಲ್ಲಿ ಅಕ್ರಮ ಎಸಗಿ, ಹಣ ದುರುಪಯೋಗ ಮಾಡಿಕೊಂಡರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆಫೀಸ್‌ನಲ್ಲೇ ಕೂತಿರುತ್ತಾರೆಯೇ ಹೊರತು ಫೀಲ್ಡ್‌ಗೆ ಹೋಗುವುದೇ ಇಲ್ಲ. ಆದರೆ ಬಡ್ತಿಗಾಗಿ ಮಾತ್ರ ಕಾಯುತ್ತಿರುತ್ತಾರೆ ಎಂದು ಕಿಡಿಕಾರಿದ ರಾಜಣ್ಣ, ಇನ್ನು ಮುಂದೆ ಎಲ್ಲಾ ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಾತಿ ಇರಬೇಕು. ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪಾಸ್‌ವರ್ಡ್ ದುರುಪಯೋಗ ಆಗಬಾರದು ಎಂದು ಸಚಿವರು ಸೂಚಿಸಿದರು.

ಪ್ರತಿ ತಾಲೂಕು ಮಟ್ಟದಲ್ಲಿ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ನಿರ್ಮಿಸಿ, ಅಲ್ಲಿ ಹಾಲು ಉತ್ಪಾದಕರ ಕುಟುಂಬದ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಿ. ಜನರನ್ನು ದುಬಾರಿ ಬಡ್ಡಿಯ ಶೋಷಣೆಯಿಂದ ತಪ್ಪಿಸಲು ಸಹಕಾರ ಬ್ಯಾಂಕ್ ಹಾಗೂ ಸಂಘಗಳಲ್ಲಿ ಸಾಲ ನೀಡಿ. ಸುಖಾ ಸುಮ್ಮನೆ ದಾಖಲಾತಿ ಸರಿ ಇಲ್ಲವೆಂದು ವಾಪಸು ಕಳುಹಿಸಬೇಡಿ ಎಂದು ಸಚಿವರು ತಾಕೀತು ಮಾಡಿದರು.

ಸಹಕಾರ ಇಲಾಖೆ ರಿಜಿಸ್ಟ್ರಾರ್ ಕ್ಯಾಪ್ಟನ್ ರಾಜೇಂದ್ರ, ಅಡಿಷನಲ್ ರಿಜಿಸ್ಟ್ರಾರ್‌ಗಳಾದ ಪ್ರಕಾಶ್‌ರಾವ್, ಆಶಾ, ಲಿಂಗರಾಜ್, ರಾಜಶೇಖರ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಸಹಕಾರ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

> ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನಿರೀಕ್ಷಿತ ಮಟ್ಟದಲ್ಲಿ ಸಾಲ ವಿತರಣೆ ಆಗಿಲ್ಲ. ಶೇ.45ರಷ್ಟು ಮಾತ್ರ ಸಾಲ ನೀಡಲಾಗಿದೆ. ಇದರಿಂದ ಅವರು ವಾಣಿಜ್ಯ ಬ್ಯಾಂಕ್‌ಗಳ ಕದ ತಟ್ಟುತ್ತಾರೆ. ದುಬಾರಿ ಬಡ್ಡಿ ನೀಡಿ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಇದರಿಂದ ಪಾರು ಮಾಡಲು ಸಾಲ ನೀಡಲು ಜನರನ್ನು ಕಚೇರಿಗೆ ಓಡಾಡಿಸಬೇಡಿ. ಸಹಕಾರ ಬ್ಯಾಂಕ್ ಹಾಗೂ ಸಂಘಗಳ ಆಡಿಟ್ ಮಾಡಿಸಲು ಲೆಕ್ಕ ಪರಿಶೋಧಕರಿಗೆ ಹೆಚ್ಚು ಹಣ ಖರ್ಚಾಗುತ್ತಿದೆ. ಇದರಿಂದ ಸಹಕಾರ ಇಲಾಖೆಯಿಂದಲೇ ಆಡಿಟ್ ಮಾಡಿಸಲು ಚಿಂತನೆ ನಡೆದಿದೆ. **–ಕೆ.ಎನ್.ರಾಜಣ್ಣ**

> ಸಹಕಾರ ಇಲಾಖೆ ಅಂದರೆ ಬಹಳಷ್ಟು ಜನರಿಗೆ ತಾತ್ಸರ ಮನೋಭಾವವಿದೆ. ಈ ಅಪವಾದವನ್ನು ಅಧಿಕಾರಿಗಳು ಹಾಗೂ ಸಿಬ್ಬಂದಿ ಮುಕ್ತಗೊಳಿಸಬೇಕು. ಈಗ ಒಂದೇ ಒಂದು ಶಾಖೆ ತೆರೆಯಲು ಆರ್‌ಬಿಐ ಅನುಮತಿ ನೀಡುತ್ತಿಲ್ಲ. ಜೊತೆಗೆ ನಿಬಂಧನೆ ವಿಧಿಸಿ ದಂಡ ಕೂಡ ಹಾಕುತ್ತಿದೆ. ಇನ್ನು ಮುಂದೆ ಯಾವುದೇ ನಿಬಂಧನ ಉಲ್ಲಂಘನೆ ಆಗಬಾರದಂತೆ ಕೆಲಸ ನಿರ್ವಹಿಸಿ. ನಷ್ಟದಲ್ಲಿರುವ ಸಹಕಾರ ಬ್ಯಾಂಕ್ ಹಾಗೂ ಸಹಕಾರ ಸಂಘಗಳನ್ನು ಲಾಭದ ಹಾದಿಗೆ ತನ್ನಿ. ಇಲ್ಲದಿದ್ದರೆ ಸಹಕಾರ ಇಲಾಖೆಗೆ ಉಳಿಗಾಲವಿಲ್ಲ. **–ಕೆ.ಎನ್.ರಾಜಣ್ಣ, ಸಹಕಾರ ಸಚಿವ.**

ಸಾಕ್ಷ್ಯಚಿತ್ರ ಪ್ರದರ್ಶನ, ಸಂವಾದ

ಹುತಾತ್ಮ ಯೋಧರೊಬ್ಬರ ಸಾಹಸಗಾಥೆ ಆಧರಿಸಿದ ಸಾಕ್ಷ್ಯಚಿತ್ರ



ಮೈಸೂರು,ಜು.8(ಪಿಎಂ)–ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದ ವತಿಯಿಂದ 76ನೇ ಭಾರತ ಸ್ವಾತಂತ್ರ್ಯ ಮಹೋತ್ಸವ ಸ್ಮರಣಾರ್ಥ ಹಾಗೂ ಜಯಚಾಮರಾಜ ಒಡೆಯರ್ ಅವರ 105ನೇ ಜನ್ಮದಿನಾಚರಣೆ ಪ್ರಯುಕ್ತ ಜು.15ರಂದು 'ದಿ ಸಾಗಾ ಆಫ್ ಎ ಬ್ರೇವ್‌ಹಾರ್ಟ್ (ಧೈರ್ಯ ಶಾಲಿ ಮನಸ್ಸಿನ ಸಾಹಸ ಚರಿತೆ)' ಎಂಬ 48 ನಿಮಿಷಗಳ ಸಾಕ್ಷ್ಯಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಅಂದು ಸಂಜೆ 6.30ಕ್ಕೆ ಸಾಕ್ಷ್ಯಚಿತ್ರ ಪ್ರದರ್ಶನಗೊಳ್ಳಲಿದೆ. ಬಳಿಕ ಮಾಯಾ ಚಲನಚಿತ್ರ ನಿರ್ಮಾಣ ಸಂಸ್ಥೆ ಸಂಸ್ಥಾಪಕರೂ ಆದ ನಿರ್ದೇಶಕಿ ಮಾಯಾಚಂದ್ರ ಅವರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ. 13ನೇ ದಾದಾ ಸಾಹೇಬ್ ಫಾಲ್ಕೆ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿಗೆ ಭಾಜನವಾಗಿದೆ.

ಮಾಯಾಚಂದ್ರ ಅವರು ತಮ್ಮ ಮಾಯಾ ಚಲನಚಿತ್ರ ನಿರ್ಮಾಣ ಸಂಸ್ಥೆ ಮೂಲಕ ಈ ಸಾಕ್ಷ್ಯಚಿತ್ರ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಸಾಹಸಗಾಥೆಯ ನೈಜ ಕಥೆಯನ್ನು ಆಧರಿಸಿ ಈ ಸಾಕ್ಷ್ಯಚಿತ್ರ ನಿರ್ಮಿಸಲಾಗಿದೆ. 1999ರಲ್ಲಿ ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಭಯೋತ್ಪಾದಕರನ್ನು ಹಿಮ್ಮೆಟ್ಟಿಸುವ ಸಂದರ್ಭದಲ್ಲಿ ಇವರು ತಮ್ಮ ಪ್ರಾಣತ್ಯಾಗ ಮಾಡುವ ಮೂಲಕ ಹುತಾತ್ಮರಾದರು. ಅವರಿಗೆ ಮರಣೋತ್ತರವಾಗಿ 'ಶೌರ್ಯ ಚಕ್ರ' ಪುರಸ್ಕಾರ ನೀಡಲಾಗಿದೆ.

ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಪತ್ನಿ ಶಾಂತಲಾ ಭಂಡಾರ್ಕರ್ ಉಪಸ್ಥಿತರಿರಲಿದ್ದಾರೆ. ಈ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಉಚಿತ ಪ್ರವೇಶವಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 99806 56631 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಡಿಎಫ್‌ಆರ್‌ಎಲ್‌ನಲ್ಲಿ ಮುಕ್ತ ದಿನ ಆಚರಣೆ

ಒಂಭತ್ತು ವರ್ಷದ ಪ್ರಯೋಗಾಲಯ ಸಾಧನೆ ಪ್ರದರ್ಶನ





9 ವರ್ಷಗಳಿಂದ ಸಂಸ್ಥೆಯ ಪ್ರಯೋಗಾಲಯದಲ್ಲಿ ಸೇವಿಸಲು ಸಿದ್ಧವಿರುವ ಆಹಾರಗಳು, ಫುಡ್ ಪ್ಯಾಕಿಂಗ್ ಅಂಡ್ ಡೆಲಿವರಿ ಸಿಸ್ಟಮ್ ಫಾರ್ ಸಿಬಿಆರ್‌ಎನ್, ಜೈವಿಕ ವಿಘಟನೀಯ ಕ್ಯಾರಿ ಬ್ಯಾಗ್, ವ್ಯಾಕ್ಯೂಮ್ ಫ್ರೈಡ್ ಹಣ್ಣಿನ ಚಿಪ್ಸ್, ಫ್ರೀಜ್ ಡ್ರೈಡ್ ಆಹಾರ ಉತ್ಪನ್ನಗಳು, ರೆಡಿ ಟು ಈಟ್ ಬಾರ್ಸ್ ಮತ್ತು ಬಿಸ್ಕತ್‌ಗಳು, ಸೂಪ್, ಜ್ಯೂಸ್ ಪೌಡರ್ ಮಿಶ್ರಣ, ಆಹಾರ ಸಂಸ್ಕರಣಾ ವ್ಯವಸ್ಥೆ, ನ್ಯೂಟ್ರಾಸ್ಯುಟಿಕಲ್ಸ್, ಗಗನಯಾನದಲ್ಲಿ ಬಳಸುವ ಆಹಾರ ತ್ಯಾಜ್ಯ ಪ್ರತಿಬಂಧಿಸುವ ಚೀಲಗಳು, ಜಾಮ್, ನಾನಾ ಆಹಾರ ಮಿಶ್ರಣ, ಡಿಟೆಕ್ಷನ್ ಕಿಟ್‌ಗಳನ್ನು ಮುಕ್ತ ದಿನದಲ್ಲಿ ಆಯೋಜಿಸಿದ್ದ ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರು ವೀಕ್ಷಿಸಿದರು.

ಮೈಸೂರು,ಜು.8(ಆರ್‌ಕೆ)–ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (DFRL)ದಲ್ಲಿ ಶನಿವಾರ ಮುಕ್ತ ದಿನ (Open Day) ಆಚರಿಸಲಾಯಿತು.

ಭಾರತ ಸರ್ಕಾರದ ಡಿಆರ್‌ಡಿಓ ರಕ್ಷಣಾ ಸಚಿವಾಲಯವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ಆತ್ಮ ನಿರ್ಭರ ಭಾರತದ ನಿರ್ಮಾಣಕ್ಕಾಗಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ವ್ಯವಸ್ಥೆಯ ಬೆಳವಣಿಗೆ' ವಿಷಯದೊಂದಿಗೆ ಇಂದು ದೇಶಾದ್ಯಂತ ಎಲ್ಲಾ ಡಿಆರ್‌ಡಿಓ ಪ್ರಯೋಗಾಲಯಗಳಲ್ಲಿ ಮುಕ್ತ ದಿನ ಆಚರಿಸಲಾಯಿತು.

ಸಂಸ್ಥೆಯು 9 ವರ್ಷಗಳಿಂದ ಮಾಡಿರುವ ಸಾಧನೆಗಳ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ರಕ್ಷಣಾ ಸಿಬ್ಬಂದಿಗಳು, ಸೈನಿಕರಿಗಾಗಿ ತಯಾರಿಸುತ್ತಿರುವ ಆಹಾರ ಪದಾರ್ಥಗಳು, ಪ್ಯಾಕಿಂಗ್, ರವಾನೆ, ಸಂಸ್ಕರಣೆಗಳ ಬಗ್ಗೆ ವಸ್ತುಪ್ರದರ್ಶನದಲ್ಲಿ ಅನಾವರಣಗೊಳಿಸಲಾಗಿತ್ತು.

ಡಿಆರ್‌ಡಿಓ ಹೆಡ್ ಕ್ವಾರ್ಟರ್ಸ್ ನಿರ್ದೇಶಕ (ಡೈರೆಕ್ಟೋರೇಟ್ ಆಫ್ ಪಬ್ಲಿಕ್ ಇಂಟರ್ ಫೇಸ್) ವಿಪಿನ್‌ಕುಮಾರ್ ಕೌಶಿಕ್ ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ದೇಶದ ರಕ್ಷಣಾ ಕಾರ್ಯದಲ್ಲಿ ನಿರತರಾದ ಸೈನಿಕರು, ಸಿಬ್ಬಂದಿಗೆ ಗುಣಮಟ್ಟದ ಆಹಾರ ಪೂರೈಸುತ್ತಿರುವ ಡಿಎಫ್‌ಆರ್‌ಎಲ್, ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕುವವರಿಗೂ ಆಹಾರ ಸರಬರಾಜು ಮಾಡುವ ಮೂಲಕ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿದೆ ಎಂದರು.

ಸಂಸ್ಥೆಯಲ್ಲಿ ನಡೆಯುತ್ತಿರುವ ಸಂಶೋಧನೆ, ಅನ್ವೇಷಣೆ, ಪ್ರಯೋಗಾಲಯದಿಂದ ತಯಾರಿಸುತ್ತಿರುವ ಆಹಾರ ಪದಾರ್ಥಗಳ ಸಂಸ್ಕರಣೆ, ಪ್ಯಾಕಿಂಗ್ ರವಾನೆ ಕ್ರಮಗಳ ಬಗ್ಗೆ ವರ್ಷಕ್ಕೊಮ್ಮೆಯಾದರೂ ಮುಕ್ತ ದಿನವನ್ನಾಗಿ ಆಚರಿಸಿ, ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಿ ಮಾಹಿತಿ ನೀಡುತ್ತಿರುವುದು ಪ್ರಶಂಸನೀಯ ಎಂದರು.

ಡಿಆರ್‌ಡಿಓ ನಿರ್ದೇಶಕ (ಆಡಳಿತ) ವಿಪುಲ್ ಗುಪ್ತಾ, ಡಿಎಫ್‌ಆರ್‌ಎಲ್ ನಿರ್ದೇಶಕ ಡಾ.ಅನಿಲ್ ದತ್ ಸೆಮ್ವಾಲ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ತೆರೆದಿದ್ದ ವಸ್ತುಪ್ರದರ್ಶನದಲ್ಲಿ ಮೈಸೂರು ನಗರದ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ವಿಜ್ಞಾನ ಉಪನ್ಯಾಸಕರು ಹಾಗೂ ಸಾರ್ವಜನಿಕರು ಸಾವಿರಾರು ಸಂಖ್ಯೆಯಲ್ಲಿ ಭೇಟಿ ನೀಡಿ ಪ್ರಯೋಗಾಲಯದ ವಸ್ತುಪ್ರದರ್ಶನ ವೀಕ್ಷಿಸಿದರು. ತುರ್ತು ಸಂದರ್ಭ ಉಪಯೋಗಿಸುವ ಯುದ್ಧ ಪಡಿತರ, ಅನುಕೂಲಕರ ಆಹಾರ ಅಭಿವೃದ್ಧಿ ತ್ವರಿತ ಪರೀಕ್ಷಾ ಕಿಟ್‌ಗಳು, ಪ್ಯಾಕಿಂಗ್ ವಸ್ತುಗಳು, ಬಾಹ್ಯಾಕಾಶ ಆಹಾರ ಸಂಶೋಧನೆಗಳೂ ಸೇರಿದಂತೆ ಡಿಎಫ್‌ಆರ್‌ಎಲ್ ಸಂಸ್ಥೆಯು ಬಳಸುತ್ತಿರುವ ಅತ್ಯಾಧುನಿಕ ತಂತ್ರಜ್ಞಾನ, ದೇಶದ ರಕ್ಷಣಾ ಪಡೆಗೆ ಸಲ್ಲಿಸುತ್ತಿರುವ ಸೇವೆಗಳನ್ನು ವಸ್ತುಪ್ರದರ್ಶನದಲ್ಲಿ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.

ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷರಾಗಿ ರವಿಶಾಸ್ತ್ರಿ ಆಯ್ಕೆ



ಮೈಸೂರು,ಜು.8(ಆರ್‌ಕೆ)–ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷರಾಗಿ ಮೈಸೂರಿನ ರವಿಶಾಸ್ತ್ರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ಮೈಸೂರಿನ ಪಂಚವಟಿ ಹೋಟೆಲ್ ಮಾಲೀಕ ರವಿಶಾಸ್ತ್ರಿ ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘ ಅಭಿನಂದಿಸುತ್ತದೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮಾರಾಟ ಮೇಳ

ಮೈಸೂರು,ಜು.8–ಮೈಸೂರಿನ ಮಹಿಳಾ ಸಮನ್ವಯ ಸಂಸ್ಥೆ ವತಿಯಿಂದ 'ಸಾಧನಾ' ಮಹಿಳಾ ಉದ್ದಿಮೆ, ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಜು.9ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಂಜುಮಳಿಗೆಯ ಶ್ರೀ ಗೋಪಾಲ ಸ್ವಾಮಿ ಶಿಶುವಿಹಾರ ಸಂಸ್ಥೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಬೆಳಗ್ಗೆ 11ರಿಂದ 12.30ರವರೆಗೆ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಿದ್ದು, ಹೆಚ್ಚಿನ ಮಾಹಿತಿಗೆ ಮೊ.ಸಂ:8722806920/ 9886227216 ಸಂಪರ್ಕಿಸಿ.

ಮೈಸೂರಲ್ಲಿ ಕಳವಾಗಿದ್ದ ಇನ್ನೋವಾ ಕಾರು ಗುಜರಾತ್‌ನಲ್ಲಿ ಪತ್ತೆ

ಸರಸ್ವತಿಪುರಂ ಪೊಲೀಸರ ಯಶಸ್ವಿ ಕಾರ್ಯಾಚರಣೆ, ಸೋಮವಾರ ಕಾರು ಮೈಸೂರಿಗೆ ಬರುವ ಸಾಧ್ಯತೆ

ಮೈಸೂರು, ಜು. 8 (ಆರ್‌ಕೆ)– ಮೈಸೂರಿನಲ್ಲಿ ಎರಡು ತಿಂಗಳ ಹಿಂದೆ ಕಳವಾಗಿದ್ದ ಟೊಯೊಟಾ ಇನ್ನೋವಾ ಕಾರು ಗುಜರಾತ್‌ನಲ್ಲಿ ಪತ್ತೆಯಾಗಿದೆ.

ಮೈಸೂರಿನ ನಿವೇದಿತನಗರದಲ್ಲಿ ಮನೆ ಮುಂದೆ ನಿಲ್ಲಿಸಿದ್ದ ನಿರ್ಮಿತಿ ಕೇಂದ್ರದ ನಿವೃತ್ತ ನಿರ್ದೇಶಕ ಮಂಜುನಾಥ್ ಅವರ ಪುತ್ರ ನಿಖಿಲ್ ಮಂಜುನಾಥ್ ಎಂಬುವರ ಹೆಸರಿನಲ್ಲಿದ್ದ ಟೊಯೊಟಾ ಇನ್ನೋವಾ (ಕೆಎ 09–ಎಂಸಿ 5199) ಕಾರನ್ನು 2023ರ ಮೇ 12ರಂದು ರಾತ್ರಿ ಕಳವು ಮಾಡಲಾಗಿತ್ತು. ರಾತ್ರಿ ನಿಲ್ಲಿಸಿದ್ದ ಕಾರು ಮರುದಿನ ಬೆಳಗ್ಗೆ ಎದ್ದು ನೋಡಿದಾಗ ನಾಪತ್ತೆಯಾಗಿತ್ತು.

ಪ್ರಕರಣ ದಾಖಲಿಸಿಕೊಂಡಿದ್ದ ಸರಸ್ವತಿಪುರಂ ಠಾಣೆ ಪೊಲೀಸರು, ಕಾರ್ಯಾಚರಣೆ ನಡೆಸಿ ತಮಗೆ ದೊರೆತ ಸುಳಿವಿನ ಜಾಡು ಹಿಡಿದು ಬೆನ್ನತ್ತಿದಾಗ ಗುಜರಾತ್‌ನಲ್ಲಿ ಕಾರು ಪತ್ತೆಯಾಗಿದೆ. ನಕಲಿ ಕೀ ಬಳಸಿ ಕಾರನ್ನು ಕಳವು ಮಾಡಿರುವ ಕುಖ್ಯಾತ ಅಂತಾರಾಜ್ಯ ಖದೀಮರು, ಗುಜರಾತ್ ಹೊರವಲಯದ ನಿರ್ಜನ ಪ್ರದೇಶದ ಗೋಡೌನ್‌ವೊಂದರಲ್ಲಿರಿಸಿದ್ದರು. ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿ ಕಳವಾಗಿರುವ ಮತ್ತೊಂದು ಇನ್ನೋವಾ ಮತ್ತು ಫಾರ್ಚುನರ್ ಕಾರನ್ನೂ ಅದೇ ತಂಡ ಅಪಹರಿಸಿರಬಹುದೆಂದು ಶಂಕಿಸಲಾಗಿದೆ. ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ನೇತೃತ್ವದ ತಂಡ ಸೋಮವಾರ ಗುಜರಾತ್‌ಗೆ ತೆರಳಲಿದ್ದು, ಪತ್ತೆಯಾಗಿರುವ ಕಾರಿನೊಂದಿಗೆ ಮೈಸೂರಿಗೆ ಮರಳುವರು. ಅವರೊಟ್ಟಿಗೆ ಕಾರಿನ ಮಾಲೀಕ ನಿಖಿಲ್ ಸಹ ತೆರಳುವರು ಎಂದು ಪೊಲೀಸರು ತಿಳಿಸಿದ್ದಾರೆ.



ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮೈಸೂರು ಜಿಲ್ಲಾ ಹಾಲು ಒಕ್ಕೂಟ(ಮೈಮುಲ್)ದ ಅಧ್ಯಕ್ಷ ಪಿ.ಎಂ.ಪ್ರಸನ್ನ, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಉಮಾಶಂಕರ್, ಕೆ.ಜಿ.ಮಹೇಶ್, ಕೆ.ಈರೇಗೌಡ, ಚೆಲುವರಾಜ್, ರಾಜೇಂದ್ರ, ಲೀಲಾ ನಾಗರಾಜ್, ದಾಕ್ಷಾಯಿಣಿ, ಬಸವರಾಜಪ್ಪ, ಶಿವಗಾಮಿ ಹಾಗೂ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್ ಅಭಿನಂದಿಸಿದರು.



ಮೈಸೂರಿಗೆ ಆಗಮಿಸಿದ ಸಚಿವ ಎನ್.ರಾಜಣ್ಣ ಅವರನ್ನು ಕರ್ನಾಟಕ ರಾಜ್ಯ ಸತೀಶ್ ಜಾರಕಿಹೊಳಿ ಅಭಿಮಾನಿಗಳ ಬಳಗದ ರಾಜ್ಯ ಸಂಚಾಲಕ ಎಸ್.ಆರ್. ರವಿಕುಮಾರ್ ಕಾಂಗ್ರೆಸ್ ಕಚೇರಿಯಲ್ಲಿ ಅಭಿನಂದಿಸಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಕೃಷ್ಣ ಮತ್ತಿತರರಿದ್ದರು.

ಸಿಎಂ ಸಿದ್ದರಾಮಯ್ಯ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿ ತಮ್ಮ ರಾಜಕೀಯ ಚಟ ತೀರಿಸಿಕೊಳ್ಳುತ್ತಿದ್ದಾರೆ



ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿ ತಮ್ಮ ರಾಜಕೀಯ ಚಟವನ್ನು ತೀರಿಸಿಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಾಗ್ದಾಳಿ ನಡೆಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮಂಡಿಸಿರುವ ಬಜೆಟ್ ಸಂಪೂರ್ಣ ತುಷ್ಟೀಕರಣ ಬಜೆಟ್ ಆಗಿದ್ದು, ಇದು ಅಭಿವೃದ್ಧಿ ಪೂರಕವಾದ ಬಜೆಟ್ ಅಲ್ಲ, ಬದಲಾಗಿ ಮೂಲ ಸೌಕರ್ಯಗಳನ್ನು ನೆಲ ಕಚ್ಚಿಸುವ ಬಜೆಟ್ ಇದಾಗಿದೆ. ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಿದ್ದಾರಾ ಅಥವಾ ಬಿಜೆಪಿಯನ್ನು ಟೀಕೆ ಮಾಡಿದ್ದಾರಾ ಅರ್ಥವಾಗುತ್ತಿಲ್ಲ, ಬಜೆಟ್ ಮಂಡನೆಗಿಂತ ಬಿಜೆಪಿಯನ್ನು ಟೀಕೆ ಮಾಡಿದ್ದೇ ಹೆಚ್ಚು.

ಆಸ್ತಿ ದರ ಏರಿಕೆ ಮಾಡಿದ್ದಾರೆ, ಅಬಕಾರಿ ಟಾರ್ಗೆಟ್ ಕೊಟ್ಟಿದ್ದಾರೆ. ಎಲ್ಲರಿಗೂ ಮದ್ಯಪಾನ ಮಾಡಿಸಿ ಹಣ ತಂದುಕೊಡಿ ಅನ್ನುತ್ತಾರೆ. ಯುವ ಶಕ್ತಿಗೆ ಬಜೆಟ್‌ನಲ್ಲಿ ನಯಾಪೈಸೆ ಹಣ ಇಟ್ಟಿಲ್ಲ, ಗೃಹಲಕ್ಷ್ಮಿಗೆ ಹಣ ಇಟ್ಟಿದ್ದಾರೆ. ರೈಲ್ವೆ ಯೋಜನೆಗೆ ರಾಜ್ಯದ ಪಾಲಿನ ಅನುದಾನ ಮೀಸಲಿಟ್ಟಿಲ್ಲ. 10 ಕೆಜಿ ಅಕ್ಕಿ ಬಗ್ಗೆ ಹೇಳಿದ್ದಾರೆ. ಈ ಪೈಕಿ 5 ಕೆಜಿ ಕೇಂದ್ರ ಸರ್ಕಾರದ್ದಿದೆ. ಅವರೇನು ಕೊಡುತ್ತಾರೆ ಎಂಬುವುದನ್ನು ಹೇಳುತ್ತಿಲ್ಲ. ಇದನ್ನು ನೋಡಿದರೇ ಸಿದ್ದರಾಮಯ್ಯ ಅವರು ಹಿಟ್ಲರ್ ರೀತಿಯಲ್ಲಿ ಆಡಳಿತ ಮಾಡಲು ತೀರ್ಮಾನಿಸಿದ್ದಾರೆ ಎಂದರು.

ಕನ್ನಡ ಪುಸ್ತಕ ಖರೀದಿಗೆ 10 ಕೋಟಿ ಅನುದಾನ ಸ್ವಾಗತಾರ್ಹ



ಮೈಸೂರು,ಜು.8(ಎಂಟಿವೈ)–ಮುಖ್ಯಮಂತ್ರಿ ಸಿದ್ದ ರಾಮಯ್ಯ ಮಂಡಿಸಿದ ಐತಿಹಾಸಿಕ 14ನೇ ಬಜೆಟ್‌ನಲ್ಲಿ ಅನ್ನ, ಅಕ್ಷರ, ಆರೋಗ್ಯ ಸೇರಿದಂತೆ ಸಮಾಜ ಕಲ್ಯಾಣ ಹಾಗೂ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಈ ಬಜೆಟ್ ಪೂರಕವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ತಿಳಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಹಾಗೂ ಆಡಳಿತಾತ್ಮಕ ದೃಷ್ಟಿಕೋನದಿಂದ ಅವಲೋಕನ ಮಾಡಿದರೂ ರಾಜ್ಯ ಬಜೆಟ್ ಅತ್ಯುತ್ತಮವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ 37 ಸಾವಿರ ಕೋಟಿ ರೂ. ಮೀಸಲಿಟ್ಟಿರುವುದು ಸ್ವಾಗತಾರ್ಹ. ಸಮಾಜ ಕಲ್ಯಾಣ ಇಲಾಖೆಗೆ 34 ಸಾವಿರ ಕೋಟಿ ರೂ. ನೀಡಲಾಗಿದೆ. ಇದರಿಂದ ಎಲ್ಲಾ ವರ್ಗದ ಜನರನ್ನು ತಲುಪಲು ಹಾಗೂ ಸಾಮಾನ್ಯ ಜನರಿಗೆ ಬೇಸಿಕ್ ಪ್ರೈಡ್ ಒದಗಿಸಲು ಸಾಧ್ಯ ಎಂದು ತಿಳಿಸಿದರು.

ತಾಜಾ ಕನ್ನಡ ಸರ್ಕಾರ: ಈ ಬಾರಿ ಬಜೆಟ್‌ನಲ್ಲಿ ಕನ್ನಡ ಪುಸ್ತಕ ಖರೀದಿಗೆ 10 ಕೋಟಿ ರೂ. ನೀಡಲಾಗಿದೆ. ಇದರಿಂದ ರಾಜ್ಯ ಸರ್ಕಾರ ತಾಜಾ ಕನ್ನಡ ಸರ್ಕಾರ ಎಂದು ಸಾಬೀತಾಗಿದೆ. ಸಾಹಿತ್ಯ ಕ್ಷೇತ್ರದಿಂದ ಆಯ್ಕೆಯಾಗಿರುವ ನನಗೆ ಖುಷಿ ತಂದುಕೊಟ್ಟಿದೆ ಎಂದು ಹೇಳಿದರು.

ಪೌಷ್ಟಿಕ ಆಹಾರಕ್ಕಾಗಿ: ಅಲೆಮಾರಿಗಳ ಹಿತ ಕಾಯಲು 3 ಕೋಟಿ ರೂ. ಮೀಸಲಿಡಲಾಗಿದೆ. ಇದರಿಂದ ಪೌಷ್ಟಿಕ ಆಹಾರ ಪೂರೈಕೆ ಮಾಡಲು ನೆರವಾಗುತ್ತದೆ. ಟ್ರೈಬಲ್ ಸೆಕ್ಟರ್‌ನಲ್ಲಿ ಬರುವ ಕಾಡುಕುರುಬ, ಬೆಟ್ಟ ಕುರುಬ ಸೇರಿದಂತೆ 13 ಪಂಗಡಗಳಿಗೂ ಸೌಲಭ್ಯ ಒದಗಿಲು ಉದ್ದೇಶಿಸಿರುವುದು ಒಳ್ಳೆ ಬೆಳವಣಿಗೆ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಅನುಕರಣೀಯ ಯೋಜನೆ: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಕಾರ್ಯಕ್ರಮ ಅನುಕರಣೀಯ. ಈ ಗ್ಯಾರಂಟಿ ಕಾರ್ಯಕ್ರಮಗಳಿಗೆ ಯಾವುದೇ ಜಾತಿ, ಧರ್ಮ, ರಾಜಕೀಯ ಪಕ್ಷಗಳ ಪಟ್ಟುಪಾಡಿನ ಭೇದವಿಲ್ಲ. ಯಾರು ಅರ್ಹರೋ ಅವರು ಸೌಲಭ್ಯ ಪಡೆದುಕೊಳ್ಳಬಹುದು ಎಂದರು.

ವಿದ್ಯುತ್ ಕಳ್ಳತನ, ಪೋಲು ತಡೆಗಟ್ಟಿ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಗೃಹಜ್ಯೋತಿ ಯೋಜನೆಯಲ್ಲಿ 200 ಯೂನಿಟ್ ಉಚಿತ ವಿದ್ಯುತ್ ನೀಡುವ ಕಾರ್ಯಕ್ರಮ ಯಶಸ್ವಿಗೊಳ್ಳಲು ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈಗಾಗಲೇ ಕೆಇಬಿ ಮತ್ತು ಕೆಪಿಟಿಸಿಎಲ್‌ಗಳಲ್ಲಿ ವಿದ್ಯುತ್ ಸೋರಿಕೆ ಹಾಗೂ ವಿದ್ಯುತ್ ಕಳ್ಳತನವಾಗುತ್ತಿರುವುದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಕಚೇರಿಯಿಂದ ಹೊರಗೆ ಬಂದು ಪರಿಶೀಲನೆ ಮಾಡಿ ವಿದ್ಯುತ್ ಪೋಲಾಗುವುದು ಹಾಗೂ ಕಳ್ಳತನ ತಡೆಗೆ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಉಳ್ಳವರು ತಿರಸ್ಕರಿಸಿ: ಐದು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವವರು ಗ್ಯಾಸ್ ಬೆಲೆ ಹೆಚ್ಚಳವಾದಾಗ ಏಕೆ ವಿರೋಧಿಸಲಿಲ್ಲ. ಒಂದು ಸಿಲಿಂಡರ್ ಬೆಲೆ 1150 ರೂ. ಆಗಿದ್ದಾಗ ದೇಶಕ್ಕಾಗಿ ಕೊಟ್ಟರೆ ಏನು ಸಮಸ್ಯೆ ಇಲ್ಲ ಎಂದಿದ್ದ ದೇಶ ಭಕ್ತರು, ದೇಶಕ್ಕಾಗಿ ಗ್ಯಾಸ್ ಸಬ್ಸಿಡಿಯನ್ನು ಹಿಂದಿರುಗಿಸಿ ಎಂದು ಬೊಬ್ಬೆ ಹೊಡೆದಿದ್ದರು. ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಸಬಲರಾಗಿರುವವರು, ಉಳ್ಳವರು ಗ್ಯಾರಂಟಿ ಯೋಜನೆಗಳ ಸೌಲಭ್ಯವನ್ನು ತಿರಸ್ಕರಿಸಬೇಕು. ಅಂದು ಗ್ಯಾಸ್ ಸಬ್ಸಿಡಿಯನ್ನು ತಿರಸ್ಕರಿಸಿದಂತೆ ಇಂದು ಗ್ಯಾರಂಟಿ ಯೋಜನೆಯ ಸೌಲಭ್ಯವನ್ನು ಉಳ್ಳವರು ತಿರಸ್ಕರಿಸಬೇಕು. ಇದರಿಂದ ಬಡವರಿಗೆ ಹಾಗೂ ಅರ್ಹರಿಗೆ ಸೌಲಭ್ಯ ನೀಡಲು ಸಹಕಾರಿಯಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡ ರೇವಣ್ಣ ಸೇರಿದಂತೆ ಇನ್ನಿತರರು ಇದ್ದರು.

ವಿರೋಧ ಪಕ್ಷದ ನಾಯಕರಿಲ್ಲದೆ ಬಜೆಟ್ ಮಂಡನೆ: ಬಿಜೆಪಿ ಶೋಚನೀಯ ಸ್ಥಿತಿಗೆ ಸಾಕ್ಷಿ

ಮೈಸೂರು, ಜು.8 (ಎಂಟಿವೈ)– ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕರಿಲ್ಲದೇ ಬಜೆಟ್ ಮಂಡಿಸಿದ್ದು, ರಾಜ್ಯದಲ್ಲಿರುವ ಬಿಜೆಪಿಯ ದುಸ್ಥಿತಿ ಜಗಜ್ಜಾಹೀರಾಗಿದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಲೇವಡಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸಿದ ವೇಳೆ ಅಧಿಕೃತ ವಿರೋಧ ಪಕ್ಷದ ನಾಯಕರೇ ಇರಲಿಲ್ಲ. ಇತಿಹಾಸದಲ್ಲಿ ಮೊದಲ ಬಾರಿಗೆ ಮೇಲ್ಮನೆ ಹಾಗೂ ಕೆಳಮನೆ (ವಿಧಾನಸಭೆ ಹಾಗೂ ವಿಧಾನಪರಿಷತ್)ನಲ್ಲಿ ವಿಪಕ್ಷ ನಾಯಕರಿಲ್ಲದೇ ಬಜೆಟ್ ಮಂಡನೆಯಾಗಿದೆ. 60ಕ್ಕೂ ಹೆಚ್ಚು ಶಾಸಕರನ್ನು ಹೊಂದಿರುವ ಬಿಜೆಪಿ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡುವುದಕ್ಕೆ ಆಗದಿರುವಷ್ಟು ಶೋಚನೀಯ ಸ್ಥಿತಿಯಲ್ಲಿದೆ. ಇದು ನಾಚಿಕೆಗೇಡಿನ ಸಂಗತಿ ಎಂದರು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರೋಧ ಪಕ್ಷದ ನಾಯಕನಂತೆ ಆಗಿದ್ದಾರೆ. ಬಿಜೆಪಿಯವರ ಅಸಹಾಯಕತೆ, ಅಸಂಘಟನೆ, ಹಿರಿಯರ ಮಾತಿಗೆ ಮನ್ನಣೆ ಇಲ್ಲದಿರುವುದೇ ಬಿಜೆಪಿಯಲ್ಲಿ ಅರಾಜಕತೆಗೆ ಕಾರಣ. ಬಿಜೆಪಿ ನಾಯಕರು ನಮ್ಮ ಕೈಯ್ಯಲ್ಲಿ ಆಗಲ್ಲ, ನೀವೇ ವಿರೋಧ ಪಕ್ಷದ ನಾಯಕರಾಗಿ ಎಂದಿದ್ದಾರೆ. ಅದಕ್ಕಾಗಿ ಕುಮಾರಸ್ವಾಮಿ ಮಾತಿಗೆ ಜೈ ಜೈ ಎನ್ನುತ್ತಿದ್ದಾರೆ ಎಂದು ವಿಶ್ವನಾಥ್ ಆರೋಪಿಸಿದರು.

ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಗ್ಯಾರಂಟಿ: ಜೆಡಿಎಸ್ ನಾಯಕರನ್ನು ಬಿಜೆಪಿ ನಾಯಕರು ಹೊಗಳುತ್ತಿರುವುದು ಹಾಗೂ ಸದನದಲ್ಲಿ ನಡೆಯುತ್ತಿರುವ ಬೆಳವಣಿಗೆ ನೋಡಿದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಳ್ಳುವುದು ಖಚಿತ ಎಂದು ಭವಿಷ್ಯ ನುಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪುತ್ರರೂ ಆಗಿರುವ ಹಾಗೂ ಎರಡು ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವ ಕುಮಾರಸ್ವಾಮಿ ಅವರು ಪೆನ್ ಡ್ರೈವ್ ಇದೆ ಎಂದು ತೋರಿಸಿ ಜೇಬಿಗಿಟ್ಟು ಕೊಳ್ಳುವುದು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ. ಸಾಕ್ಷಿ ಇದ್ದರೆ ಅದನ್ನು ತೋರಿಸಬೇಕು. ಮಾಧ್ಯಮಗಳ ಮುಂದೆ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

“ ಚುನಾವಣಾ ಗಿಮಿಕ್

ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಮಾತು ಲೋಕಸಭಾ ಚುನಾವಣಾ ಗಿಮಿಕ್ ಆಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುತ್ತೇವೆ ಎನ್ನುತ್ತಿದ್ದಾರೆ. ನಮ್ಮ ದೇಶದಲ್ಲಿ ಇದನ್ನು ಜಾರಿಗೊಳಿಸುವುದು ಅಷ್ಟು ಸುಲಭವಲ್ಲ. ಲೋಕಸಭಾ ಚುನಾವಣೆ ಮುಂದಿಟ್ಟುಕೊಂಡು ಮತದಾರರನ್ನು ಓಲೈಸಿಕೊಳ್ಳಲು ಈ ಅಸ್ತ್ರ ಪ್ರಯೋಗಿಸಲಾಗಿದೆ. ಚುನಾವಣೆ ಮುಗಿದ ನಂತರ ಸುಮ್ಮನಾಗುತ್ತಾರೆ. ಈ ಗಿಮಿಕ್ ಅನ್ನು ಜನ ಅರ್ಥ ಮಾಡಿಕೊಳ್ಳಬೇಕು. **–ಎ.ಹೆಚ್.ವಿಶ್ವನಾಥ್**

ನಿಧನ

ತಮ್ಮೇಗೌಡ



ಮೈಸೂರು,ಜು.8– ಪಿರಿಯಾಪಟ್ಟಣ ತಾಲೂಕು ಕೊತ್ತವಳ್ಳಿಕೊಪ್ಪಲು ಗ್ರಾಮದ ಯಜಮಾನರು ಹಾಗೂ ವಿಎಸ್‌ಎಸ್‌ಬಿಎನ್ ಸಹಕಾರ ಸಂಘದ ಮಾಜಿ ನಿರ್ದೇಶಕ ತಮ್ಮೇಗೌಡ (75) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಜಯಮ್ಮ, ಪುತ್ರರಾದ ಕೆ.ಟಿ.ಮಹದೇವ (ರಾಜ್ಯ ಗುಪ್ತವಾರ್ತೆ), ಹರೀಶ್, ಪುತ್ರಿ ಜ್ಯೋತಿ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಗ್ರಾಮದ ಮೃತರ ಜಮೀನಿನಲ್ಲಿ ಶುಕ್ರವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರವಿಚಂದ್ರ

ಮೈಸೂರು ಕೇರ್ಗಳ್ಳಿಯ ರಿಷಬ್ ವಿಲ್ಲಾ ನಿವಾಸಿ ಮಧುಸೂದನ್ ಅವರ ಪುತ್ರ ರವಿಚಂದ್ರ(38) ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ಸಂಜೆ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ 10ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮಳೆಯಿಂದ ಸಂಪರ್ಕ ಸೇತುವೆ ಮುಳುಗಡೆ

ಆಸ್ಪತ್ರೆಯಿಂದ ಮನೆಗೆ ರೋಗಿ ಕರೆದೊಯ್ಯಲು ಹರಸಾಹಸ

- ಜಿಲ್ಲೆಯಲ್ಲಿ ಮಳೆ ಕ್ಷೀಣ
- ಸಹಜ ಸ್ಥಿತಿಯತ್ತ ಜನ ಜೀವನ



ಮಡಿಕೇರಿ,ಜು.8– ಮಡಿಕೇರಿ ತಾಲೂಕಿನ ಚೇರಂಬಾಣೆ ಸಮೀಪದ ಬೇಂಗೂರಿನಲ್ಲಿ ಕಾವೇರಿ ನದಿಯಲ್ಲಿ ಪ್ರವಾಹ ಎದುರಾದ ಪರಿಣಾಮ ದೋಣಿಕಡವು ಭಾಗದ ಸಂಪರ್ಕ ಸೇತುವೆ ಮುಳುಗಡೆಯಾಗಿದೆ.

ಈ ಹಿನ್ನೆಲೆಯಲ್ಲಿ ಕೂಡಕಂಡಿ ಪರಂಬು ಗ್ರಾಮಕ್ಕೆ ಆಸ್ಪತ್ರೆಯಿಂದ ಬಿಡುಗಡೆಗೊಂಡ ಯುವಕನೋರ್ವನನ್ನು ಗ್ರಾಮಸ್ಥರು ಮನೆಗೆ ತಲುಪಿಸಲು ಹರಸಾಹಸ ಪಡಬೇಕಾಯಿತು. ಕೊನೆಗೆ ಸ್ಟ್ರೆಚ್ಚರ್ ಮೂಲಕ ಕೊಂಡೊಯ್ದು ಮನೆಗೆ ತಲುಪಿಸಿದರು. ಕೆ.ಪಿ.ರಕ್ಷಿತ್(21) ಎಂಬಾತ ಕೆಲ ಸಮಯದ ಹಿಂದೆ ಸುಂಟಿಕೊಪ್ಪ ಸಮೀಪ ಸಂಭವಿಸಿದ ಬೈಕ್ ಅಪಘಾತದಲ್ಲಿ ಗಾಯಗೊಂಡು ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದು ಗುಣಮುಖನಾಗಿದ್ದ. ಶುಕ್ರವಾರ ಬೆಳಗಿನ ವೇಳೆ ಆಸ್ಪತ್ರೆಯಿಂದ ಬಿಡುಗಡೆಗೊಂಡು ಮನೆಗೆ ಆಗಮಿಸಿದ್ದಾರೆ.

ಆ ಸಂದರ್ಭವೇ ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದ್ದ ಹಿನ್ನೆಲೆಯಲ್ಲಿ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿ, ದೋಣಿಕಡುವು–ಕೂಡಕಂಡಿ ಸಂಪರ್ಕ ಸೇತುವೆ ನೀರಿನಲ್ಲಿ ಮುಳುಗಡೆಯಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮಕ್ಕೆ ರಕ್ಷಿತ್‌ನನ್ನು ಕರೆತಂದ ವಾಹನ ತೆರಳಲು ಸಾಧ್ಯವಾಗಲಿಲ್ಲ. ಬೇರೆ ದಾರಿ ಕಾಣದ ಗ್ರಾಮಸ್ಥರು ಸ್ಟ್ರೆಚ್ಚರ್‌ನಲ್ಲೇ ರಕ್ಷಿತ್‌ನನ್ನು ಹೊತ್ತುಕೊಂಡು ನದಿ ದಾಟಿ ಆತನ ಮನೆಗೆ ತಲುಪಿಸಿದ್ದಾರೆ.

ಇದೀಗ ಕಾವೇರಿ ನದಿ ನೀರಿನಲ್ಲಿ ನೀರಿನ ಪ್ರಮಾಣ ಇಳಿಕೆ ಕಂಡಿದ್ದು, ದೋಣಿಕಡುವು–ಕೂಡಕಂಡಿ ಸಂಪರ್ಕ ಸೇತುವೆ ಮೇಲೆ ಜನ ಸಂಚಾರ ಆರಂಭವಾಗಿದೆ.

ಮಳೆ ಕ್ಷೀಣ: ಕೊಡಗು ಜಿಲ್ಲೆಯಲ್ಲಿ ಮಳೆ ಆರ್ಭಟ ಕ್ಷೀಣಿಸಿದ್ದು, ಜನ ಜೀವನ ಸಹಜ ಸ್ಥಿತಿಗೆ ಮರಳಿದೆ. ಈ ನಡುವೆ ಗಾಳಿ ಮಳೆಗೆ ಮರಗಳು ಮುರಿದು ಬಿದ್ದು ವಿದ್ಯುತ್ ಕಂಬ ಮತ್ತು ತಂತಿಗಳಿಗೆ ಹಾನಿಯಾಗಿದ್ದು, ದುರಸ್ಥಿ ಕಾರ್ಯ ನಡೆಸಲಾಗಿದೆ. ಸುಂಟಿಕೊಪ್ಪ ನಿವಾಸಿ ಎಂ.ಎ.ವಸಂತ ಅವರ ಮನೆ ಮುಂಭಾಗದ ತಡೆಗೋಡೆ ಮಳೆಗೆ ಕುಸಿದು



ಬಿದ್ದಿದ್ದು 40 ಸಾವಿರ ರೂ. ನಷ್ಟ ಸಂಭವಿಸಿದೆ. ನಿನ್ನೆ ರಾತ್ರಿ ಸುರಿದ ಗಾಳಿ ಮಳೆಗೆ 7ನೇ ಹೊಸಕೋಟೆ ಗ್ರಾಮದ ಅಶೋಕ ಎಸ್ಟೇಟ್ ಒಳಗಡೆ 2 ವಿದ್ಯುತ್ ಕಂಬಗಳು ಮುರಿದು ಬಿದ್ದು ರಾತ್ರಿಯಿಂದ ವಿದ್ಯುತ್ ಸಂಚಾರ ಸ್ಥಗಿತಗೊಂಡಿತ್ತು. ಸ್ಥಳಕ್ಕೆ ಸೆಸ್ಕ್ ಇಲಾಖೆ ಸಿಬ್ಬಂದಿ ತೆರಳಿ ಬೇರೆ ಕಂಬಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ.

ಮಳೆ ಪ್ರಮಾಣ ತಗ್ಗಿದ್ದರೂ ಗಾಳಿಗೆ ಜಿಲ್ಲೆಯಾದ್ಯಂತ 5 ಮರಗಳು ಮುರಿದು ಬಿದ್ದಿದ್ದು, ಒಟ್ಟು 29 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ಎಲ್ಲಾ ಮರಗಳನ್ನು ತೆರವು ಮಾಡಲಾಗಿದೆ. ಕಳೆದ 24 ಗಂಟೆ ಅವಧಿಯಲ್ಲಿ ಚೆಸ್ಕಾಂ ಇಲಾಖೆಗೆ ಒಟ್ಟು 3.90 ಲಕ್ಷ ರೂ. ನಷ್ಟ ಉಂಟಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.

ಬೆಂಗಳೂರು ಸರಣಿ ಬಾಂಬ್ ಸ್ಫೋಟದ ಅಪರಾಧಿಗೆ ಪೆರೋಲ್

ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಶಾಸಕ ಅಪ್ಪಚ್ಚು ರಂಜನ್ ವಾಗ್ದಾಳಿ



ಮಡಿಕೇರಿ,ಜು.8– ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದಅಪರಾಧಿಅಬ್ದುಲ್ ನಾಸಿರ್ ಮದನಿಗೆ ಪೆರೋಲ್ ನೀಡುವ ಮೂಲಕರಾಜ್ಯಕಾಂಗ್ರೆಸ್ ಸರ್ಕಾರ ಪರೋಕ್ಷವಾಗಿ ಭಯೋತ್ಪಾದನೆಗೆ ಬೆಂಬಲ ನೀಡುತ್ತಿದೆ ಎಂದು ಮಡಿಕೇರಿಯ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಗಂಭೀರ ಆರೋಪ ಮಾಡಿದ್ದಾರೆ.

ಮಾದಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಬ್ದುಲ್ ನಾಸಿರ್ ಮದನಿ ದೇಶದ್ರೋಹಿಯಾಗಿದ್ದು, ಮಾದಾಪುರ ಸಮೀಪದ ಲಕ್ಕೇರಿ ಪೈಸಾರಿಯಲ್ಲಿಯೇ ಬಾಂಬ್ ತಯಾರಿಸುವ ಭಯೋತ್ಪಾದನೆ ಕೆಲಸ ಮಾಡಿದ್ದ. ಈ ಪ್ರಕರಣದಲ್ಲಿ ನಾನು ಕೂಡ ದೂರುದಾರನಾಗಿದ್ದೇನೆ ಎಂದರು.

ಬೆಂಗಳೂರು ಬಾಂಬ್ ಸ್ಫೋಟ ಪ್ರಕರಣದ ಅಪರಾಧಿ ಅಬ್ದುಲ್ ನಾಸಿರ್ ಮದನಿಗೆ ಹಿಂದಿನ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಸರಕಾರಗಳ ಅವಧಿಯಲ್ಲಿ ಯಾವುದೇ ಪೆರೋಲ್ ನೀಡಿರಲಿಲ್ಲ. ಇದೀಗ ಆಡಳಿತಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಪೆರೋಲ್ ನೀಡಿದೆ. ಯಾವುದೇ ಸರಕಾರ ಬಂದರೂ ಕೂಡ ಭಯೋತ್ಪಾದನೆ ವಿರುದ್ಧ ಧಮನಕಾರಿ ನೀತಿ ತೆಗೆದುಕೊಳ್ಳಬೇಕು. ಆದರೆ ಕಾಂಗ್ರೆಸ್ ಸರಕಾರ ಭಯೋತ್ಪಾದನೆಗೆ ಪರೋಕ್ಷ ಬೆಂಬಲ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ ಚೇಸ್ ಮಾಡಿದ್ರು: ನನ್ನ ಮನೆಯ ಕೇವಲ 300 ಮೀಟರ್ ದೂರದಲ್ಲಿರುವ ಲಕ್ಕೆರೆ ಪೈಸಾರಿಯಲ್ಲಿ ಶುಂಠಿ ಕೃಷಿ ನೆಪದಲ್ಲಿ ಭಯೋತ್ಪಾದನೆ ಚಟುವಟಿಕೆಗಳು ನಡೆಯುತ್ತಿರುವ ಮಾಹಿತಿಯನ್ನು ವ್ಯಕ್ತಿ ಯೋರ್ವರು ನನಗೆ ನೀಡಿದ್ದರು. ಆ ಸಂದರ್ಭ ತಾನು ಎಂಎಲ್‌ಎ ಆಗಿದ್ದು, ಸಂಶಯದ ಆಧಾರದಲ್ಲಿ ಆಗಿನ ಸೋಮವಾರಪೇಟೆ ಪೊಲೀಸ್ ಡಿವೈಎಸ್‌ಪಿ ಅವರಿಗೆ ಪರಿಶೀಲನೆ ನಡೆಸುವಂತೆ ಹೇಳಿದ್ದೆ. ಆದರೆ ಆ ಅಧಿಕಾರಿ ಯಾವುದೇ ಪರಿಶೀಲನೆ ನಡೆಸಿರಲಿಲ್ಲ ಎಂದು ಹೇಳಿದರು.

ಈ ನಡುವೆಯೇ ರಾತ್ರಿ ಹೊತ್ತಲ್ಲಿ ಅಪರಿಚಿತರು ನನ್ನ ಕಾರನ್ನು ಕೂಡ ಚೇಸ್ ಮಾಡಿದ್ದರು. ಈ ಎಲ್ಲ ಬೆಳವಣಿಗೆಗಳ ಬಳಿಕ ಕೆಲವೇ ದಿನಗಳಲ್ಲಿ ಬೆಂಗಳೂರಿನಲ್ಲಿ ಬಾಂಬ್ ಸ್ಫೋಟ ನಡೆದು ಪ್ರಾಣ ಹಾನಿ ಸಂಭವಿಸಿತ್ತು ಆ ಬಳಿಕ ಪ್ರಕರಣದ ಆರೋಪಿ ಅಬ್ದುಲ್ ನಾಸಿರ್ ಮದನಿಯನ್ನು ಕೇರಳದಲ್ಲಿ ಬಂಧಿಸಲಾಗಿತ್ತು ಎಂದು ಮಾಹಿತಿ ನೀಡಿದರು. ಬೆಂಗಳೂರು ಸರಣಿ ಬಾಂಬ್ ಸ್ಫೋಟ ಯಶಸ್ವಿಯಾಗಿದ್ದರೆ, ಕೊಡಗಿನಲ್ಲಿಯೂ ವಿಧ್ವಂಸಕ ಕೃತ್ಯ ಘಟಿಸುತ್ತಿತ್ತು ಎಂದು ಅಪ್ಪಚ್ಚು ರಂಜನ್ ಆತಂಕ ವ್ಯಕ್ತಪಡಿಸಿದರು.

ಇಂದು ಶಾಸಕ ಎ.ಎಸ್.ಪೊನ್ನಣ್ಣ ಹುಟ್ಟುಹಬ್ಬ ವಿಭಿನ್ನ ಆಚರಣೆ

ಶಾಸಕರ ಹೆಸರಿನಲ್ಲಿ ರಕ್ಷಣಾ ತಂಡ ರಚನೆ

ಮಳೆ ಅನಾಹುತ, ತುರ್ತು ಸಂದರ್ಭದಲ್ಲಿ ನೆರವಿಗೆ ಧಾವಿಸಲು ರಕ್ಷಣಾ ತಂಡ ಸಿದ್ಧ



ವಿರಾಜಪೇಟೆ, ಜು.8– ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರ ಹುಟ್ಟುಹಬ್ಬದ ಪ್ರಯುಕ್ತ ವಿಭಿನ್ನವಾಗಿ ಆಚರಿಸಲಾಗುತ್ತಿದ್ದು, ನಾಳೆ (ಜು.9) ಇಲ್ಲಿನ ಪುರಭವನದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಜೊತೆಗೆ ಸಂಕಷ್ಟದಲ್ಲಿರುವ ಜನರ ನೆರವಿಗಾಗಿ ಶಾಸಕರ ಹೆಸರಿನಲ್ಲಿ ಎಎಸ್‌ಪಿ ರಕ್ಷಣಾ ತಂಡವನ್ನು ರಚಿಸಲಾಗುತ್ತಿದೆ. ಈ ಸಂಬಂಧ ಪುರಸಭೆಯ ಜನಪ್ರತಿನಿಧಿಗಳ ನೇತೃತ್ವದಲ್ಲಿ ಇದರ ಲೋಗೋ ಬಿಡುಗಡೆಯಾಗಲಿದೆ ಎಂದು ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ತಿಳಿಸಿದ್ದಾರೆ.

ನಗರ ಕಾಂಗ್ರೆಸ್ ವತಿಯಿಂದ ವಿರಾಜಪೇಟೆ ಶಾಸಕರ ಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ರಕ್ಷಣಾ ತಂಡವನ್ನು ವಿರಾಜಪೇಟೆ ನಗರ ಸೇರಿದಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ರಚಿಸಲಾಗುತ್ತಿದೆ. ಇತರೆ ತುರ್ತು ಸಂದರ್ಭಗಳಲ್ಲಿ ಈ ತಂಡಗಳು ಮಳೆಗಾಲದಲ್ಲಿ ಸಂಭವಿಸುವ ಪ್ರಕೃತಿ ವಿಕೋಪ ಹಾಗೂ ಇತರ ತುರ್ತು ಸಂದರ್ಭಗಳಲ್ಲಿ ಜನರಿಗೆ ಸ್ಪಂದಿಸಿ ನೆರವಿಗೆ ಧಾವಿಸಲಿದೆ ಎಂದರು.

ಪಟ್ಟಣದ ನೆಹರು ನಗರ, ಅಯ್ಯಪ್ಪ ಬೆಟ್ಟ, ಮಲೆತಿರಿಕೆ ಬೆಟ್ಟ, ಅರಸು ನಗರ, ಭಾಗದ ಬೆಟ್ಟಪ್ರದೇಶ ಜನರಿಗೆ ಮಳೆ ಸಂದರ್ಭ ಸ್ಪಂದಿಸಿ ಕೆಲಸ ಮಾಡುವುದಾಗಿ ತಿಳಿಸಿದ ಮಾದಂಡ ತಿಮ್ಮಯ್ಯ ಅವರು ಪ್ರಕೃತಿ ವಿಕೋಪದ ಸಂದರ್ಭ ಸ್ಥಳೀಯ ಶಾಸಕರು ಹಾಗೂ ತಹಶೀಲ್ದಾರ್ ಮತ್ತು ಅಧಿಕಾರಿಗಳ ನೆರವು ಪಡೆಯಲಿದ್ದು ಇದೀಗ ಬೆಟ್ಟಪ್ರದೇಶದಲ್ಲಿ ಮನೆ ಇರುವ ನಿವಾಸಿಗಳಿಗೆ ಟಾರ್ಪಲ್ ಇತ್ಯಾದಿ ನೀಡಲು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ ಎಂದರಲ್ಲದೆ ಹೆಚ್ಚಿನ ಮಾಹಿತಿಯನ್ನು ಜು.9ರ ಸಭೆಯಲ್ಲಿ ಪ್ರಕಟಿಸುವುದಾಗಿ ಹೇಳಿದರು. ಪುರಸಭೆ ಸದಸ್ಯ ಡಿ.ಪಿ. ರಾಜೇಶ್ ಮಾತನಾಡಿ, ಮಳೆ ಬಿರುಸಾಗುತ್ತಿದ್ದು ವಿರಾಜಪೇಟೆ ಸುತ್ತಲಿನ ಬೆಟ್ಟದ ನಿವಾಸಿಗಳಿಗೆ ರಕ್ಷಣೆ ನೀಡಲು ನಾವು ಮುಂದಾಗಿದ್ದೇವೆ. ಇದಕ್ಕಾಗಿ ಜಾಲತಾಣದ ಮೂಲಕ ಅಗತ್ಯ ಮಾಹಿತಿ ಹಾಗೂ ತಿಳುವಳಿಕೆ ನೀಡಲಾಗುತ್ತಿದ್ದು. ಮಳೆ ಬಳಿಕವೂ ಅಗತ್ಯ ಸಂದರ್ಭ ಈ ರಕ್ಷಣಾ ತಂಡ ಜನರಿಗೆ ಸ್ಪಂದಿಸಿ ಕೆಲಸ ಮಾಡಲಿದೆ. ಶೀಘ್ರದಲ್ಲಿ ಹೆಲ್ಪ್ ಲೈನ್ ಕೇಂದ್ರವನ್ನು ವಿರಾಜಪೇಟೆಯಲ್ಲಿ ತೆರೆಯಲಾಗುವುದು ತುರ್ತು ಸಂದರ್ಭ ಪುರಸಭಾ ಸದಸ್ಯರನ್ನು ಸಂಪರ್ಕಿಸಬಹುದು ಎಂದರು. ಪುರಸಭೆ ಸದಸ್ಯ ಮಹಮ್ಮದ್ ರಫಿ ಮಾತನಾಡಿ, ಈ ಎ.ಎಸ್.ಪಿ ರಕ್ಷಣಾ ತಂಡ ರಾಜಕೀಯ ರಹಿತವಾಗಿದ್ದು ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇಚ್ಛಿಸುವವರು ಸೇರಬಹುದಾಗಿದೆ ಎಂದರು.

ಮಾಹಿತಿಗಳಿಗೆ ಪುರಸಭಾ ಸದಸ್ಯರಾದ ಮತ್ತೀನ್–9449048877, ರಾಜೇಶ್–9739819508 ಮತ್ತು ಮಹಮ್ಮದ್ ರಫಿ 9141723577 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಎಂ.ಶಶಿಧರನ್, ಉಪಾಧ್ಯಕ್ಷ ಹಮೀದ್, ಸಂಘಟನ ಕಾರ್ಯದರ್ಶಿ ಶಾನ್ ಮತ್ತು ಪುರಸಭ ಸದಸ್ಯ ಮತ್ತೀನ್ ಉಪಸ್ಥಿತರಿದ್ದರು.

ಹೇರೂರು ಗ್ರಾಮಕ್ಕೆ ಕಾಡಾನೆಗಳ ಹಿಂಡು ಲಗ್ಗೆ

ಫಸಲು ನಾಶ, ಗ್ರಾಮಸ್ಥರಲ್ಲಿ ಆತಂಕ



ಮಡಿಕೇರಿ, ಜು.8– ಸುಂಟಿಕೊಪ್ಪ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಹೇರೂರು ಗ್ರಾಮದಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡಿದ್ದು, ಕೃಷಿ ಫಸಲನ್ನು ನಾಶ ಮಾಡಿದೆ.

ಸ್ಥಳೀಯ ಕೃಷಿಕ ಅರುಣ್ ಚೆಂಗಪ್ಪ ಎಂಬವರ ತೋಟಕ್ಕೆ ನಿತ್ಯ ಆನೆಗಳು ಲಗ್ಗೆ ಇಡುತ್ತಿದ್ದು, ಕಾಫಿ, ಬಾಳೆ, ಅಡಿಕೆ ಗಿಡಗಳನ್ನು ನೆಲಸಮ ಮಾಡಿವೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎನ್ನುವ ರೀತಿಯಲ್ಲಿ ಕೃಷಿ ಫಸಲನ್ನು ತಿಂದು ತೇಗುತ್ತಿವೆ. ಒಂದೆಡೆ ಪ್ರಾಕೃತಿಕ ಅಸಮಾತೋಲನ, ಮತ್ತೊಂದೆಡೆ ವನ್ಯಜೀವಿಗಳ ದಾಳಿಯಿಂದ ಅಪಾರ ನಷ್ಟವಾಗುತ್ತಿದೆ ಎಂದು ಬೆಳೆಗಾರರು ಬೇಸರ ವ್ಯಕ್ತಪಡಿಸಿದ್ದಾರೆ.

ಕಾಡಾನೆಗಳು ತೋಟಗಳು ಮಾತ್ರವಲ್ಲದೆ ಮನೆ ಬಾಗಿಲಿಗೆ ಬರುತ್ತಿದ್ದು, ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ಆತಂಕದಿಂದಲೇ ಸಂಚರಿಸಬೇಕಾದ ಅನಿವಾರ್ಯತೆ ಇದೆ. ತಕ್ಷಣ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕಾಗಿದೆ. ವಿಶೇಷ ಆಸಕ್ತಿ ತೋರಿ ಹೇರೂರು ಗ್ರಾಮದಲ್ಲಿ ಬೀಡು ಬಿಟ್ಟಿರುವ ಆನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಬೇಕು ಮತ್ತು ನಷ್ಟಕ್ಕೆ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮಳೆ ಹಾನಿ ಪ್ರದೇಶಗಳಿಗೆ ನಗರಸಭಾ ಅಧ್ಯಕ್ಷೆ ಭೇಟಿ



ಮಡಿಕೇರಿ,ಜು.8– ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಮಡಿಕೇರಿ ನಗರದ ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕರ ಆಸ್ತಿಗೆ ಹಾನಿಯಾಗಿದೆ. ಹಾನಿ ಪ್ರದೇಶಗಳಿಗೆ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಭೇಟಿ ನೀಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮನೆಯ ತಡೆಗೋಡೆ ಕುಸಿದ ರಾಣಿಪೇಟೆ, ಜಲಾವೃತಗೊಂಡು ಹಾನಿಗೊಳಗಾದ ಪ್ರದೇಶ ಹಾಗೂ ರಸ್ತೆಗಳನ್ನು ಪರಿಶೀಲಿಸಿದರು. ತೋಡು ಮತ್ತು ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುವ ಮೂಲಕ ಹೆಚ್ಚಿನ ಅಪಾಯವನ್ನು ತಪ್ಪಿಸಲಾಗುವುದು ಎಂದರು. ಬೆಟ್ಟಗುಡ್ಡ ಮತ್ತು ತಗ್ಗು ಪ್ರದೇಶದ ನಿವಾಸಿಗಳು ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ಮನವಿ ಮಾಡಿದರು. ಹಾನಿಗೊಳಗಾದ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲು ಎನ್‌ಡಿಆರ್‌ಎಫ್ ತಂಡದ ಸಹಕಾರ ಕೋರಿದರು. ವಿವಿಧ ವಾರ್ಡ್‌ಗಳ ಭೇಟಿ ಸಂದರ್ಭ ಉಪಾಧ್ಯಕ್ಷೆ ಸವಿತಾ ರಾಕೇಶ್, ಪೌರಾಯುಕ್ತ ವಿಜಯ, ಸದಸ್ಯರು ಹಾಗೂ ಅಧಿಕಾರಿಗಳು ಹಾಜರಿದ್ದರು.

ಕೊಡಗಲ್ಲಿ ಹಾಕಿಗಾಗಿ ಮತ್ತಷ್ಟು ಟರ್ಫ್ ಮೈದಾನ ಅವಶ್ಯ

ಗೋಣಿಕೊಪ್ಪ ಜು.8– ಕೊಡಗಿನ ಸಂಸ್ಕೃತಿಯಾಗಿ ಹಾಕಿ ಕ್ರೀಡೆ ಹೆಸರು ಪಡೆದುಕೊಂಡಿರುವುದರಿಂದ ಮತ್ತಷ್ಟು ಟರ್ಫ್ ಮೈದಾನ ನಿರ್ಮಾಣ ಅವಶ್ಯ ಎಂದು ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟಿಗ ವೆಂಕಟೇಶ್‌ಪ್ರಸಾದ್ ಅಭಿಪ್ರಾಯ ಪಟ್ಟರು.

ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಕಾಲ್ಸ್ ಶಾಲೆಯಲ್ಲಿ ಆಯೋಜಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಿಲ್ಲೆಯಿಂದ ರಾಷ್ಟ್ರವನ್ನು ಪ್ರತಿನಿಧಿಸಿರುವ ಹಾಕಿ ಆಟಗಾರರಲ್ಲಿ ಅದ್ಭುತ ಪ್ರತಿಭೆಯನ್ನು ನಾವು ಕಂಡಿದ್ದೇವೆ. ಇಲ್ಲಿನ ಸಂಸ್ಕೃತಿಯಲ್ಲಿ ಹಾಕಿ ಅಡಗಿರುವುದರಿಂದ ಒಲಿಂಪಿಕ್‌ನಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಇದರ ಅನುಷ್ಠಾನಕ್ಕೆ ಹಾಕಿ ಮೈದಾನ, ಮೂಲ ಸೌಕರ್ಯ ದಕ್ಕಿಸಿಕೊಳ್ಳಲು ಹೋರಾಟಗಳು ಹೆಚ್ಚಾಗಬೇಕಿದೆ ಟರ್ಫ್ ಮೈದಾನಗಳು ಪ್ರತಿಭೆಯನ್ನು ವಿಶ್ವಮಟ್ಟದ ಗುಣಮಟ್ಟ ಪಡೆದುಕೊಳ್ಳಲು ಪೂರಕವಾಗಲಿದೆ. ಜಿಲ್ಲೆಯ ಮತ್ತಷ್ಟು ಹಾಕಿ ಆಟಗಾರರನ್ನು ದೇಶ ನಿರೀಕ್ಷಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.



ಕೊಡಗಿನ ವಾತಾವರಣ, ಆಹಾರ ಪದ್ಧತಿ ಇಲ್ಲಿನ ಹಾಕಿ ಕಲಿಗಳ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ಕ್ರೀಡಾ ಕ್ಷೇತ್ರದಲ್ಲಿ ವಿಶೇಷವಾಗಿ ಕೊಡಗು ಹಾಕಿಯಲ್ಲಿ ಗುರುತಿಸಿಕೊಂಡಿರುವುದರಿಂದ ಸಾಂಪ್ರದಾಯಿಕ ಹಿನ್ನೆಲೆ ಕೂಡ ಹೊಂದಿದೆ. ಜಮೈಕಾದಿಂದ ಹೆಚ್ಚು ಓಟಗಾರರನ್ನು ವಿಶ್ವಕ್ಕೆ ದೊರೆಯುವಂತಾಗಿದೆ. ದೇಶದ ಮಹಾರಾಷ್ಟ್ರ, ಮುಂಬೈ ಭಾಗದಿಂದ ಉತ್ತಮ ಬ್ಯಾಟರ್ ಕೂಡ ದೊರೆಯುತ್ತಿದೆ. ಇದೆಲ್ಲವೂ ಸ್ಥಳೀಯವಾಗಿ ಸಾಂಪ್ರದಾಯಿಕವಾಗಿ ದೊರೆಯುವ ಸಂಪನ್ಮೂಲಗಳು. ಇದರ ಬೆಳವಣಿಗೆ ಪೋಷಣೆ ಅಗತ್ಯ ಎಂದರು.

ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಮತ್ತಷ್ಟು ಹಾಕಿ ಮೈದಾನ ನಿರ್ಮಾಣವಾಗಬೇಕು. ಸ್ಥಳೀಯವಾಗಿ ಸಾಂಪ್ರದಾಯಿಕವಾಗಿ ಬೆಳವಣಿಗೆಯಲ್ಲಿರುವ ಕ್ರೀಡೆಗೆ ಮತ್ತಷ್ಟು ಒತ್ತು ನೀಡಲು ದೇಶವನ್ನು ಗಮನ ಸೆಳೆಯುವ ಪ್ರಯತ್ನ ಕೂಡ ನಡೆಸಲಾಗುತ್ತಿದೆ. ಮೈದಾನ, ತರಬೇತಿ, ಮೂಲ ಸೌಕರ್ಯಕ್ಕೆ ಆದ್ಯತೆ ಕಲ್ಪಿಸುವಂತಾಗಬೇಕು ಎಂದರು.

ಕ್ರಿಕೆಟ್ ಕ್ಷೇತ್ರಕ್ಕೆ ರಾಬಿನ್ ಉತಪ್ಪ ಅವರಂತಹ ಪ್ರತಿಭೆ ದೊರೆತ್ತಿದೆ. ಆದರೆ, ಕ್ರಿಕೆಟ್ ಆಟಕ್ಕೆ ಮಾತ್ರ ಉತ್ತೇಜನ ನೀಡುವುದರಿಂದ ಪ್ರಯೋಜನವಾಗುವುದಿಲ್ಲ. ಕೇವಲ ಹಣಗಳಿಸಬೇಕೆಂಬ ಉದ್ದೇಶದಿಂದ ಕ್ರಿಕೆಟ್ ಆಟವನ್ನು ಗುರಿಯಾಗಿಸಿಕೊಳ್ಳುವುದು ಉತ್ತಮ ಬೆಳವಣಿಗೆಯಾಗದು. ಒಂದು ಆಟ ಸಂಸ್ಕೃತಿಯಂತೆ ಬಿಂಬಿಸಿಕೊಂಡಾದ ಅದರ ಪೋಷಣೆಗೆ ಯೋಜನೆ ರೂಪಿಸಿಕೊಳ್ಳಬೇಕಿದೆ. ಕೊಡವ ಕೌಟುಂಬಿಕ ಹಾಕಿ ಕ್ರೀಡೆ ವಿಶ್ವಕ್ಕೆ ಮಾದರಿಯಾಗಿ ದಾಖಲಾಗಿದೆ ಎಂದು ಅವರು ಹೇಳಿದರು.

ಅಂತಾರಾಷ್ಟ್ರೀಯ ಮಾಜಿ ಅಥ್ಲೆಟ್ ಅಶ್ವಿನಿ ನಾಚಪ್ಪ, ಕಾಲ್ಸ್ ಶಾಲಾ ಮುಖ್ಯಸ್ಥ ದತ್ತ ಕರುಂಬಯ್ಯ ಇತರರಿದ್ದರು.

ರಾಜ್ಯ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆ:

ರಮೇಶ್‌ಗೆ ಚಿನ್ನ



ಚಾಮರಾಜನಗರ, ಜು.8– ಕರ್ನಾಟಕ ಸ್ಟೇಟ್ ರೈಫಲ್ ಅಸೋಸಿಯೇಷನ್ ಆಯೋಜಿಸಿದ್ದ ರಾಜ್ಯ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ನಗರದ ರಮೇಶ್ ಚಿನ್ನ ಹಾಗೂ ಟೀಂ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ನ್ಯಾಷನಲ್ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಶೂಟಿಂಗ್ ರೇಂಜ್ ವತಿಯಿಂದ ಬೆಂಗಳೂರಿನಲ್ಲಿ ಜೂ.30 ರಿಂದ ಜು.8 ರವರಗೆ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಕ್ಲಬ್‌ನಲ್ಲಿ ನಡೆದ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಚಾಮರಾಜನಗರದ ರಮೇಶ್ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ತನ್ನದಾಗಿಸಿಕೊಂಡು ಮುಂದಿನ ಪ್ರೀ ನ್ಯಾಷನಲ್‌ಗೆ ತೇರ್ಗಡೆಯಾಗಿದ್ದಾರೆ. ರಮೇಶ್ ಈ ಹಿಂದೆಯೂ ರಾಜ್ಯ, ರಾಷ್ಟ್ರೀಯ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ 70 ಚಿನ್ನದ ಪದಕ ಗೆದ್ದಿದ್ದಾರೆ.

ಚಾ.ನಗರದಲ್ಲಿ ಮೆಗಾ ಲೋಕ ಅದಾಲತ್ ಯಶಸ್ವಿ

- 11 ವರ್ಷಗಳ ಬಳಿಕ ಒಂದಾದ ದಂಪತಿ
- 13 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥ

ಚಾಮರಾಜನಗರ, ಜು.8– ಜಿಲ್ಲೆಯಲ್ಲಿ ಶನಿವಾರ ನಡೆದ ಮೆಗಾ ಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು ಯಶಸ್ವಿಯಾಯಿತು.

ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಮೆಗಾ ಲೋಕ್ ಅದಾಲತ್ ನಡೆಯಿತು. ಈ ವೇಳೆ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣ, ಕೌಟುಂಬಿಕ ಪ್ರಕರಣ, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣ, ಹಣ ವಸೂಲಾತಿ ಪ್ರಕರಣ, ಎಂಎಂಡಿಆರ್ ಕಾಯ್ದೆ ಪ್ರಕರಣ, ಜನನ ನೋಂದಣಿ ಪ್ರಕರಣ, ಪಾಲು ವಿಭಾಗ, ದಾವೆ ಹಾಗೂ ಸಿವಿಲ್ ಪ್ರಕರಣ, ಕಂದಾಯ ಪ್ರಕರಣಗಳು ಸೇರಿದಂತೆ ಒಟ್ಟು 13 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥ ಪಡಿಸಲಾಯಿತು.



11 ವರ್ಷಗಳ ಬಳಿಕ ಒಂದಾದ ದಂಪತಿ: ಕಳೆದ 11 ವರ್ಷಗಳಿಂದ ಬೇರೆಯಾಗಿದ್ದ ದಂಪತಿ ಒಂದಾದ ಅಪರೂಪದ ಘಟನೆಗೂ ಅದಾಲತ್ ಸಾಕ್ಷಿಯಾಯಿತು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶನಿವಾರ ನಡೆದ ಅದಾಲತ್‌ನಲ್ಲಿ ಪೊಲೀಸ್ ಪೇದೆ ವಿ.ಆರ್. ಶ್ರೀಧರ್‌ರಾವ್ ಹಾಗೂ ಶಿಕ್ಷಕಿ ರಾಜೇಶ್ವರಿ ದಂಪತಿ ಕೌಟುಂಬಿಕ ವಿಚಾರಣೆ ಬಂದಿತ್ತು. ಈ ದಂಪತಿ ಕಳೆದ 11 ವರ್ಷಗಳಿಂದ ಬೇರೆ ಬೇರೆ ವಾಸಿಸುತ್ತಿದ್ದರು. ಇವರನ್ನು ಒಂದುಗೂಡಿಸುವಲ್ಲಿ ನ್ಯಾಯಾಲಯ ಯಶಸ್ವಿಯಾಯಿತು.

ಶ್ರೀಧರ್ ರಾವ್ ಮಂಡ್ಯ ಜಿಲ್ಲೆ ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ರಾಜೇಶ್ವರಿ ಚಾಮರಾಜನಗರ ತಾಲೂಕಿನ ನಾಗವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಧರ್‌ರಾವ್ ಮೂಲತಃ ಮಂಡ್ಯ ಜಿಲ್ಲೆ ಕೆರೆಗೋಡು ಗ್ರಾಮದವರು. ರಾಜೇಶ್ವರಿ ಚಾಮರಾಜನಗರದವರು. ಇವರು 2003ರಲ್ಲಿ ವಿವಾಹವಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಆದರೆ, ಕೆಲವು ವರ್ಷಗಳ ಹಿಂದೆ ದಂಪತಿ ನಡುವಿನ ಮನಸ್ತಾಪದಿಂದ ಬೇರ್ಪಟ್ಟು 2012ರಲ್ಲಿ ಮದ್ದೂರು ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಈ ವೇಳೆ ರಾಜೇಶ್ವರಿಯವರು ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತಂದರು. ಇದರಿಂದ ಪ್ರಕರಣ ಚಾಮರಾಜನಗರ ನ್ಯಾಯಾಲಯಕ್ಕೆ ವರ್ಗಾವಣೆಯಾಯಿತು.

ಕಳೆದ 11 ವರ್ಷಗಳಿಂದ ನ್ಯಾಯಾಲಯದಲ್ಲಿದ್ದ ಪ್ರಕರಣ ಕೊನೆಗೂ ಸುಖಾಂತ್ಯವಾಗಿದ್ದು, ಇಬ್ಬರು ಒಂದಾಗಿದ್ದಾರೆ. ಲೋಕ ಅದಾಲತ್ ಮೂಲಕ ನ್ಯಾಯಾಧೀಶರ ಸಮ್ಮುಖದಲ್ಲಿ ಇಬ್ಬರು ಒಂದಾಗಿ ಪ್ರಕರಣ ಅಂತ್ಯವಾಯಿತು.

ಜಿಂಕೆ ಬೇಟೆ: ನಾಲ್ವರು ಬೇಟೆಗಾರರ ಬಂಧನ



ಹನೂರು, ಜು.8– ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮದಲ್ಲಿ ಜಿಂಕೆ ಬೇಟೆಯಾಡಿದ್ದ ನಾಲ್ವರು ಬೇಟೆಗಾರರನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಹನೂರು ತಾಲೂಕಿನ ಬಸಪ್ಪನದೊಡ್ಡಿ ಗ್ರಾಮದ ಮುತ್ತಪ್ಪ, ಇರ್ಫಾನ್ ಬೇಗ್, ಸಲೀಂ ಹಾಗೂ ಅಜ್ಜೀಪುರ ಗ್ರಾಮದ ವೆಂಕಟೇಶ್ ಬಂಧಿತ ಆರೋಪಿಗಳು. ಇವರು ಜಿಂಕೆ ಬೇಟೆಯಾಡಿ ಮಲೆಮಹದೇಶ್ವರ ವನ್ಯಧಾಮದ ವಡಕೆಹಳ್ಳ ಅರಣ್ಯ ಪ್ರದೇಶದ ಮನೆಯೊಂದರಲ್ಲಿ ಜಿಂಕೆ ಮಾಂಸವನ್ನು ಸಿದ್ಧಪಡಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಅರಣ್ಯಾಧಿಕಾರಿಗಳು ಮನೆ ಮೇಲೆ ದಾಳಿ ನಡೆಸಿ 11 ಕೆಜಿ ಜಿಂಕೆ ಮಾಂಸ, ಎರಡು ನಾಡ ಬಂದೂಕು, ಎರಡು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದು, ನಾಲ್ವರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಪ್ರವೀಣ್ ಕುಮಾರ್, ಉಪವಲಯ ಅರಣ್ಯಾಧಿಕಾರಿಗಳಾದ ಸಾಲನ್, ಪ್ರಸಾದ್, ಅರಣ್ಯ ಪಾಲಕರಾದ ಪರಶುರಾಮ, ಅನಿಲ್ ಕುಮಾರ್ ಅರಣ್ಯ ರಕ್ಷಕರಾದ ಗಣೇಶ್, ಪ್ರಭು ಪಾಲ್ಗೊಂಡಿದ್ದರು.

ವಿವಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಕೆ

ಚಾ.ನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್



ಚಾಮರಾಜನಗರ, ಜು.8– ವಿಶ್ವ ವಿದ್ಯಾನಿಲಯಗಳಲ್ಲಿ ಮಕ್ಕಳಿಗೆ ಪದವಿ ನೀಡುವ ಜೊತೆಗೆ ಅವರನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರು ಮಾಡುವ ನಿಟ್ಟಿನಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಚಾಮರಾಜನಗರ ವಿಶ್ವ ವಿದ್ಯಾನಿಲಯ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಹೇಶ್ ಕುದರ್ ಅಭಿಮಾನಿ ಬಳಗ, ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್ ಹಾಗೂ ರೆಡ್‌ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಮಹೇಶ್ ಕುದರ್ ಹುಟ್ಟುಹಬ್ಬದ ಅಂಗವಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಒಂದು ದಿನದ ತರಬೇತಿ ಕಾರ್ಯಾಗಾರ, ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ವಿಶ್ವ ವಿದ್ಯಾಲಯಗಳಲ್ಲಿ ನೀಡುವ ಪದವಿ ಜೊತೆಗೆ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವರನ್ನು ತಯಾರು ಮಾಡುವುದು ಬಹಳ ಅವಶ್ಯಕ. ಈ ನಿಟ್ಟಿನಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದಿಂದ ಆಸಕ್ತ ವಿದ್ಯಾರ್ಥಿಗಳಿಗೆ ಖಾಯಂ ಆಗಿ ಕೆಎಎಸ್, ಎಸ್‌ಐ, ಪಿಡಿಓ, ಎಸ್‌ಡಿಎ ಮತ್ತು ಪಿಸಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡಲು ಚಿಂತನೆ ಮಾಡಿ, ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇವೆ. ಇದು ಸಾಕಾರಗೊಂಡಲ್ಲಿ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಎಸ್.ನಂಜುಂಡಸ್ವಾಮಿ, ಬಳಗದ ಅಧ್ಯಕ್ಷ ಡಾ.ಎಂ.ಕುಮಾರ್ ಚಿಕ್ಕಹೊಳೆ, ಪೌರಾಯುಕ್ತ ರಾಮದಾಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿಶ್ವೇಶ್ವರಯ್ಯ, ಸ್ಥಾನಿಕ ವೈದ್ಯಾಧಿಕಾರಿ ಡಾ.ಎಂ. ಮಹೇಶ್, ಸಂತೇಮರಹಳ್ಳಿ ಆಡಳಿತಾಧಿಕಾರಿ ವೈದ್ಯಾಧಿಕಾರಿ ಡಾ. ರೇಣುಕಾದೇವಿ, ಚಂದ್ರಮ್ಮ, ಶಶಿಕಲಾ, ಸಫಿಯಾ ಬಾನು, ಹಾಜರಿದ್ದರು.

ರೋಟರಿಯಿಂದ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ



ಚಾಮರಾಜನಗರ, ಜು.8– ನಗರದ ದೊಡ್ಡಂಗಡಿ ಬೀದಿಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ರೋಟರಿ ಸಂಸ್ಥೆಯಿಂದ ಉಚಿತ ನೋಟ್ ಬುಕ್ ವಿತರಿಸಲಾಯಿತು.

ರೋಟರಿ ಸಂಸ್ಥೆ ಅಧ್ಯಕ್ಷ ಸಿ.ಎನ್.ಚಂದ್ರಪ್ರಭ ಜೈನ್ ಮಾತನಾಡಿ, ರೋಟರಿ ಸಂಸ್ಥೆ ಶಿಕ್ಷಣ, ಆರೋಗ್ಯ, ಪರಿಸರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಇಂದು ನಗರದ ದೊಡ್ಡಂಗಡಿ ಬೀದಿಯಲ್ಲಿರುವ ಮತ್ತು ನಾನು ವಿದ್ಯಾಭ್ಯಾಸ ಮಾಡಿದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್ ಬುಕ್, ಪೆನ್, ಪೆನ್ಸಿಲ್ ವಿತರಿಸಲಾಗಿದೆ ಎಂದು.

ಶಾಲೆ ಮುಖ್ಯಶಿಕ್ಷಕಿ ಪಿ.ಶಿವರುದ್ರಮ್ಮ ಶಾಲೆ ಕಟ್ಟಡ ದುರಸ್ಥಿಯಲ್ಲಿದೆ. ರಿಪೇರಿ ಮಾಡಿಸಿಕೊಡುವಂತೆ ರೋಟರಿ ಪದಾಧಿಕಾರಿಗಳಿಗೆ ಮನವಿ ಮಾಡಿದರು. ಈ ವೇಳೆ ರೋಟರಿ ಸಂಸ್ಥೆ ಕಾರ್ಯದರ್ಶಿ ಅಬ್ದುಲ್ ಅಜೀಜ್ (ದೀನಾ), ಪ್ರಕಾಶ್, ಜಿ.ಆರ್. ಅಶ್ವಥ್ ನಾರಾಯಣ್, ಕೆ.ಎಂ.ಮಹದೇವಸ್ವಾಮಿ, ಕಾಗಲವಾಡಿ ಚಂದ್ರು, ಬಿಎಸ್‌ವಿ ಪ್ರತಿಷ್ಠಾನದ ಬಾಬು, ಎಸ್‌ಆರ್‌ಎಸ್ ಶ್ರೀನಿವಾಸ್, ಮುಂದಿನ ಸಾಲಿನ ಅಧ್ಯಕ್ಷ ಎಲ್.ನಾಗರಾಜ್, ಕಮಲ್‌ರಾಜ್, ಸುರೇಶ್, ಅಶೋಕ್, ರಮೇಶ್ ಸಿದ್ದಮಲ್ಲಪ್ಪ ಅಂಕಶೆಟ್ಟಿ, ಉಲ್ಲಾಸ್, ಸಂಜಯ್ ಜೈನ್, ಶ್ರೀನಿವಾಸನ್, ರಾಜ ಸ್ಟೋರ್ ರಾಜೇಂದ್ರಪ್ಪ, ಸುಭಾಷ್, ಸಹ ಶಿಕ್ಷಕರಾದ ಎಸ್.ಲಲಿತಮ್ಮ, ಬಿ.ಪಿ.ಶೈಲಜಾ ಹಾಜರಿದ್ದರು.

ಆಗಸ್ಟ್ ಮೊದಲ ವಾರದಲ್ಲಿ ಸಂವಿಧಾನೋತ್ಸವ ಸಮಾವೇಶ

ಚಾಮರಾಜನಗರ, ಜು.8– ದಲಿತ ಸಂಘರ್ಷ ಸಮಿತಿಗಳ ಐಕ್ಯತಾ ಹೋರಾಟ ಚಾಲನಾ ಸಮಿತಿಯಿಂದ ಆಗಸ್ಟ್ ಮೊದಲ ವಾರ ಸಂವಿಧಾನೋತ್ಸವ ಹಾಗೂ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಅಲ್ಲದೇ ಸಭೆಯಲ್ಲಿ ಸರ್ಕಾರಕ್ಕೆ 13 ಹಕ್ಕೊತ್ತಾಯಗಳನ್ನು ಮಂಡಿಸಲು ತೀರ್ಮಾನಿಸಲಾಯಿತು. ಈ ವೇಳೆ ಸಮಿತಿ ಮುಖಂಡರಾದ ಸಿ.ಎಂ.ಶಿವಣ್ಣ, ಸುರೇಶ್, ರಾಜಣ್ಣ ಸುಭಾಷ್, ನಾರಾಯಣ್, ನಂಜುಂಡಸ್ವಾಮಿ, ಸೋಮಣ್ಣ, ರಾಜೇಂದ್ರ, ರಂಗಸ್ವಾಮಿ, ಸಿದ್ದರಾಜು, ಶಿವಕುಮಾರ್, ಸುರೇಂದ್ರ ಕುಮಾರ್, ನಾಗಶೇಖರ್, ನಿವೃತ್ತ ಎಎಸ್‌ಐ ಸಿದ್ದರಾಜು, ಸಾಹಿತಿ ಸಿದ್ದರಾಜು, ಕುಮಾರ್ ಇತರರಿದ್ದರು.

ಏರೋಸ್ಪೇಸ್ ಇಂಜಿನಿಯರಿಂಗ್ ಕೋರ್ಸ್‌ಗೆ ಆಯ್ಕೆ



ಕೊಳ್ಳೇಗಾಲ, ಜು.8– ಪಟ್ಟಣದ ಸಾಹಿತಿ ಬಾಳಗುಣಸೆ ಮಂಜುನಾಥ್ ಅವರ ಪುತ್ರ ರಮಿತ್ ಗೌಡ ಇತ್ತೀಚೆಗೆ ನಡೆದ ಐಐಟಿ ಅಡ್ವಾನ್ಸ್ ಪರೀಕ್ಷೆಯಲ್ಲಿ 195ನೇ ರ್‍ಯಾಂಕ್ ಪಡೆಯುವ ಮೂಲಕ ಕಾನ್ಪುರದ ಏರೋಸ್ಪೇಸ್ ಇಂಜಿನಿಯರಿಂಗ್ ಕೋರ್ಸ್‌ಗೆ ಆಯ್ಕೆಯಾಗಿದ್ದಾರೆ.

ರಮಿತ್ ಗೌಟ ಪಟ್ಟಣದ ಲಯನ್ಸ್ ಸಂಸ್ಥೆಯಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದು, ಇದೀಗ ಏರೋಸ್ಪೇಸ್ ಇಂಜಿನಿಯರಿಂಗ್ ಕೋರ್ಸ್‌ಗೆ ಆಯ್ಕೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ. ಇವರ ಸಾಧನೆಗೆ ಉಪನ್ಯಾಸಕ ಶ್ಯಾಮ್ ಹರ್ಷ ವ್ಯಕ್ತಪಡಿಸಿದ್ದಾರೆ. ರಮಿತ್‌ಗೌಡನನ್ನು ಲಯನ್ಸ್ ಸಂಸ್ಥೆಯ ನಾಗರಾಜು, ಜಿಎಸ್‌ಎಂ ಪ್ರಸಾದ್ ಅಭಿನಂದಿಸಿದ್ದಾರೆ.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಲು ಸಲಹೆ



ಚಾಮರಾಜನಗರ, ಜು.8– ಸವಿತಾ ಸಮಾಜ ತಮ್ಮ ಕುಲ ಕಸುಬಿನ ಜೊತೆಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ ನೀಡಿದರು.

ರಾಮಸಮುದ್ರದ ಸವಿತಾ ಸಮಾಜ ಸಮುದಾಯ ಭವನದಲ್ಲಿ ನಡೆದ ಹಡಪದ ಅಪ್ಪಣ್ಣನವರ ಜಯಂತಿಯಲ್ಲಿ ಅಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಸಮಾಜದ ಬಂಧುಗಳು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯುವ ಹಾಗೂ ಜೊತೆಗೆ ಇರುವವರಿಗೂ ತಲುಪಿಸುವ ಕೆಲಸವನ್ನು ಮಾಡಬೇಕು ಎಂದು ತಿಳಿಸಿದರು.

ಬಸವಣ್ಣನವರ ಅನುಭವ ಮಂಟಪದಲ್ಲಿ ಹಡಪದ ಅಪ್ಪಣ್ಣನವರು ಸೇವೆ ಸಲ್ಲಿಸಿದ್ದರು. ಇಂದು ನಾವೆಲ್ಲ ಬಸವಣ್ಣ, ಹಡಪದ ಅಪ್ಪಣ್ಣನವರು ತೋರಿದ ಮಾರ್ಗದಲ್ಲಿ ನಡೆದು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಕೆ.ವಿ. ವೆಂಕಟರಾಜು, ಗೌರವಾಧ್ಯಕ್ಷ ಮುದ್ದುಮಾದು, ತಾಲೂಕು ಅಧ್ಯಕ್ಷ ಬಸವಣ್ಣ ಬದನಗುಪ್ಪೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಉಪಾಧ್ಯಕ್ಷ ರಂಗಸ್ವಾಮಿ, ಮಾಜಿ ಜಿಲ್ಲಾಧ್ಯಕ್ಷ ಚಿನ್ನಸ್ವಾಮಿ, ಮುಖಂಡರಾದ ನಾಗರಾಜು, ಶ್ರೀನಿವಾಸ್, ಮಹದೇವ್, ಗೋವಿಂದರಾಜು, ಮಹದೇವ್, ರಾಮಣ್ಣ, ರಂಗಸ್ವಾಮಿ, ವಸಂತ್‌ಕುಮಾರ್, ನಾಗೇಶ್, ಮಹೇಶ್, ರವಿಕುಮಾರ್ ಇತರರಿದ್ದರು.

ಮೂರನೇ ಪುಟದಿಂದ

ಭೂರಹಿತರಿಗೆ ಹಂಚುವ ಚಿಂತನೆ

ಸಂಸ್ಥೆಗಳಲ್ಲಿ ನೇಮಕಾತಿಯಲ್ಲೂ ಮೀಸಲಾತಿ ತರುವ ಉದ್ದೇಶ ಹೊಂದಿದೆ. ಜಾತಿ ಅಸಮಾನತೆ ಅಳಿಸಬೇಕಾದರೆ ಶಿಕ್ಷಣದಲ್ಲಿ ವೈಚಾರಿಕತೆ ಅಗತ್ಯವಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ನಾವು ಕೆಲವು ಕಠಿಣ ನಿಲುವು ತೆಗೆದುಕೊಳ್ಳುತ್ತೇವೆ.

ಈಗ ಗುತ್ತಿಗೆ ಆಧಾರದಲ್ಲಿ ಮಾತ್ರ ಸರ್ಕಾರಿ ನೇಮಕಾತಿಯಾಗುತ್ತಿದೆ. ಈ ಸಂದರ್ಭದಲ್ಲೂ ಮೀಸಲಾತಿ ಒತ್ತುಕೊಡುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ವಿದ್ಯಾವಂತರೇ ಮೂಢರು!: ವಿದ್ಯಾವಂತರೇ ಹೆಚ್ಚು ಹೆಚ್ಚು ಜಾತಿವಾದ, ಮೌಢ್ಯದ ಆರಾಧಕರಾಗಿರುವುದು ಬೇಸರದ ಸಂಗತಿ. ಮಕ್ಕಳಲ್ಲಿ ವಿಜ್ಞಾನಪ್ರಜ್ಞೆ, ವೈಚಾರಿಕತೆ ಬೆಂಬಲಿಸುವುದು ಸರ್ಕಾರದ ಆದ್ಯತೆ ಆಗಿದೆ ಎಂದರು. ಮಕ್ಕಳು ವಿಜ್ಞಾನವನ್ನು ಬೆಳೆಸಿ ಕೊಂಡು ವೈಚಾರಿಕವಾಗಿ ಸನ್ನದ್ಧರಾಗುವಂತೆ ನಿಟ್ಟಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡಲಿದೆ. ಬೋಧಕರು ಜಾತ್ಯತೀತವಾಗಿಲ್ಲದಿದ್ದರೆ, ಶಿಕ್ಷಕರಲ್ಲೇ ವೈಚಾರಿಕತೆ ಇಲ್ಲದಿದ್ದರೆ ಮಕ್ಕಳಲ್ಲಿ ಜ್ಞಾನದ ವಿಕಾಸ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಶಾಂತಿಯುತ ಸಮಾಜಕ್ಕೆ ಆದ್ಯತೆ: ಜಾತಿಗಳ ಮಧ್ಯದಲ್ಲಿ ಬಂಡವಾಳವನ್ನು ಆಕರ್ಷಿಸಬೇಕು ಎಂದರೆ ಶಾಂತಿ, ಸುವ್ಯವಸ್ಥೆ ಮತ್ತು ಉದ್ಯಮ ಸ್ನೇಹಿ ವಾತಾವರಣ ಇರಬೇಕು. ಬಂಡವಾಳ ಹೂಡಿಕೆಯಿಂದ ಉದ್ಯೋಗ ಸೃಷ್ಟಿಯಾಗಿ ಜಿಡಿಪಿ ಹೆಚ್ಚುತ್ತದೆ. ಹೀಗಾಗಿ ಜಾತಿ-ಧರ್ಮದ ಸಂಘರ್ಷ ಇಲ್ಲದ ಶಾಂತಿಯುತ ಸಮಾಜ ಇರಬೇಕು ಎಂದರು.

ಯುವ ಸಮೂಹಕ್ಕೆ ಸ್ವಾಗತ: ನಮ್ಮ ಯುವ ಸಮೂಹದ ಶಕ್ತಿ ಮತ್ತು ಚೈತನ್ಯ ದುರುಪಯೋಗ ಆಗಬಾರದು, ಜಾತಿ-ಧರ್ಮದ ಹೆಸರಲ್ಲಿ ಗಲಭೆಗಳಿಗೆ ಯುವ ಸಮೂಹ ದುರ್ಬಳಕೆ ಆಗುವುದನ್ನು ತಪ್ಪಿಸುವ ರೀತಿಯಲ್ಲಿ ನಮ್ಮ ಸರ್ಕಾರ ನೀತಿ ರೂಪಿಸಿದೆ. ಇದಕ್ಕಾಗಿ ಕೌಶಲ್ಯ ತರಬೇತಿ ಜತೆಗೆ ನಿರುದ್ಯೋಗಿ ಯುವ ಸಮೂಹಕ್ಕೆ 24 ತಿಂಗಳ ಕಾಲ ಯುವನಿಧಿ ನೀಡಲು ನಿರ್ಧರಿಸಿದ್ದೇವೆ ಎಂದರು. ಕೈಗಾರಿಕೋ ದ್ಯಮಿಗಳ ಜತೆ ಸಭೆ ಮಾಡಿದ್ದೇನೆ. ಅವರಿಗೆ ಯಾವ ರೀತಿಯ ಕೌಶಲ್ಯದ ವಿದ್ಯಾರ್ಥಿಗಳ ಅಗತ್ಯವಿದೆ ಎನ್ನುವ ಬಗ್ಗೆ ಚರ್ಚಿಸಿದ್ದೇನೆ. ಅದಕ್ಕೆ ತಕ್ಕಂತೆ ಶಿಕ್ಷಣವನ್ನು ರೂಪಿಸುವ, ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಅರ್ಹರನ್ನು ಸೃಷ್ಟಿಸಬೇಕಾಗುತ್ತದೆ.

ಮಲೆನಾಡಿನ ಜಿಲ್ಲೆಗಳಲ್ಲಿ ಹಲವು ವರ್ಷಗಳಿಂದ ಇರುವ ಶರಾವತಿ ಸಂತ್ರಸ್ತರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಭರವಸೆ ನೀಡಿದರು.

ರಾಜ್ಯ ಶಾಂತಿಯ ತೋಟ: ಹಿಂದಿನ ಸರ್ಕಾರದಲ್ಲಿ ಅನೈತಿಕ ಪೊಲೀಸ್‌ಗಿರಿ ಅತ್ಯಂತ ನಿರ್ಲಜ್ಜತನದಿಂದ ಆಚರಿಸಲ್ಪಡುತ್ತಿತ್ತು. ನಾವು ಅಧಿಕಾರಕ್ಕೆ ಬರುತ್ತಿದ್ದಂತೆ ಅನೈತಿಕ ಪೊಲೀಸ್‌ಗಿರಿಗೆ ಬ್ರೇಕ್ ಎಳೆದಿದ್ದೇವೆ. ಸಮಸಮಾಜ ನಿರ್ಮಾಣ ಆಗದ ಹೊರತು ದಲಿತರ, ಅಲ್ಪ ಸಂಖ್ಯಾತರ, ಹಿಂದುಳಿದವರ ಮೇಲೆ ದೌರ್ಜನ್ಯ ಹೋಗುವುದಿಲ್ಲ. ಹೀಗಾಗಿ ಕುವೆಂಪು ಅವರ ಮಾತಿನಂತೆ ರಾಜ್ಯವನ್ನು ಶಾಂತಿಯ ತೋಟ ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಪ್ರಯತ್ನಿಸುತ್ತಿದೆ.

ಅಕಾಡೆಮಿ, ಪ್ರಾಧಿಕಾರಗಳಿಗೆ ನೇಮಕ ಮಾಡಲು ಒಂದು ಆಯ್ಕೆ ಸಮಿತಿ ಮಾಡುತ್ತೇವೆ. ಈ ಆಯ್ಕೆ ಸಮಿತಿ ಮತಾಂಧ ಮತ್ತು ಸಮಾಜ ವಿಭಜಿಸುವ ಮನಸ್ಥಿತಿಯವರು ಒಳಗೆ ಪ್ರವೇಶಿಸದಂತೆ ಸ್ಕ್ರೀನಿಂಗ್ ನಡೆಸುತ್ತದೆ ಎಂದರು. ಮಹಿಳಾ ಉದ್ಯೋಗಿ ಹಾಗೂ ವಿದ್ಯಾರ್ಥಿನಿಯರಿಗೆ ರಜೆ ಘೋಷಿಸಬೇಕು ಎನ್ನುವ ಬೇಡಿಕೆಯೊಂದಕ್ಕೆ ಉತ್ತರಿಸಿದ ಸಿಎಂ ಈ ಬಗ್ಗೆ ಪರಿಶೀಲಿಸಿ ಯೋಗ್ಯ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಜೈನ ಮುನಿಯ ಭೀಕರ ಹತ್ಯೆ

ಸಹಕಾರದೊಂದಿಗೆ ಅಪಹರಿಸಿ ಹತ್ಯೆಗೈದ ನಂತರ ದೇಹ ಯಾರಿಗೂ ಸಿಗಬಾರದು ಎಂಬ ಕಾರಣಕ್ಕಾಗಿ ತುಂಡು ತುಂಡು ಮಾಡಿ ತೆರೆದ ಕೊಳವೆ ಬಾವಿಯಲ್ಲಿ ಹಾಕಿದ್ದ ಎಂದು ಹೇಳಲಾಗಿದೆ. ಭಕ್ತಾದಿಗಳು ನಾಪತ್ತೆಯಾಗಿದ್ದ ಜೈನಮುನಿಗಳನ್ನು ಹುಡುಕುತ್ತಿದ್ದ ವೇಳೆ ಈತನೂ ಕೂಡ ಅವರೊಂದಿಗೆ ಸೇರಿ ಹುಡುಕಾಟ ನಡೆಸಿದ್ದ ಎನ್ನಲಾಗಿದ್ದು, ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿ ತನಿಖೆಗಾಗಿ ಪೊಲೀಸರು ಆಶ್ರಮಕ್ಕೆ ಬಂದಾಗಲೂ ಈತ ಅಲ್ಲೇ ಇದ್ದ. ಜೈನಮುನಿಗಳನ್ನು ಪರಿಚಿತರೇ ಅಪಹರಿಸಿರಬಹುದು ಎಂದು ಶಂಕಿಸಿದ್ದ ಪೊಲೀಸರು, ನಾರಾಯಣ ಮಾಳಿ ವರ್ತನೆಯಿಂದ ಅನುಮಾನ ಗೊಂಡು ಆತನನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಹತ್ಯೆ ಪ್ರಕರಣ ಬಯಲಾಗಿದೆ.

ವಿದ್ಯುತ್ ಶಾಕ್ ಕೊಟ್ಟು ಹತ್ಯೆ?: ಮತ್ತೊಂದು ಮೂಲದ ಪ್ರಕಾರ ಜೈನಮುನಿಗಳಿಗೆ ಆಶ್ರಮದಲ್ಲೇ ವಿದ್ಯುತ್ ಶಾಕ್ ಕೊಟ್ಟು ಹತ್ಯೆಗೈದ ನಂತರ ದೇಹವನ್ನು ಪಿಟಕದಲ್ಲಿರಿಸಿ ಗ್ರಾಮಕ್ಕೆ ಕೊಂಡೊಯ್ದು ತುಂಡರಿಸಿ ಬೋರ್‌ವೆಲ್‌ನಲ್ಲಿ ಹಾಕಲಾಗಿದೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಜೈನಮುನಿಗಳ ಪೂರ್ವಾಶ್ರಮದ ಸಂಬಂಧಿ ಪ್ರದೀಪ್, ಜೈನಮುನಿಗಳನ್ನು ಆಶ್ರಮದಲ್ಲೇ ವಿದ್ಯುತ್ ಶಾಕ್ ಕೊಟ್ಟು ಹತ್ಯೆ ಮಾಡಲಾಗಿದೆ. ಅವರನ್ನು ಹತ್ಯೆಗೈದ ನಾರಾಯಣ ಮಾಳಿ ಆಶ್ರಮದಲ್ಲೇ ಕೆಲಸ ಮಾಡುತ್ತಿದ್ದ. ಅವನಿಗೆ ಕಷ್ಟವಿದ್ದಾಗ ಮುನಿಗಳು ಹಣ ನೀಡುತ್ತಿದ್ದರು ಎಂದು ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲಾ ಎಸ್ಪಿ ಡಾ. ಸಂಜೀವ್ ಪಾಟೀಲ್ ಮಾತನಾಡಿ, ಸ್ವಾಮೀಜಿಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಿದ್ದೇವೆ. ಕೊಟ್ಟ ಹಣವನ್ನು ಹಿಂತಿರುಗಿಸುವಂತೆ ಕೇಳಿದ್ದಕ್ಕೆ ಕೊಲೆ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಸಾಕ್ಷ್ಯಾಧಾರ ಕಲೆ ಹಾಕಿ ನ್ಯಾಯಾಲಯಕ್ಕೆ ನೀಡಬೇಕಾಗಿರುವ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಸ್ಥಳಕ್ಕೆ ಯಾರಿಗೂ ಪ್ರವೇಶವಿಲ್ಲ. ಈ ಹತ್ಯೆಗೆ ಬೇರೆ ವ್ಯವಹಾರ ನಾದರೂ ಕಾರಣವಾಗಿತ್ತೇ ಎಂಬುದರ ಬಗ್ಗೆ ಕೂಡ ತನಿಖೆ ನಡೆಸಲಾಗುತ್ತಿದೆ ಎಂದರು.

ಸಮಗ್ರ ತನಿಖೆ ಸಿಎಂ ಸೂಚನೆ: ಜೈನಮುನಿಗಳ ಹತ್ಯೆಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಪ್ರಕರಣದಲ್ಲಿ ಸಮಗ್ರ ತನಿಖೆ ನಡೆಸಿ ಆರೋಪಿಗಳಿಗೆ ಶಿಕ್ಷೆ ಕೊಡಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕಾನೂನು ಬಾಹಿರ ಕೃತ್ಯ ಎಸಗುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಇನ್ನು ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಕೃತ್ಯ ಎಸಗಿದವರು ಕಾನೂನಿನಿಂದ ತಪ್ಪಿಸಿಕೊಳ್ಳಬಾರದು ಎಂದು ಅಧಿಕಾರಿಗಳಿಗೆ ತಿಳಿಸಿರುವುದಾಗಿ ಸಿಎಂ ಹೇಳಿದರು.

ಖರೀದಿ ದರ ಹೆಚ್ಚಳ

ಈ ಎರಡನ್ನು ವಿಲೀನ ಮಾಡುವುದಿಲ್ಲ ಎಂದು ರಾಜಣ್ಣ ಸ್ಪಷ್ಟಪಡಿಸಿದರು. ಗೋ ಹತ್ಯೆ ನಿಷೇಧ ಕಾಯ್ದೆ ರದ್ದು ಮಾಡುವ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಹೇಳಿಕೆಯನ್ನು ಸಮರ್ಥಿಸಿಕೊಂಡ ರಾಜಣ್ಣ, ನಾನು ಮಾಂಸ ತಿನ್ನುತ್ತೇನೆ. ನೀವು ಬೇಡವೆಂದರೂ ನಾನು ನಿಲ್ಲಿಸುವುದಿಲ್ಲ. ಹಾಗೆಯೇ ವೆಜ್ ತಿನ್ನುವವರಿಗೆ ಮಾಂಸ ತಿನ್ನಿ ಅಂತ ಹೇಳಲು ಆಗುವುದೇ ಎಂದು ಪ್ರಶ್ನಿಸಿದರು. ಯಾರಿಗೆ ಯಾವ ಆಹಾರ ಬೇಕೋ ಅದನ್ನು ಬಳಸುತ್ತಾರೆ. ಇದು ಇವತ್ತು, ನಿನ್ನೆಯದಲ್ಲ, ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಗೋ ಹತ್ಯೆ ಎಂಬುವುದು ಸೂಕ್ಷ್ಮ ವಿಚಾರವಾಗಿದೆ. ಹಸು ಕಡಿ ಅಥವಾ ಬೇಡ ಎಂದು ಹೇಳುವುದಿಲ್ಲ. ಒಟ್ಟಾರೆ ರೈತರ ಅನುಕೂಲಕ್ಕೆ ಕಾಯ್ದೆ ಮಾಡಬೇಕಿದೆ. ಇದರಲ್ಲಿ ಹಸು ಅಥವಾ ಮತ್ತೊಂದು ಎಂಬ ಪ್ರಶ್ನೆ ಬರುವುದಿಲ್ಲ. ಮುಂದಿನ ದಿನಗಳಲ್ಲಿ ಎಲ್ಲರೊಂದಿಗೆ ಚರ್ಚೆ ಮಾಡಿ ಈ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ರಾಜಣ್ಣ ಸ್ಪಷ್ಟಪಡಿಸಿದರು.

ಮಹಾ ಖತರ್ನಾಕ್ ನಕಲಿ ವೈದ್ಯ

70 ಲಕ್ಷ ರೂ. ಲೋನ್ ತೆಗೆದುಕೊಡುವಂತೆ ಒತ್ತಾಯಿಸಿದ್ದಾನೆ. ಅದಕ್ಕೆ ಅವರು ಒಪ್ಪದಿದ್ದಾಗ ಫೆಬ್ರವರಿ 5ರಂದು ಹೇಮಲತಾ ಮನೆಯಲ್ಲಿಟ್ಟಿದ್ದ 15 ಲಕ್ಷ ರೂ. ನಗದು ಹಾಗು 20 ತೊಲ ಚಿನ್ನಾಭರಣ ತೆಗೆದುಕೊಂಡು ಹೋದವನು ಮತ್ತೆ ಬಂದಿಲ್ಲ. ಆತನಿಗೆ ಫೋನ್ ಮಾಡಿದಾಗ ಸ್ವಿಚ್‌ಆಫ್ ಆಗಿತ್ತು. ಮಹೇಶ್ ಖ್ಯಾತ ವೈದ್ಯನೆಂದು ನಂಬಿಸಿದ್ದರಿಂದ ಮರಳಿ ಬರಬಹುದೆಂದು ಹೇಮಲತಾ ಕಾಯುತ್ತಿದ್ದರು. ಈ ಮಧ್ಯೆ ಬೆಂಗಳೂರಿನ ದಿವ್ಯ ಎಂಬಾಕೆ ಆರ್.ಟಿ.ನಗರದ ಇವರ ಮನೆಗೆ ಬಂದು ಮಹೇಶ್ ತನ್ನನ್ನೂ ಕೂಡ ಮದುವೆಯಾಗಿರುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ಕಳೆದ ಜೂನ್ 13ರಂದು ಹೇಮಲತಾ ಕುವೆಂಪುನಗರ ಠಾಣೆಗೆ ದೂರು ಸಲ್ಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತುಮಕೂರಿನಲ್ಲಿ ಮಹೇಶ್‌ನನ್ನು ಬಂಧಿಸಿ 2 ಕಾರು, 7 ಮೊಬೈಲ್ ಹಾಗೂ 2 ಲಕ್ಷ ರೂ. ನಗದು ಮತ್ತು ಒಂದು ಬ್ರಾಸ್‌ಲೆಟ್, 2 ಚಿನ್ನದ ಬಳೆ, ಒಂದು ನೆಕ್ಲೇಸ್, ಚಿನ್ನದ ಉಂಗುರ ವಶಪಡಿಸಿಕೊಂಡಿದ್ದಾರೆ. ಈತ ಪ್ರತಿಷ್ಠಿತ ಹುದ್ದೆಯಲ್ಲಿರುವವರನ್ನು ಮದುವೆಯಾಗಿ ವಂಚಿಸುತ್ತಿದ್ದರಿಂದ ಅವರು ಈತನ ವಿರುದ್ಧ ಪೊಲೀಸರಿಗೆ ದೂರು ನೀಡುತ್ತಿರಲಿಲ್ಲ ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೇ ಬೇರೆ ರಾಜ್ಯಗಳ ಮಹಿಳೆಯರನ್ನು ಕೂಡ ಈತ ವಿವಾಹವಾಗಿದ್ದಾನೆ. ತಾನು ಪ್ರಖ್ಯಾತ ವೈದ್ಯನಾಗಿದ್ದು, ಹಲವಾರು ಪ್ರತಿಷ್ಠಿತ ಆಸ್ಪತ್ರೆಗಳು ತನ್ನ ಸೇವೆ ಪಡೆಯುತ್ತಿವೆ ಎಂದು ಹೇಳಿಕೊಳ್ಳುತ್ತಿದ್ದ ಈತ, ತಾನು ಮದುವೆಯಾದ ಮಹಿಳೆಯನ್ನು ಯಾವುದಾದರೂ ಊರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿರಿಸಿ ತಿಂಗಳಿಗೆ ಒಂದು ಅಥವಾ ಎರಡು ಬಾರಿ ಅವರ ಮನೆಗೆ ತೆರಳುತ್ತಿದ್ದ. ಅದೇ ವೇಳೆ ತನ್ನ ಮೇಲೆ ಸಿವಿಲ್ ಕೇಸ್ ಇದ್ದು, ಅದರ ವಿಚಾರಣೆಗೆ ಪೊಲೀಸರು ಹುಡುಕಿಕೊಂಡು ಬರಬಹುದು. ಆ ರೀತಿ ಪೊಲೀಸರು ಬಂದು ತನ್ನ ಬಗ್ಗೆ ವಿಚಾರಿಸಿದರೆ ಗೊತ್ತಿಲ್ಲ ಎಂದು ಹೇಳುವಂತೆ ಮಹಿಳೆಯರಿಗೆ ಹೇಳುತ್ತಿದ್ದ. ತನ್ನ ಪತಿಯನ್ನು ಪೊಲೀಸರು ಬಂಧಿಸಿಬಿಡಬಹುದು ಎಂಬ ಹೆದರಿಕೆಯಿಂದ ಈತನ ಬೆದರಿಕೆಗೆ ಬಿದ್ದಿದ್ದ ಮಹಿಳೆಯರು, ಪೊಲೀಸರು ಬಂದರೂ ಕೂಡ ಈತನ ಬಗ್ಗೆ ಹೇಳುತ್ತಿರಲಿಲ್ಲ ಎಂದು ಈತನೇ ಪೊಲೀಸರಿಗೆ ತಿಳಿಸಿದ್ದಾನೆ. ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಆದೇಶದ ಮೇರೆಗೆ ಡಿಸಿಪಿ ಮುತ್ತುರಾಜ್, ಕೆಆರ್.ಉಪವಿಭಾಗದ ಎಸಿಪಿ ಗಂಗಾಧರಸ್ವಾಮಿ, ಕುವೆಂಪುನಗರ ಇನ್ಸ್‌ಪೆಕ್ಟರ್ ಎಲ್. ಅರುಣ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಎಂ.ರಾಧಾ, ಎಸ್.ಪಿ. ಗೋಪಾಲ್, ಎಎಸ್‌ಐ ನಂಜುಂಡಸ್ವಾಮಿ, ಸಿಬ್ಬಂದಿಗಳಾದ ಎಂ.ಪಿ.ಮಂಜುನಾಥ್, ಆನಂದ್, ಕುಬೇರ್, ಹಜರತ್, ಸುರೇಶ್, ತಾಂತ್ರಿಕ ವಿಭಾಗದ ಸಿಬ್ಬಂದಿ ಕುಮಾರ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಇಂತಹ ಹಲವಾರು ಪ್ರಕರಣಗಳು ಬೆಳಕಿಗೆ ಬಂದಿದ್ದರೂ ಅವಮಾನಕ್ಕೆ ಅಂಜಿ ಮಹಿಳೆಯರು ಮೋಸ ಹೋಗುತ್ತಲೇ ಇದ್ದಾರೆ. ಇನ್ನು ಮುಂದಾದರೂ ಮದುವೆಗೆ ಸಂಬಂಧಿಸಿದ ವೆಬ್‌ಸೈಟ್‌ಗಳಲ್ಲಿ ಬರುವ ಆಫರ್‌ಗಳನ್ನು ವಿಚಾರಿಸಿ ನಂಬಿಕೆ ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ.

-ಬಿ.ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತರು

ಭಾರತೀಯ ಸಂಸ್ಕೃತಿಯಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತ

ಸಂಸದ ವಿ.ಶ್ರೀನಿವಾಸ ಪ್ರಸಾದ್ ವಿಷಾದ



ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಶನಿವಾರ ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪುಷ್ಪ ನಮನ ಸಲ್ಲಿಸುವ ಮೂಲಕ ಈ ಮೂವರು ಮಹನೀಯರ ಜಯಂತಿ ಉದ್ಘಾಟಿಸಿದರು.

ಮೈಸೂರು,ಜು.8(ಪಿಎಂ)- ಅಸ್ಪೃಶ್ಯತೆ ಭಾರತೀಯ ಸಂಸ್ಕೃತಿಯಲ್ಲಿ ಭಾರೀ ಆಳವಾಗಿ ಬೇರು ಬಿಟ್ಟಿದ್ದು, ಇಂದಿಗೂ ಜೀವಂತವಾಗಿದೆ. ಈ ಘಳಿಗೆಯಲ್ಲಿಯೂ ಹೀನವಾದ ಈ ಸಂಸ್ಕೃತಿ ನಡೆಯುತ್ತಿದೆ. ಇದರ ನಿರ್ಮೂಲನೆಗೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ಸೇರಿದಂತೆ ಮಹಾನ್ ಚಿಂತಕರ ಸ್ಮರಣೆಯೊಂದಿಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್, ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 2,567ನೇ ಬುದ್ಧ ಜಯಂತಿ, 890ನೇ ಬಸವ ಜಯಂತಿ ಹಾಗೂ 132ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಯಿಂದ ಶೋಷಿತರು ಬದುಕಬೇಕೆಂಬುದು ಅಂಬೇಡ್ಕರರ ಕನಸು. ಆದರೆ ದಲಿತರು ಇಂದಿಗೂ ಅಸ್ಪೃಶ್ಯತೆಯಿಂದ ಬಳಲುತ್ತಿದ್ದಾರೆ. ಅಂಬೇಡ್ಕರ್ ಬಾಲ್ಯದಿಂದಲೇ ಅಸ್ಪೃಶ್ಯತೆ ನೋವು ಅನುಭವಿಸಿದರು. ನಾವು (ದಲಿತ ಸಮುದಾಯ) ಮೇಲೆ ಬರಬೇಕಾದರೆ ಶಿಕ್ಷಣಕ್ಕೆ ಒತ್ತು ನೀಡಬೇಕು. ವಿದ್ಯಾವಂತರಾದರೆ ಮಾತ್ರವೇ ಅಸ್ಪೃಶ್ಯತೆ, ಶೋಷಣೆ, ದಬ್ಬಾಳಿಕೆ ಮೆಟ್ಟಿ ನಿಲ್ಲಬಹುದು ಎಂದರು.

> ಬುದ್ಧ, ಬಸವ ಮತ್ತು ಅಂಬೇಡ್ಕರ್ ಅರಿವಿನ ಬೆಳಕು ನೀಡಿದ ಮಹನೀಯರು. ಕಾಲಕಾಲಕ್ಕೆ ಅವರ ಸ್ಮರಣೆ ಅಗತ್ಯ ಈ ಮಹನೀಯರು ಸಮಾಜದಲ್ಲಿ ಮೌಢ್ಯ, ಭ್ರಮೆ ಬಿತ್ತಲಿಲ್ಲ. ಬದಲಿಗೆ ಜ್ಞಾನ ಮತ್ತು ಅರಿವು ಬಿತ್ತಿದರು. ಇವರು ಮನುಕುಲದ ಬೆಳಕು.
>
> -ಡಾ.ನೀಲಗಿರಿ ತಳವಾರ

ಭಾರತದ ಸಂವಿಧಾನ ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವಾಗಿದ್ದು, ಒಂದು ವೇಳೆ ಡಾ.ಅಂಬೇಡ್ಕರ್ ಅವರಿಗೆ ಸಂವಿಧಾನ ಕರಡು ಸಮಿತಿ ಅಧ್ಯಕ್ಷ ಸ್ಥಾನ ದೊರೆಯದಿದ್ದರೆ, ದೇಶಕ್ಕೆ ಇಂತಹ ಅತ್ಯುತ್ತಮ ಸಂವಿಧಾನ ಕೈತಪ್ಪುತ್ತಿತ್ತು. ಸ್ವಾತಂತ್ರ್ಯ ನಂತರ ದೇಶದ ಜನತೆಯ ಸಮಸ್ಯೆಗಳು, ಜಾತಿ ಪದ್ಧತಿ ಮೊದಲಾದ ಎಲ್ಲವನ್ನೂ ಅಧ್ಯಯನ ಮಾಡಿದ ಅಂಬೇಡ್ಕರ್ ಅವರು, ಈ ದೇಶದ ಜನತೆಯ ಶ್ರೇಯೋಭಿವೃದ್ಧಿ ದೃಷ್ಟಿಯಿಂದ ಅತ್ಯುತ್ತಮ ಸಂವಿಧಾನ ನೀಡಿದರು. ಅವರು ಧ್ವನಿ ಇಲ್ಲದವರಿಗೆ ಸಂವಿಧಾನದ ಮೂಲಕ ಧ್ವನಿ ನೀಡಿದ್ದಾರೆ ಎಂದು ಸ್ಮರಿಸಿದರು.

ನಾನು ಸುದೀರ್ಘ ಕಾಲ ಸಂಸತ್ ಸದಸ್ಯನಾಗಿದ್ದು, ಈ ದೇಶದ ಎಲ್ಲಾ ಸಮಸ್ಯೆಗಳು ಸಂಸತ್‌ನಲ್ಲಿ ಚರ್ಚೆಯಾಗುತ್ತವೆ. ಎಲ್ಲಾ ಸಮಸ್ಯೆಗಳಿಗೂ ಸಿದೌಷಧ ಸಂವಿಧಾನ. ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಸೇರಿದಂತೆ ಯಾವುದೇ ಕ್ಷೇತ್ರದ ಸಮಸ್ಯೆಯಾದರೂ ಸಂಸತ್‌ಗೆ ಬರಲೇಬೇಕು. ಸಂವಿಧಾನದಡಿಯಲ್ಲೇ ಸಂಸತ್ ನಡೆಯಬೇಕು ಎಂದರು.

> ಬುದ್ಧನಂತಹ ಮಹಾಜ್ಞಾನಿಗೆ ಜನ್ಮ ನೀಡಿದ ಈ ದೇಶ ನಿಜಕ್ಕೂ ಧನ್ಯ. ಜಾಗತಿಕ ಮಟ್ಟದಲ್ಲಿ ಎಲ್ಲಾ ಕಾಲಕ್ಕೂ ಸಲ್ಲುವಂತಹ ಚಿಂತನೆಗಳನ್ನು ಬುದ್ಧ ಗುರುಗಳು ನೀಡಿದ್ದಾರೆ. ವೈಜ್ಞಾನಿಕ, ವೈಚಾರಿಕತೆಯಿಂದ ಕೂಡಿದ ಸತ್ಯ ಸಂದೇಶ ನೀಡಿದ್ದಾರೆ. ಜಗತ್ತಿನ ಉಗಮದ ಬಗ್ಗೆ ಅನೇಕ ಕಾಲ್ಪನಿಕ ಚಿಂತನೆಗಳು ಇವೆ. ಆದರೆ ಬುದ್ಧಗುರುಗಳು ಈ ಜಗತ್ತು ಸ್ವಯಂಚಾಲಿತ ಎಂಬ ಸತ್ಯ ಸಂಗತಿ ತಿಳಿಸಿದ್ದಾರೆ.
>
> -ಡಾ.ಕಲ್ಯಾಣಸಿರಿ ಭಂತೇಜಿ

ಡಾ.ಅಂಬೇಡ್ಕರ್ ಅವರನ್ನು ವಿಶ್ವಜ್ಞಾನಿ ಎಂದೇ ಬಣ್ಣಿಸಲಾಗಿದ್ದು, ಈ ಸಭಾಂಗಣಕ್ಕೂ ವಿಶ್ವಜ್ಞಾನಿ ಸಭಾಂಗಣ ಎಂದು ನಾಮಕರಣ ಮಾಡಲಾಗಿದೆ ಆದರೆ ಅಂಬೇಡ್ಕರ್ ಅವರನ್ನು ವಿಶ್ವಜ್ಞಾನಿ ಎಂದು ಬಣ್ಣಿಸುವುದು ಬಹಳ ಜನಕ್ಕೆ ಹಿಡಿಸದೆಯೂ ಇರಬಹುದು. ಆದರೆ ಹೀಗೆ ಬಣ್ಣಿಸುವಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ ಅಂಬೇಡ್ಕರ್ ಅವರ ಪರಿಶ್ರಮ ಮತ್ತು ಜ್ಞಾನ ವಿಸ್ತಾರವನ್ನು ಈ ದೇಶದ ಜನತೆ ಅರ್ಥ ಮಾಡಿಕೊಳ್ಳಬೇಕು ಎಂದು ಕೋರಿದರು.

ಅಂಬೇಡ್ಕರ್‌ರಂತೆ ಮತ್ತೊಬ್ಬ ನಾಯಕರಿಲ್ಲ ಭಾರತದ ಎಲ್ಲಾ ನಾಯಕರ ಬಗ್ಗೆ ನಮಗೆ ಗೌರವವಿದೆ. ಆದರೆ ಅಂಬೇಡ್ಕರ್ ಅವರಂತೆ ನೋವುಂಡು ಸಾಧನೆ ಮಾಡಿದ ಮತ್ತೊಬ್ಬ ನಾಯಕರಿಲ್ಲ. ಅವಮಾನಗಳ ಪ್ರತಾಪದಿಂದ ಮೇಲೆದ್ದು ಬಂದವರು ಅಂಬೇಡ್ಕರ್. ಮಹಾತ್ಮ ಗಾಂಧಿ, ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್ ಸೇರಿದಂತೆ ಎಲ್ಲಾ ನಾಯಕರ ಬಗ್ಗೆಯೂ ನಮಗೆ ಗೌರವವಿದೆ. ಅಂಬೇಡ್ಕರ್ ಅವರ ಹೊರತಾಗಿ ಈ ಎಲ್ಲಾ ನಾಯಕರಿಗೆ ಪ್ರೀತಿ-ಗೌರವ ಎಲ್ಲವೂ ಇತ್ತು. ಆದರೆ ಅಂಬೇಡ್ಕರ್ ನಿರಂತರವಾಗಿ ಅಸ್ಪೃಶ್ಯತೆ ನೋವುಂಡು ಅದರ ನಡುವೆಯೂ ತಮ್ಮ ಪರಿಶ್ರಮ, ಹೋರಾಟ, ಚಿಂತನೆಗಳಿಂದ ನಾಯಕರಾಗಿ ಬೆಳೆದರು ಎಂದು ಸ್ಮರಿಸಿದರು.

ಬುದ್ಧ, ಬಸವ ಮತ್ತು ಅಂಬೇಡ್ಕರ್ ಮಹಾನ್ ಮಾನವತಾವಾದಿಗಳು. ಜಗತ್ತಿನ ಶ್ರೇಷ್ಠ ಚಿಂತಕರು. ಇವರು ಜಗತ್ತಿನ ಕಲ್ಯಾಣ ಬಯಸಿದವರು. ಪ್ರಸ್ತುತದಲ್ಲೂ ಜಗತ್ತಿನ ಎಲ್ಲೆಡೆ ಸಮಸ್ಯೆ ಎದುರಾದರೆ ಪರಿಹಾರಕ್ಕಾಗಿ ಬುದ್ಧನ ಚಿಂತನೆಯತ್ತ ನೋಡಲಾಗುತ್ತದೆ. ಬುದ್ಧ ಗುರುಗಳು ಭಾರತದಲ್ಲಿ ಜನ್ಮತಾಳಿದವರು. ಜೊತೆಗೆ ಅವರಿಂದ ಬೌದ್ಧ ಧರ್ಮ ಸ್ಥಾಪನೆಯಾಗಿದ್ದೂ ಇಲ್ಲೇ. ಬೌದ್ಧ ಧರ್ಮ ಇಲ್ಲಿ ಬೆಳೆಯಲಿಲ್ಲವಾದರೂ ಚೀನಾ, ಜಪಾನ್ ಮೊದಲಾದ ರಾಷ್ಟ್ರಗಳಲ್ಲಿ ಬೆಳೆದಿದ್ದು, ಇದೀಗ ವಿಶ್ವದ ಬೆಳಕಾಗಿ ಕಂಗೊಳಿಸುತ್ತಿದೆ ಎಂದು ನುಡಿದರು.

ಡಾ.ಅಂಬೇಡ್ಕರ್ ಭಾರತದಲ್ಲಿ ಬೌದ್ಧ ಧರ್ಮದ ಪುನರುತ್ಥಾನ ಮಾಡಿದರು. ಅವರು 30 ವರ್ಷಗಳಿಗೂ ಹೆಚ್ಚು ಕಾಲ ಎಲ್ಲಾ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಕೊನೆಗೆ ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಇದೇ ವೇಳೆ 'ಬುದ್ಧ ಮೋಕ್ಷದಾತನಲ್ಲ. ಮಾರ್ಗದಾತ' ಎಂದು ಸಂದೇಶ ನೀಡಿದ್ದಾರೆ. ಬುದ್ಧರ ಚಿಂತನೆಯಲ್ಲಿ ವಾಸ್ತವಿಕತೆ, ವೈಜ್ಞಾನಿಕತೆ, ವೈಚಾರಿಕತೆ ಇದೆ. ಹಾಗಾಗಿ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿ, ಅನಂತರ ಅದರ ಪುನರುತ್ಥಾನ ಮಾಡಿದರು. ಬುದ್ಧನ ಕಾಲದಲ್ಲಿ ಜಾತಿರಹಿತ ಸಮಾಜ ಇತ್ತು. ಜಗತ್ತಿನ ಎಲ್ಲಾ ವಿಷಯ ತಿಳಿದವರು ಯಾರಾದರೂ ಇದ್ದರೆ ಅದು ಬುದ್ಧ ಎಂದು ಎ.ಆರ್.ಕೃಷ್ಣಶಾಸ್ತ್ರಿಯವರು ಬಣ್ಣಿಸಿದ್ದಾರೆ ಎಂದು ಹೇಳಿದರು.

'ವಿಶ್ವದ ಶ್ರೇಷ್ಠ ಚಿಂತಕ ಬುದ್ಧಗುರು' ಕುರಿತು ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, 'ಸಾಮಾಜಿಕ ಕ್ರಾಂತಿಕಾರಿ ಬಸವಣ್ಣ' ಕುರಿತು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಶಿವರಾಜಪ್ಪ ಮತ್ತು 'ವಿಶ್ವಜ್ಞಾನಿ, 'ಸಮಾನತೆ ಹಾಗೂ ಸ್ವಾಭಿಮಾನದ ಹೋರಾಟಗಾರ ಡಾ.ಬಿ.ಆರ್.ಅಂಬೇಡ್ಕರ್' ಕುರಿತು ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಮಾತನಾಡಿದರು. ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜು, ಸಮಾನತೆ ಸ್ವಾಭಿಮಾನ ಸ್ವಾವಲಂಬನೆ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ.ನೀಲಗಿರಿ ತಳವಾರ, ಸಮಾನತೆ ಪ್ರಕಾಶನದ ಪ್ರಕಾಶಕ ಭರತ್ ರಾಮಸ್ವಾಮಿ ಮತ್ತಿತರರು ಹಾಜರಿದ್ದರು.

ಸಪ್ತ ಸಾಗರ ದಾಟಿ ವಿಶ್ವಧರ್ಮವಾಗಬೇಕಿದ್ದ ಲಿಂಗಾಯತ ಧರ್ಮ!

ಮೈಸೂರು,ಜು.8(ಪಿಎಂ)- ಸಪ್ತ ಸಾಗರ ದಾಟಿ ವಿಶ್ವಧರ್ಮವಾಗಬೇಕಿದ್ದ ಬಸವಣ್ಣವರ ಲಿಂಗಾಯತ ಧರ್ಮಕ್ಕೆ ಜಾತಿಯ ಲಕ್ಷ್ಮಣ ರೇಖೆ ಹಾಕಿ ಎಳೆದಿಟ್ಟುಕೊಳ್ಳಲಾಗಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

12ನೇ ಶತಮಾನದ ಬಸವಣ್ಣನವರು ಶ್ರೇಷ್ಠ ಜಾತಿ ಎಂದು ಕರೆಸಿಕೊಳ್ಳುವ ವೈದಿಕ ಮನೆತನದಲ್ಲಿ ಹುಟ್ಟಿದವರು. ಆದರೆ ಅವರು ವೈದಿಕ ಚಿಂತನೆ, ಆಚಾರ-ವಿಚಾರ ತಿರಸ್ಕರಿಸಿ, ಲಿಂಗಾಯತ ಧರ್ಮ ಸ್ಥಾಪಿಸಿದರು. ಶರಣರ ಒಂದೊಂದು ವಚನವೂ ಮಾನವೀಯತೆ ಬಗ್ಗೆ ಚಿಂತನೆ ಮಾಡುವಂತಹವು ಎಂದು ತಿಳಿಸಿದರು.

ಬಸವಣ್ಣವರ ಲಿಂಗಾಯತ ಧರ್ಮ ಸಪ್ತ ಸಾಗರ ದಾಟಿ ಹೊರ ಹೋಗಬೇಕಿತ್ತು. ಆದರೆ ಅದಕ್ಕೆ ಜಾತಿ ಕಟ್ಟಿ ಲಕ್ಷ್ಮಣ ರೇಖೆ ಹಾಕಿ ಎಳೆದಿಟ್ಟುಕೊಂಡರು. ಕರ್ನಾಟಕದಿಂದ ಹೊರ ಹೋಗಲು ಬಿಡಲಿಲ್ಲ. ಲಿಂಗಾಯತ ಎಂಬುದು ಧರ್ಮವೋ, ಜಾತಿಯೋ ಎಂಬ ಬಗ್ಗೆ ಅವರಲ್ಲಿಯೇ ಜಿಜ್ಞಾಸೆ ಎಂದರು.

12ನೇ ಶತಮಾನದಲ್ಲಿ ಬಸವಣ್ಣನವರು ಜಾತಿಯತೆ ನಿರ್ಮೂಲನೆಯಾಗಬೇಕೆಂಬ ನಿಟ್ಟಿನಲ್ಲಿ ಸಾಮಾಜಿಕ ಕ್ರಾಂತಿ ಮಾಡಿದರು. ಆದರೆ ಇಂದು ಲಿಂಗಾಯತದಲ್ಲೇ ಉಪ ಜಾತಿಗಳನ್ನು ವಿಂಗಡನೆ ಮಾಡಲಾಗುತ್ತಿದೆ. ಯಾವ ಜಾತಿಯೂ ಹೀನವಲ್ಲ. ಹುಟ್ಟಿನಿಂದ ಕನಿಷ್ಠ-ಶ್ರೇಷ್ಠ ಎಂಬುದಿಲ್ಲ ಎಂಬ ಸಂದೇಶ ನೀಡಿದ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಮಾನವೀಯತೆ ಮತ್ತು ಶ್ರೇಷ್ಠತೆಯಿಂದ ಕೂಡಿದೆ ಎಂದು ನುಡಿದರು.

ಕನಕ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಕಲಿ ನಕ್ಷೆ ಮೂಲಕ ನಿವೇಶನ ಮಾರಾಟ

ನಿವೇಶನಕಾರರ ಒಕ್ಕೂಟ ಆರೋಪ



ಮೈಸೂರು, ಜು.8(ಜಿಎ)-ಮೈಸೂರಿನ ಕನಕ ಬಡಾವಣೆಯಲ್ಲಿ ಮೀಸಲಿಟ್ಟಿರುವ ಪಾರ್ಕ್, ಸಿ.ಎ ನಿವೇಶನ ಮತ್ತು ರಸ್ತೆಗಳನ್ನು ಅಕ್ರಮವಾಗಿ ನಿವೇಶನಗಳಾಗಿ ಪರಿವರ್ತಿಸಿ ಕನಕ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಯವರು ಮಾರಾಟ ಮಾಡುತ್ತಿದ್ದಾರೆ ಎಂದು ಕನಕ ಬಡಾವಣೆಯ ವಾಸಿಗಳು, ನಿವೇಶನದಾರರ ಒಕ್ಕೂಟ ಆರೋಪಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ನಿವಾಸಿ ಸಿ.ಎ.ರವೀಂದ್ರ ಮಾತನಾಡಿ, ಕನಕ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಯವರು ಕನಕ ಬಡಾವಣೆಯಲ್ಲಿ ಮೂಲ ನಕ್ಷೆಯ ಪ್ರಕಾರ ಎರಡು ಪಾರ್ಕ್, ಸಿ.ಎ. ನಿವೇಶನ ಮತ್ತು ರಸ್ತೆಗೆ ಮೀಸಲಿಟ್ಟಿರು ಸ್ಥಳವನ್ನು ಸಂಘದ ಅಧ್ಯಕ್ಷ ಜಿ.ಎಸ್.ರಘುಪತಿ ಅವರು ಪಂಚಾಯಿತಿ ಅಧಿಕಾರಿಗಳ ಸಹಾಯದಿಂದ ಮೂಲ ನಕ್ಷೆಗೆ ವಿರುದ್ಧವಾಗಿ ನಕಲಿ ನಕ್ಷೆಗಳನ್ನು ಸೃಷ್ಟಿಸಿ ಅಕ್ರಮವಾಗಿ ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿ ಸರ್ಕಾರಕ್ಕೆ ವಂಚಿಸಿದ್ದಾರೆ ಎಂದು ದೂರಿದರು.

ಈ ಬಗ್ಗೆ ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ದೂರು ನೀಡಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಕನಕ ಗೃಹ ನಿರ್ಮಾಣ ಸಹಕಾರ ಸಂಘವು ಈಗಾಗಲೇ ಸೂಪರ್ ಸೀಡ್ ಆಗಿದೆ. ಆದರಿಂದ ಅಮಾಯಕರು ನಿವೇಶನ ಖರೀದಿಸಿ ಮೋಸಕ್ಕೆ ಒಳಗಾಗಬೇಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಡಾ.ಹನುಮ ನಾಯಕ್, ಸಿ.ಕೆ.ಲೋಕೇಶ್, ರಾಜೇಶ್ ಬಾಬು, ಮಹೇಶ್ ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಸುರಕ್ಷತಾ ಪ್ರಶಸ್ತಿ ಪ್ರದಾನ

ಮೈಸೂರು, ಜು. 8- ಕಾರ್ಲ್ಸ್ ಬರ್ಗ್ ಇಂಡಿಯಾದ ಮೈಸೂರು ಬ್ರೂವರಿ ಆರೋಗ್ಯ ಮತ್ತು ಸುರಕ್ಷತೆಯ ಮಾನದಂಡಗಳಿಗೆ ತನ್ನ ಬದ್ಧತೆಗೆ ಬ್ರಿಟಿಷ್ ಸೇಫ್ಟಿ ಕೌನ್ಸಿಲ್‌ನ ಇಂಟರ್‌ನ್ಯಾಷನಲ್ ಸೇಫ್ಟಿ ಅವಾರ್ಡ್ ಪಡೆದಿದೆ ಎಂದು ವಿಪಿ ಆಪರೇಷನ್ಸ್ ಸಂಜೀವ್ ಗುಪ್ತಾ ತಿಳಿಸಿದರು. ಈ ಪ್ರಶಸ್ತಿಯು ಉತ್ತಮವಾದ ಕೆಲಸದ ಸ್ಥಳದ ಆರೋಗ್ಯ ಮತ್ತು ಸುರಕ್ಷತೆಯ ನಿರ್ವಹಣೆಯ ವ್ಯವಸ್ಥೆಗೆ- ಇದು ಕಾರ್ಯಕ್ಷಮತೆಯಲ್ಲಿ ಮುಂಚೂಣಿಯ ಮತ್ತು ಹಿಂದುಳಿಯುವಿಕೆ, ತರಬೇತಿ ಮತ್ತು ಉದ್ಯೋಗಿಗಳ ಎಚ್ ಅಂಡ್ ಎಸ್‌ನಲ್ಲಿ ಸಾಮರ್ಥ್ಯ, ಕಾನೂನು ಬದ್ಧತೆ ಮತ್ತು 25 ಮಾನದಂಡಗಳ ಅನುಸರಣೆಯ ವ್ಯವಸ್ಥೆಗೆ ನಮ್ಮ ಬದ್ಧತೆಯನ್ನು ಗುರುತಿಸುತ್ತದೆ. ಮೈಸೂರು ಬ್ರೂವರಿ 2018ರಲ್ಲಿ ಪ್ರಾರಂಭವಾದ ದಿನದಿಂದಲೂ ಶೂನ್ಯ ಅವಘಡಗಳನ್ನು ದಾಖಲಿಸಿದ್ದು ಅದಕ್ಕೆ ಪ್ರಮುಖ ಮಾನದಂಡಗಳ ಅನುಷ್ಠಾನ ಪರಿಪೂರ್ಣತೆಗೆ ಹತ್ತಿರವಾಗಿದ್ದು ಶೇ.98ರಷ್ಟಿದೆ ಎಂದರು.

ಹರವೆ: ಸ್ಮಶಾನ ಅಭಿವೃದ್ಧಿಗೆ ಹಿಂದೇಟು



ಮೈಸೂರು, ಜು.8(ಜಿಎ)- ಹುಣಸೂರು ತಾಲೂಕಿನ ಹರವೆ ಗ್ರಾಮದ ಸ್ಮಶಾನ ಅಭಿವೃದ್ಧಿ ಮಾಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಎಂದು ಕರುನಾಡು ಸ್ವಯಂ ಸೇವಾ ವೇದಿಕೆ ಗೌರವಾಧ್ಯಕ್ಷ ಚಂದ್ರಶೇಖರ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರವೆ ಗ್ರಾಮದ ಸರ್ವೆ ನಂ 316ರಲ್ಲಿ 2.15 ಎಕರೆ ಜಮೀನು ಇದ್ದು, ಅದರಲ್ಲಿ 13 ಎಕರೆಯನ್ನು ಸ್ಮಶಾನಕ್ಕೆ ನೀಡಲಾಗಿದೆ. ಇದಕ್ಕೆ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಹೊರಡಿಸಿದ್ದಾರೆ. ಆದರೂ ಅಧಿಕಾರಿಗಳು ಅಭಿವೃದ್ಧಿ ಕಾರ್ಯಕ್ಕೆ ಮುಂದಾಗಿಲ್ಲ ಎಂದರು. ಈ ಸಂಬಂಧ ಎಲ್ಲಾ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಇಲಾಖೆಯಿಂದ ಇಲಾಖೆಗೆ ಅಲೆಸುತ್ತಿದ್ದಾರೆ. ಇದರಿಂದ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ಮಾಡುವುದಕ್ಕೆ ಕಷ್ಟಕರವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಶಾಂತಕುಮಾರ್, ಖಜಾಂಚಿ ಮಂಜು, ನಿರ್ದೇಶಕ ಮಲ್ಲೇಶ್ ಉಪಸ್ಥಿತರಿದ್ದರು.

ಶುಲ್ಕ ಮರುಪಾವತಿಯ ಅಂತಿಮ ದಿನಾಂಕ ವಿಸ್ತರಣೆ

ಮೈಸೂರು, ಜು.8-ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2022-23ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಶುಲ್ಕ ಮರುಪಾವತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಕಡೆಯ ದಿನಾಂಕವನ್ನು ಜು.6ರಿಂದ ಜು.15ರವರೆಗೆ ವಿಸ್ತರಿಸಿದ್ದು, https://ssp.postmatric. karnataka. gov.in ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ.080-35254757.

ಸ್ವಾಭಿಮಾನದ ಬದುಕಿನಿಂದ ಎಲ್ಲವೂ ದೊರೆಯುತ್ತದೆ: ಸಚಿವ ರಾಜಣ್ಣ

ಮೈಸೂರು, ಜು. 8(ಸಿಎನ್)-ನಾಯಕ ಸಮುದಾಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಸಮುದಾಯದಲ್ಲಿ ಒಗ್ಗಟ್ಟಿರಬೇಕು. ಮುಂದುವರಿದ ಸಮುದಾಯಗಳ ರೀತಿ ನಾವು ಬೆಳೆಯಬೇಕಾದರೇ, ನಮ್ಮಲ್ಲಿರುವ ಅಸೂಯೆ, ತಾರತಮ್ಯ ಹೋಗಲಾಡಿಸಿ ನಾವೆಲ್ಲಾ ಒಂದೇ ಎಂಬ ಭಾವನೆ ಮೂಡಬೇಕು. ಜೊತೆಗೆ ನಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಆಗ ನಾಯಕ ಸಮಾಜ ಏಳಿಗೆ ಹೊಂದಲಿದೆ ಎಂದು ಸಚಿವ ಕೆ.ಎನ್.ರಾಜಣ್ಣ ಅವರು ಸಲಹೆ ನೀಡಿದರು.

ನಗರದ ಬೆಂಗಳೂರು ನೀಲಗಿರಿ ರಸ್ತೆಯಲ್ಲಿರುವ ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಸಚಿವರಿಗಾಗಿ ಶನಿವಾರ ಆಯೋಜಿಸಿದ್ದ, 'ಅಭಿನಂದನೆ ಹಾಗೂ ನಾಯಕ ಸಮುದಾಯದ ಮುಖಂಡರ ಸಭೆ' ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಅವರು ಮಾತನಾಡಿದರು.

ಒಗ್ಗಟ್ಟಿನಿಂದ ಮುಂದೆ ಸಾಗಿದರೆ ರಾಜಕಾರಣ ನಿಮಗೆ ಕಬ್ಬಿಣದ ಕಡಲೆ ಎನಿಸುವುದಿಲ್ಲ. ಒಳ್ಳೆಯದನ್ನು ಮಾಡುವವನಿಗೆ ಆ ಭಗವಂತನೇ ದಾರಿದೀಪವಾಗುತ್ತಾನೆ. ಹೋರಾಟದ ಛಲವಿದ್ದರೆ ಏನನ್ನಾದರೂ ಸಾಧಿಸಬಹುದು ಎಂದರು.

ಮುಂದುವರಿದ ಸಮುದಾಯಗಳಲ್ಲಿ ವಿದ್ಯೆ, ಆರ್ಥಿಕ ಸಬಲತೆ ಹೊಂದಿದವರು ಹೆಚ್ಚಿದ್ದಾರೆ. ಅದೇ ರೀತಿ ನಮ್ಮ ಸಮುದಾಯದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸ್ವಾಭಿಮಾನದ ಬದುಕನ್ನು ಕಟ್ಟಿದಾಗ ಎಲ್ಲವೂ ಹುಡುಕಿಕೊಂಡು ಬರುತ್ತದೆ ಎಂದರು.



ರಾಜಕೀಯಕ್ಕೆ ಯಾರಾದರೂ ಬರಬಹುದು, ನಿಮ್ಮ ಜೀವನದಲ್ಲಿ ಚಾಲೆಂಜ್ ಬಂದರೇ ಮುಲಾಜಿಲ್ಲದೆ ಸ್ವೀಕರಿಸಿ ಸಾಧಿಸಬೇಕು. ಇದೇ ಸೂತ್ರದಿಂದಲೇ ನಾನು ಮೂರು ಬಾರಿ ಶಾಸಕ, ಒಂದು ಬಾರಿ ಎಂಎಲ್‌ಸಿ ಆಗಿರುವುದು ಎಂದರು.

ಸಿದ್ದರಾಮಯ್ಯ ಅವರನ್ನು ಎಷ್ಟು ಹೊಗಳಿದರೂ ಸಾಲದು ಏಕೆಂದರೆ ಇತಿಹಾಸದಲ್ಲೇ ಪರಿಶಿಷ್ಟ ಪಂಗಡಕ್ಕೆ 3 ಸಚಿವರನ್ನು ಆಯ್ಕೆ ಮಾಡಿದ ಇತಿಹಾಸ ಇರಲಿಲ್ಲ. ಇದರಿಂದ ನಮ್ಮ ಸಮುದಾಯದ ಮೇಲೆ ಅವರಿಗಿರುವ ಪ್ರೀತಿ ತಿಳಿಯುತ್ತದೆ ಎಂದು ಹಾಡಿ ಹೊಗಳಿದರು.

ಸಹಕಾರ ಕ್ಷೇತ್ರ, ಜಿಪಂ, ಗ್ರಾಪಂಗಳಲ್ಲಿ ಮೀಸಲಾತಿ ತರುವ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಈ ಕುರಿತು ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ. ಮುಖ್ಯಮಂತ್ರಿಗಳು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಒಂದು ವಿಶೇಷ ಬಿಲ್ ತಂದಾದರೂ ಮೀಸಲಾತಿ ಜಾರಿಗೆ ತರುತ್ತೇವೆ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಎಚ್.ಡಿ ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು. ವೇದಿಕೆ ಕಾರ್ಯಕ್ರಮ ಬಳಿಕ ಸಚಿವರು ಹಾಗೂ ಶಾಸಕರಿಗೆ ಸಮುದಾಯದ ಮುಖಂಡರು ಶಾಲು ಹೊದಿಸಿ ಸನ್ಮಾನಿಸಿದರು.

> **ನನ್ನ ಅಪ್ಪನ ಸೋಲು ದೇವೇಗೌಡರಿಗೆ ಪ್ರತಿಷ್ಠೆಯಾಗಿತ್ತು**
>
> ನನ್ನ ಅಪ್ಪನನ್ನು ಸೋಲಿಸಲು ಖುದ್ದು ದೇವೇಗೌಡರೇ ಅಖಾಡಕ್ಕೆ ಇಳಿದಿದ್ದರು. 'ನನ್ನ ಬೆನ್ನಿಗೆ ಚೂರಿ ಹಾಕಿದ್ದವರನ್ನು ಹೇಗಾದರೂ ಮಾಡಿ ಸೋಲಿಸಿ' ಎಂದು ಅವರ ಸಮುದಾಯದ ಮುಖಂಡರ ಬಳಿ ಹೇಳಿಕೊಂಡಿದ್ದರು.. ಒಬ್ಬ ಗೌರವಾನ್ವಿತ ಮಾಜಿ ಪ್ರಧಾನಿಗಳಾಗಿ ಗ್ರಾಪಂ ಸದಸ್ಯನನ್ನು ಭೇಟಿ ಆಗುವ ಮಟ್ಟಕ್ಕೆ ಇಳಿದಿದ್ದರು. ಆದರೂ ಆತ ಗೆದ್ದ. ಇನ್ನು ನನ್ನ ಚುನಾವಣೆಯಲ್ಲೂ ಅಬ್ಬರದ ಪ್ರಚಾರ, ಕಣ್ಣೀರಿನ ರಾಜಕಾರಣ ಎಲ್ಲವೂ ಮಾಡಿದ್ರು. ಆದರೆ ನನ್ನ ನಿರೀಕ್ಷೆಗೂ ಮೀರಿ 36000 ಮತಗಳ ಅಂತರದಿಂದ ಗೆದ್ದು ಬಂದೆ. ಇದೂ ನನಗೆ ಆಶ್ಚರ್ಯ ತಂದಿತ್ತು. ಈ ಗೆಲುವಿನಲ್ಲಿ ಎಲ್ಲಾ ಸಮುದಾಯದ ಜನರು ನನಗೆ ಆಶೀರ್ವಾದ ಮಾಡಿ ಜಯ ತಂದುಕೊಟ್ಟಿದ್ದಾರೆ.
>
> -ಕೆ.ಎನ್ ರಾಜಣ್ಣ, ಸಹಕಾರ ಸಚಿವ.

ಕಾರ್ಯಕ್ರಮದಲ್ಲಿ ಸಚಿವರ ಪತ್ನಿ ಶಾಂತಲಾ ರಾಜಣ್ಣ, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ ಬಸವರಾಜು, ಜಿಪಂ ಅಧ್ಯಕ್ಷ ಮದನಾಯಕ, ಮಹಾಂತೇಶಪ್ಪ ದೇವರಾಜು, ಜಗದೀಶ್ ಮೂರ್ತಿ, ದ್ಯಾವಪ್ಪ, ಮತ್ತಿತರರಿದ್ದರು.

ಎಸ್.ಟಿ.ರವಿಕುಮಾರ್

ಮೈಸೂರು ದೊಡ್ಡ ಗಡಿಯಾರ ಗೋಪುರಕ್ಕೆ ಕಾಯಕಲ್ಪ ಕಾಲ

"ಕ್ಲಾಕ್ ಟವರ್ ರಿಪೇರಿಗೆ ಪಾಲಿಕೆಯಿಂದ ಅನುದಾನ ಮಂಜೂರಾಗಿದ್ದು, ಮೊದಲ ಕಂತಿನ ಹಣ ಬಿಡುಗಡೆಯಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾದೇಶ ಬಾಕಿ ಇದೆ. ಸರ್ಕಾರದ ನಿರ್ದೇಶನವಿರುವುದರಿಂದ ಟೆಂಡರ್‌ದಾರರಿಗೆ ವರ್ಕ್ ಆರ್ಡರ್ ನೀಡಿಲ್ಲ. ಸರ್ಕಾರದ ನಿರ್ದೇಶನ ಬರುತ್ತಿದ್ದಂತೆಯೇ ಕಾಮಗಾರಿ ಆರಂಭಿಸಿ ನಮ್ಮ ಇಲಾಖೆಯಿಂದ ಮೇಲ್ವಿಚಾರಣೆ ಮಾಡಿ ನಿಗದಿತ ಅವಧಿಯಲ್ಲಿ ಸಂರಕ್ಷಣೆ ಮಾಡಲಾಗುವುದು.

– ದೇವರಾಜು, ಹೆರಿಟೇಜ್ ಆಯುಕ್ತ

"ಮೈಸೂರಿನ ಪಾರಂಪರಿಕ ನಿರ್ಮಾಣಗಳಲ್ಲಿ ಪ್ರಮುಖ ಸ್ಮಾರಕವಾದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಆಳ್ವಿಕೆಯ 25 ವರ್ಷ ಪೂರೈಸಿದ ನೆನಪಿಗಾಗಿ ಅಂದಿನ ಅರಮನೆ ಸಿಬ್ಬಂದಿಗಳ ದೇಣಿಗೆ ಹಣದಿಂದ ನಿರ್ಮಿಸಿದ ದೊಡ್ಡ ಗಡಿಯಾರ ಗೋಪುರವನ್ನು ಸಂರಕ್ಷಿಸುವ ಸಲುವಾಗಿ ಪಾಲಿಕೆಯಿಂದ ಅನುದಾನ ಮಂಜೂರಾಗಿದ್ದು, ಮೊದಲ ಕಂತಿನ ಹಣ ಬಿಡುಗಡೆ ಮಾಡಿಸಿದ್ದೇನೆ. ಪಾರಂಪರಿಕ ಇಲಾಖೆಯವರು ಇಷ್ಟರಲ್ಲೇ ಪುನರುಜ್ಜೀವನ ಕಾಮಗಾರಿ ಆರಂಭಿಸಲಿದ್ದಾರೆ.

–ಶಿವಕುಮಾರ್, ಮೇಯರ್



ಮೈಸೂರಿನ ರಂಗಾಚಾರ್ಲು ಪುರಭವನದ ಎದುರಿನ ದೊಡ್ಡ ಗಡಿಯಾರ.

ಮೈಸೂರಿನ ಹೃದಯ ಭಾಗದ ರಂಗಾಚಾರ್ಲು ಪುರಭವನದ ಮುಂದಿನ ವೈಭವದ ದೊಡ್ಡ ಗಡಿಯಾರ (ಸಿಲ್ವರ್ ಜುಬಿಲಿಯೆಂಟ್ ಕ್ಲಾಕ್ ಟವರ್) ಪಾರಂಪರಿಕ ಸ್ಮಾರಕ ದುರಸ್ತಿಯೊಂದಿಗೆ ಸಂರಕ್ಷಿಸಲು ಮೈಸೂರು ಮಹಾನಗರ ಪಾಲಿಕೆ ಯೋಜನೆ ರೂಪಿಸಿದೆ.

ಸ್ಯಾಂಡ್ ಸ್ಟೋನ್ ಇಟ್ಟಿಗೆಯಿಂದ ನಿರ್ಮಿಸಿರುವ 75 ಅಡಿ ಎತ್ತರದ ಈ ದೊಡ್ಡ ಗಡಿಯಾರ ಗೋಪುರವು ಮೈಸೂರಿನ ಭವ್ಯ ಪಾರಂಪರಿಕ ನಿರ್ಮಾಣಗಳಲ್ಲೊಂದಾಗಿದ್ದು, ಕಳೆದ 10 ವರ್ಷಗಳ ಹಿಂದೆಯೇ ಈ ವೈಭವದ ಗೋಪುರ ಬಿರುಕುಗೊಂಡಿದ್ದು, ಅಡಿಪಾಯದಲ್ಲಿತ್ತು. ಇಲಿ–ಹೆಗ್ಗಣಗಳು ಕೊರೆದು ಅಪಾಯದ ಆತಂಕ ಮೂಡಿಸಿತ್ತು.

ನಿವೃತ್ತ ಪ್ರಾಧ್ಯಾಪಕರು, ಪಾರಂಪರಿಕ ತಜ್ಞ ಪ್ರೊ ಎನ್.ಎಸ್. ರಂಗರಾಜು ಅವರು ದೊಡ್ಡ ಗಡಿಯಾರ ಅಪಾಯದ ಅಂಚಿನಲ್ಲಿದ್ದು, ಅದನ್ನು ಪುನರುಜ್ಜೀವನಗೊಳಿಸದಿದ್ದಲ್ಲಿ ಶಿಥಿಲಗೊಳ್ಳುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದ್ದರಿಂದ ಮುಂದಿನ ಕ್ರಮಕ್ಕಾಗಿ ಮೈಸೂರು ಮಹಾನಗರ ಪಾಲಿಕೆ ಹಿಂದಿನ ಆಯುಕ್ತರಾದ ಶಿಲ್ಪಾನಾಗ್, ಗುರುದತ್ ಹೆಗ್ಡೆ, ಜಿ. ಜಗದೀಶ್ ಅವರು ಸ್ಥಳ ಪರಿಶೀಲಿಸಿದ್ದರಾದರೂ, ಅದರ ಸಂರಕ್ಷಣೆ ಕಾರ್ಯ ಕೈಗೊಂಡಿರಲಿಲ್ಲ.

ಈಗಲೂ ಪ್ರೊ. ರಂಗರಾಜು ಅವರ ನಿರಂತರ ಪ್ರಯತ್ನ ಹಾಗೂ ಮೇಯರ್ ಶಿವಕುಮಾರ್ ಆಸಕ್ತಿ ಫಲವಾಗಿ ಇದೀಗ ಪಾಲಿಕೆಯು ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಮೂಲಕ ಜುಬಿಲಿಯೆಂಟ್ ಕ್ಲಾಕ್ ಟವರ್ ಸಂರಕ್ಷಣೆ ಪ್ರಕ್ರಿಯೆ ಆರಂಭವಾಗಿದ್ದು, ಇಲಾಖೆ ಮೊದಲ ಕಂತಿನ 13.6 ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿದೆ. ಪರಂಪರೆ ಇಲಾಖೆಯು 41 ಲಕ್ಷ ರೂ.ಗಳಿಗೆ ಅಂದಾಜು ತಯಾರಿಸಿತ್ತಾದರೂ, ಟೆಂಡರ್ ಪ್ರಕ್ರಿಯೆಯಲ್ಲಿ ಟಿ.ಎಸ್. ರಾಮಚಂದ್ರ ಎಂಬ ಗುತ್ತಿಗೆದಾರರಿಗೆ 38,28,000 ರೂ.ಗಳಿಗೆ ಕಾಮಗಾರಿಯನ್ನು ವಹಿಸಲಾಗಿದೆ. ಇಲಾಖೆಯು ಕಾರ್ಯಾದೇಶ ಸಿದ್ಧಪಡಿಸಿದೆಯಾದರೂ, ನೂತನ ಸರ್ಕಾರ ಹೊಸ ಯೋಜನೆಗೆ ತಾತ್ಕಾಲಿಕ ತಡೆ ನೀಡಿರುವುದರಿಂದ ಗುತ್ತಿಗೆದಾರನಿಗೆ ಕಾರ್ಯಾದೇಶ ಇನ್ನೂ ನೀಡಿಲ್ಲ.

"ಪಾರಂಪರಿಕ ನಗರಿ ಮೈಸೂರಿನ ಕಳಶಪ್ರಾಯದಂತಿರುವ ಜುಬಿಲಿಯೆಂಟ್ ಕ್ಲಾಕ್ ಟವರ್ ಅಪರೂಪದ ಸ್ಮಾರಕವಾಗಿದ್ದು, ಸರಿಯಾದ ನಿರ್ವಹಣೆ ಇಲ್ಲದ ಕಾರಣ ಬಿರುಕು ಬಿಟ್ಟು, ಅಡಿಪಾಯವೂ ದುರ್ಬಲವಾಗಿ ಅಪಾಯದ ಅಂಚಿನಲ್ಲಿದ್ದುದನ್ನು ಗಮನಿಸಿ, ಈ ಹಿಂದೆ ಮೂವರು ಪಾಲಿಕೆ ಆಯುಕ್ತರಿಗೂ ಇದನ್ನು ತೋರಿಸಿ ದುರಸ್ತಿಗೆ ಒತ್ತಾಯಿಸುತ್ತಾ ಬಂದಿದ್ದರಿಂದ 10 ವರ್ಷಗಳ ನಂತರ ಇದೀಗ ಕಾಯಕಲ್ಪ ಕಾಲ ಒದಗಿ ಬಂದಿದೆ. ಅದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬೇಕಾಗಿದೆ.

– ಪ್ರೊ.ಎನ್.ಎಸ್.ರಂಗರಾಜು, ಪಾರಂಪರಿಕ ತಜ್ಞ

ಟೆಂಡರ್‌ನಲ್ಲಿ ನಮೂದಿಸಿದಂತೆ ಸಿಲ್ವರ್ ಜುಬಿಲಿಯೆಂಟ್ ಕ್ಲಾಕ್ ಟವರ್‌ನ ಹಾಳಾಗಿರುವ ಹವಾನಿಯಂತ್ರಣ ಪದರವನ್ನು ತೆಗೆಯಬೇಕು. ಛಾವಣಿಗೆ ಹೊಸದಾಗಿ ಮದ್ರಾಸ್ ತಾರಸಿ ಹಾಕಿ ಅದರ ಮೇಲೆ ಹವಾನಿಯಂತ್ರಣ ಪದರ ಅಳವಡಿಸುವುದು, ಈ ಅಪರೂಪದ ಟವರ್‌ನಲ್ಲಿ ಹಾಳಾಗಿರುವ ತೇಗದ ಮರದ ತೊಲೆ, ರ್‍ಯಾಫ್ಟರ್‌ಗಳು, ಪರ್ಲಿಂಗ್‌ಗಳನ್ನು ಹೊಸದಾಗಿ ಅಳವಡಿಸುವುದು, ಕಿತ್ತು ಬಂದಿರುವ ಗಾರೆಯನ್ನು ತೆಗೆದು ಹೊಸದಾಗಿ ಮಡ್ಡಿ ಮಾಡುವುದು, ಶಿಥಿಲಗೊಂಡಿರುವ ಕಿಟಕಿಗಳು, ಸ್ಟೇರ್‌ಕೇಸ್ ರೇಲಿಂಗ್ಸ್, ಮೆಟ್ಟಿಲುಗಳ ಮರಗಳನ್ನು ತೆಗೆದು ಹೊಸದಾಗಿ ಅಳವಡಿಸುವುದು, ಕಟ್ಟಡದ ಒಳ ಮತ್ತು ಹೊರ ಭಾಗಕ್ಕೆ ಬಣ್ಣ ಬಳಿಯುವುದು, ಮೇಲ್ಭಾಗದ ಗೋಪುರ, ಸ್ಟೋಕೋವರ್ಕ್ ಮತ್ತು ಕಾರ್ವಿಂಗ್‌ಗಳನ್ನು ದುರಸ್ತಿಗೊಳಿಸಬೇಕೆಂದು ತಿಳಿಸಲಾಗಿದೆ. ಮೈಸೂರು ಮಹಾನಗರ ಪಾಲಿಕೆಯು ಸಂಪೂರ್ಣ ವೆಚ್ಚ ಭರಿಸುವುದರಿಂದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕಾಮಗಾರಿಯ ಉಸ್ತುವಾರಿ ವಹಿಸಿಕೊಂಡಿದ್ದು, 9 ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸಲಿದೆ.

1902ರಲ್ಲಿ ಮೈಸೂರು ಸಂಸ್ಥಾನದ ಅಧಿಕಾರ ವಹಿಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 25 ವರ್ಷಗಳ ಆಡಳಿತ ಪೂರ್ಣಗೊಳಿಸಿದ ಸವಿನೆನಪಿಗಾಗಿ ಅರಮನೆ ಸಿಬ್ಬಂದಿಗಳ ದೇಣಿಗೆ ಹಣದಿಂದ 1927ರಲ್ಲಿ ಈ ಕ್ಲಾಕ್ ಟವರ್ ನಿರ್ಮಿಸಲಾಯಿತು. ಮಹಾತ್ಮ ಗಾಂಧಿ ಅವರನ್ನು ದೊಡ್ಡ ಗಡಿಯಾರ ಉದ್ಘಾಟನೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಆಹ್ವಾನಿಸಿದ್ದರಾದರೂ, ಅಂದು ಬೇರೆ ಕಾರ್ಯಕ್ರಮಗಳಿದ್ದ ಕಾರಣ ಬೆಂಗಳೂರಿಗೆ ಬಂದಿದ್ದರೂ ಮಹಾತ್ಮ ಗಾಂಧಿ ಅವರು ಮೈಸೂರಿಗೆ ಬರಲಾಗಲಿಲ್ಲ. ಅದೇ ವೇಳೆ ಗಾಂಧೀಜಿ ಅವರನ್ನು ತುರ್ತು ಭೇಟಿಗೆ ಬಂದಿದ್ದ ಮೋತಿಲಾಲ್ ನೆಹರು ಅವರನ್ನು ಗಾಂಧಿ ಅವರು ಮೈಸೂರಿಗೆ ಹೋಗಿ ಮಹಾರಾಜರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿದ್ದರಿಂದ ನೆಹರು ಅವರು ದೊಡ್ಡ ಗಡಿಯಾರವನ್ನು ಉದ್ಘಾಟಿಸಿದ್ದರು.

22.85 ಮೀ ಎತ್ತರದ ಈ ಗಡಿಯಾರದ ಗೋಪುರದ ಮೇಲ್ಭಾಗದಲ್ಲಿ ನಾಲ್ಕು ಕಡೆ 5 ಅಡಿ ವ್ಯಾಸದ ತುದಿಯಲ್ಲಿ ರಾಜಸ್ಥಾನ ಮಾದರಿಯ ಛತ್ರಿ ವಿನ್ಯಾಸದ ಗುಮ್ಮಟಗಳಿವೆ. ಈ ಪಾರಂಪರಿಕ ನಿರ್ಮಾಣವನ್ನು ದುರಸ್ತಿ ಮಾಡಿ ಸಂರಕ್ಷಿಸುವ ಕಾಮಗಾರಿಗೆ ಶೀಘ್ರ ಚಾಲನೆ ದೊರೆಯಲಿದೆ.

ವಾರಭವಿಷ್ಯ

9.7.2023 ರಿಂದ 15.7.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ಮೀನ, ಮೇಷ, ವೃಷಭ, ಕುಜ–ಸಿಂಹ, ಬುಧ–ಕಟಕ, ಗುರು–ಮೇಷ, ಶುಕ್ರ–ಸಿಂಹ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಮನೋಕಾರಕ ಚಂದ್ರನಿಂದಾಗಿ ಹರ್ಷ, ಸಂತೋಷಗಳು ದೊರೆತರೂ ಇತರ ಗ್ರಹಗಳು ನಿಮ್ಮನ್ನು ಆತುರದ ನಿರ್ಧಾರಗಳಿಗೆ ಪ್ರೇರೇಪಿಸುತ್ತವೆ. ಹೊಸ ಯೋಜನೆಗಳ ಸಾಕಾರಕ್ಕೆ ಹೊಸ ಹುಮ್ಮಸ್ಸಿನಿಂದ ಪ್ರಯತ್ನಿಸುವಿರಿ. ಶ್ರೀಮತಿಯ ಅನುರಾಗ ಮನಸ್ಸಿಗೆ ಮುದ ನೀಡುವುದು. ಸ್ಥಿರಾಸ್ತಿ ವಿಲೇವಾರಿಯ ಹವಣಿಕೆಯಲ್ಲಿದ್ದರೆ ಸ್ವಲ್ಪ ಸಮಯ ಮುಂದೂಡಿ, ಜೊತೆಗೆ ಅನುಭವಿಗಳ ಮಾರ್ಗದರ್ಶನ ಪಡೆಯಿರಿ.

ಶ್ರೀ ಲಕ್ಷ್ಮೀನೃಸಿಂಹ ದರ್ಶನ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹೊಸ ನೀರು ಬಂದಾಗ ಹಳೆಯ ನೀರು ಹೋಗಲೇಬೇಕು. ಕಷ್ಟಗಳು ಎದುರಾಯಿತೆಂದು ಅಧೀರರಾಗಬೇಡಿ. ಅದನ್ನು ಎದುರಿಸುವ ಸಾಮರ್ಥ್ಯವನ್ನು ಗ್ರಹಗಳೇ ದಯಪಾಲಿಸಲಿದ್ದಾರೆ. ಈ ವಾರ ನಿಮ್ಮ ರಾಶ್ಯಾಧಿಪತಿ ಶುಕ್ರ ಯಶಸ್ಸಿನ ಕೀಲಿಕೈ ನಿಮ್ಮ ಕೈಗೇ ನೀಡಲಿದ್ದಾನೆ. ಸಕಾರಾತ್ಮಕವಾಗಿ ಚಿಂತಿಸಲು ಪ್ರಾರಂಭಿಸಿ ಹಾಗೂ ಮನೋವಿಕಾರಗಳನ್ನು ಹತೋಟಿಯಲ್ಲಿಡಿ. ಪ್ರತಿಫಲ ತಾನೇ ತಾನಾಗಿ ದೊರೆಯುವುದು.

ಶ್ರೀ ಚಾಮುಂಡಿ ಉಪಾಸನೆ. ಶುಭ ಸಂಖ್ಯೆ–4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸರಳತನ ಸಜ್ಜನರಿಗೆ ಭೂಷಣ ಎಂಬಂತೆ ನಡೆದು ಸಾಮಾಜಿಕವಾಗಿ ಗೌರವಾದರಗಳಿಗೆ ಭಾಜನರಾಗುವಿರಿ. ಕೈಗೊಂಡ ಕೆಲಸ ಕಾರ್ಯಗಳು ಲಾಭಸ್ಥಾನ ಸ್ಥಿತ ಬೃಹಸ್ಪತಿಯ ಅನುಗ್ರಹದಿಂದ ಜಯದ ಹಾದಿಯಲ್ಲಿ ಸಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಬರೆದಿದ್ದರೆ ಸ್ವೀಟ್ ಹಂಚಲು ಸಿದ್ಧರಾಗಿರಿ. ಆಷಾಢ ನಂತರ ವಿವಾಹಾಕಾಂಕ್ಷಿಗಳಿಗೆ ಕಂಕಣಬಲ ಕೂಡಿ ಬರುವ ಯೋಗವಿದೆ. ಮನೆ, ನಿವೇಶನ ಹೊಂದಲು ಕಾಲ ಕೂಡಿ ಬಂದಿದೆ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–1.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಆರಂಭದಲ್ಲಿ ದಿಢೀರ್ ಧನ ಲಾಭವಾಗುವ ಸಾಧ್ಯತೆ ಇದೆ. ಮುಖ್ಯ ಕೆಲಸಗಳು ಸರಿ ಸಮಯಕ್ಕೆ ಸಂಪನ್ನಗೊಳ್ಳುವುದು. ಐಟಿ, ಬಿಟಿ ಉದ್ಯೋಗಿಗಳಿಗೆ ಕೆಲಸದ ಹೊರೆ ಹೆಚ್ಚಾಗುವುದು. ಆಷಾಢದ ನಂತರ ಮದುವೆ ಪ್ರಸ್ತಾವಗಳು ಧನಾತ್ಮಕ ಫಲಿತಾಂಶವನ್ನು ನೀಡಲಿದೆ. ವ್ಯಾಪಾರ ವಿಸ್ತರಣೆಗೆ ದೈವಬಲವಿದೆ. ಪ್ರಯತ್ನಿಸಿ. ನಿರುದ್ಯೋಗಿಗಳಿಗೆ ಶುಭ ಸಮಾಚಾರ ಬರುವುದು. ವಾರದ ಕಡೆಗೆ ಮನೆ ಮಂದಿಯೊಂದಿಗೆ ಪವಿತ್ರ ಸ್ಥಳಕ್ಕೆ ಭೇಟಿ. ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ–3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ಸಪ್ತಾಹದಲ್ಲಿ ನೀವು ಚಾಣಾಕ್ಷತೆಯಿಂದ ನಿರ್ವಹಿಸುವ ಪ್ರತಿಯೊಂದು ಕೆಲಸಕ್ಕೂ ಉತ್ತಮ ಪ್ರತಿಫಲ ದೊರೆತು ಸಂತಸಪಡುವಿರಿ. ಮನೆಯಲ್ಲಿ ಪರಸ್ಪರ ಮಧುರ ಭಾವನೆ ಉಂಟಾಗುವುದು. ಹಲವು ಮೂಲದಿಂದ ಧನಾದಾಯವೂ ಆಗುವುದು. ಐಷರಾಮಿ ವಸ್ತುಗಳ ಖರೀದಿಗೆ ಹಣ ವಿನಿಯೋಗವಾಗುವುದು. ನಿಮ್ಮ ರಾಶಿ ಸ್ಥಿತ ಕುಜನಿಂದ ದುಡುಕು ಹಾಗೂ ಕೋಪದಿಂದ ಕಾರ್ಯಗೇಡು ಉಂಟಾಗುವುದು, ಸಂಯಮವಿರಲಿ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಶೀಘ್ರವಾಗಿ ಯೋಚಿಸುವುದು ನಿಮ್ಮ ರಾಶಿ ಜನ್ಮ ಗುಣ. ಆದರೆ ಯಾವುದನ್ನೂ ನಿಧಾನವಾಗಿ ಯೋಚಿಸಿ ಜಾರಿಗೊಳಿಸಿ. ವಾರದ ಆದಿಗೆ ಮನೆಯಲ್ಲಿ ಸಂತಸದ ವಾತಾವರಣ ಇರುತ್ತದೆ. ನೆಂಟರಿಷ್ಟರ ಆಗಮನ, ಅವರ ಸತ್ಕಾರಕ್ಕೆ ಹೇರಳ ಧನ ವ್ಯಯವಾಗುವುದು. ಶ್ರೀಮತಿಯ ಮುತುವರ್ಜಿಯಿಂದ ಜೀವನದಲ್ಲಿ ಎದುರಾಗಿದ್ದ ಸಮಸ್ಯೆಯೊಂದು ನಿವಾರಣೆ ಆಗುವುದು. ಕರುಳು ಸಂಬಂಧಿ ಅಸ್ವಸ್ಥತೆ ಕಾಡಬಹುದು.

ಶ್ರೀವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಶಿಸ್ತು ಪಾಲಕರಾದ ನೀವು ಪಂಚಮ ಶನಿಯ ಪ್ರಭಾವದಿಂದ ಆಲಸಿಗರಾಗಿದ್ದೀರಾ. ಸಾಧಿಸುವುದು ಬಹಳಷ್ಟು ಇದೆ. ಆದರೆ ಮನಸ್ಸು ಒಡಂಬಡುತ್ತಿಲ್ಲ. ಗುರುಬಲದ ಜೊತೆ ಅಡ್ಡದಾರಿಗೆ ಪ್ರೇರೇಪಿಸುವ ರಾಹು–ಕೇತುಗಳು ನಿಮ್ಮ ಕೆಲಸವನ್ನು ಕೆಡಿಸುತ್ತಿದ್ದಾರೆ. ಸಮಯೋಚಿತ ಬುದ್ಧಿ ಬಲ, ಹಣ ಬಲ, ಜನಬಲಕ್ಕೇನು ಕೊರತೆ ಇಲ್ಲ. ಧಾರ್ಮಿಕ ಗುರುಗಳ ಭೇಟಿಯಿಂದ ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ದೊರೆಯುವುದು.

ಶ್ರೀ ಮಂಗಳಗೌರಿ ವ್ರತ ಕಥೆ ಓದಿ. ಶುಭ ಸಂಖ್ಯೆ–5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

'ಬಲವಂತದ ಮಾಘ ಸ್ನಾನ' ನಿಮಗಿಷ್ಟವಿಲ್ಲದಿದ್ದರೂ ಮಾಡಲೇಬೇಕಾಗುತ್ತದೆ. ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲಕರವಾಗಿಲ್ಲ. ಯಾವುದನ್ನೂ ಪೂರ್ಣವಾಗಿ ಪರೀಕ್ಷಿಸದೆ ಅಂಗೀಕರಿಸಬೇಡಿ. ಸರ್ಕಾರಿ ಕೆಲಸಗಳೂ ಅಷ್ಟೇ ನೀವೆಣಿಸಿದಂತೆ ಸಾಗದು. ವಾರಾಂತ್ಯಕ್ಕೆ ತನ್ನ ಉಚ್ಚ ರಾಶಿಗೆ ಬರುವ ಚಂದ್ರನಿಂದ ನಿಮ್ಮ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ದೊರಕಿ ಮುಖದಲ್ಲಿ ಮಂದಹಾಸ ಮೂಡುವುದು, ನಿರೀಕ್ಷಿಸಿದ್ದ ಹಣ ಕೈ ಸೇರುವುದು.

ಶ್ರೀಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಫ.ಬೆ)

'ಧೈರ್ಯವಿದ್ದವರಿಗೆ ದೈವ ಸಹಾಯ'. ಶುಭ ಸ್ಥಿತಿಯಲ್ಲಿರುವ ನಿಮ್ಮ ರಾಶ್ಯಾಧಿಪತಿ ಗುರು ನಿಮ್ಮ ಬೆನ್ನಿಗೆ ಇದ್ದಾರೆ. ಆಸ್ತಿ, ಸಂಪತ್ತು ಹೊಂದಲು ಅವಕಾಶವಿದೆ. ಪ್ರಯತ್ನಶೀಲರಾಗಿ, ನಿಮ್ಮ ಉಚ್ಚ ಆದರ್ಶ ನಂಬಿಕೆಗಳು ಈಗ ಫಲ ನೀಡುವ ಕಾಲವಾಗಿದೆ. ವ್ಯಾಪಾರ, ವ್ಯವಹಾರಗಳು ಭರಾಟೆಯಿಂದ ಸಾಗಿ ಅಧಿಕ ಲಾಭ ಗಳಿಸುವಿರಿ. ಕೃಷಿ ಉತ್ಪನ್ನ ಹಾಗೂ ಕೃಷಿ ಸಲಕರಣೆಗಳ ಮಾರಾಟಗಾರರಿಗೆ ಹೇರಳ ಧನಾದಾಯ.

ಶ್ರೀ ದತ್ತ ಉಪಾಸನೆ. ಶುಭ ಸಂಖ್ಯೆ–9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಮಯ ಪ್ರಜ್ಞೆ ನೀಡುವ ಗುರುಗ್ರಹ ಅಶುಭ ಸ್ಥಿತನಿದ್ದಾನೆ. ಮುಂದಾಲೋಚನೆ ಇಲ್ಲದೆ ಮಾಡಿದ ಕೆಲಸಗಳಿಂದ ತೊಂದರೆಗಳು ಎದುರಾಗುವುದು. ಬುದ್ಧಿಶಾಲಿಗಳನ್ನು ಆಶ್ರಯಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಿ. ವಾರದ ಉತ್ತರಾರ್ಧಕ್ಕೆ ಸನ್ಮಿತ್ರರ ಸಹಾಯದಿಂದ ಸಂಕಷ್ಟದಿಂದ ಹೊರಬರುವಿರಿ. ನೆರೆಹೊರೆಯಲ್ಲಿ ವಾದ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ. ವಾತ ಸಂಬಂಧೀ ಕಾಯಿಲೆ ಕಾಡಬಹುದು.

ಓಂ ನಮೋ ನಾರಾಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ಹಣಕಾಸಿನ ತೊಂದರೆಗಳು ಸ್ವಲ್ಪ ಕಿರಿಕಿರಿಯನ್ನು ಉಂಟು ಮಾಡುತ್ತವೆ. ಕೆಲವು ವಿಚಾರಗಳು ನಿಮ್ಮ ಮನಸ್ಸಿನಂತೆ ಕೂಡಿ ಬರುವುದಿಲ್ಲ. ಆದಾಯ ಮತ್ತು ಖರ್ಚುಗಳು ಸಮಾನವಾಗಿರುತ್ತವೆ. ವ್ಯವಹಾರಗಳಲ್ಲಿ ಅಡೆತಡೆಗಳು ಬಂದರೂ ಪರಿಶ್ರಮದಿಂದ ಜಯಿಸುತ್ತೀರಿ. ಉದ್ಯೋಗದಲ್ಲಿ ಹೆಚ್ಚುವರಿ ಜವಾಬ್ದಾರಿ ಉಂಟಾಗಲಿದೆ. ಸ್ಥಿರಾಸ್ತಿ ವಿವಾದಗಳು ಕಿರಿಕಿರಿಯನ್ನು ಉಂಟು ಮಾಡುತ್ತದೆ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–7.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)


ವಾರದ ಆದಿಗೆ ಶುಭ ಚಂದ್ರನಿಂದ ಮನೆಯಲ್ಲಿ ಮಂಗಳ ಕಾರ್ಯ ನಡೆದು ಸಂತಸದ ಸಮಯ. ಸಮಾಜದಲ್ಲಿ ಪ್ರಮುಖರ ಸಂಪರ್ಕದಿಂದ ಫಾಯಿದೆ ಇದೆ. ಹಳೆಯ ಸ್ನೇಹಿತರ ಭೇಟಿಯಿಂದ ಪುಳಕಿತರಾಗುವಿರಿ. ಸರ್ಕಾರಿ ಅಧಿಕಾರಿಗಳ ಸಹಾಯದಿಂದ ಸಮಸ್ಯೆಗೆ ಪರಿಹಾರ ದೊರಕುವುದು. ಮುಖ್ಯ ಕೆಲಸಗಳನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸಿಕೊಳ್ಳಿ. ಸಾಲದಿಂದ ಮುಕ್ತಿ ದೊರೆಯುತ್ತದೆ. ನರಗಳಲ್ಲಿ ನಿಶ್ಯಕ್ತಿ ಕಾಡಬಹುದು.

ಶ್ರೀರಾಘವೇಂದ್ರ ಪೂಜೆ. ಶುಭ ಸಂಖ್ಯೆ–4.


ಮಕ್ಕಳ ಚಿತ್ರಕಥೆ

ಹೀಗೊಂದು ವಿಚಿತ್ರ ಹಾಗೂ ಹಾಸ್ಯ ಘಟನೆ

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಬಾಲ್ಯದಿಂದಲೂ ಅತ್ಯಂತ ಬಡತನ ಹಾಗೂ ಕಷ್ಟಕರ ದಿನಗಳನ್ನು ಅನುಭವಿಸಿದ್ದ "ಚಾರ್ಲಿಚಾಪ್ಲಿನ್" ಮುಂದೆ ವಿಶ್ವಮಟ್ಟದಲ್ಲೇ ಅತ್ಯಂತ ಜನಪ್ರಿಯ ಹಾಸ್ಯನಟನಾಗಿದ್ದು ಎಲ್ಲರಿಗೂ ತಿಳಿದಿರುವಂತದ್ದೆ. "ಚಾಪ್ಲಿನ್" ಎಂದಾಕ್ಷಣ, ಆತ ಧರಿಸಿಕೊಳ್ಳುತ್ತಿದ್ದ ತನ್ನ ಅಳತೆಗಿಂತ ದೊಡ್ಡದಾದ ಪ್ಯಾಂಟ್, ಕಾಲಿಗೆ ದೊಡ್ಡ ಸೈಜಿನ ಬೂಟುಗಳನ್ನು ಅದಲು–ಬದಲಾಗಿ ಹಾಕಿಕೊಳ್ಳುತ್ತಿದುದು. ಮೂಗಿನ ಕೆಳಗೆ ಅಂಟಿಸಿಕೊಂಡಿರುತ್ತಿದ್ದ ಚಿಕ್ಕ ಮೀಸೆ ನೆನಪಿಗೆ ಬರುತ್ತದೆ.



ಆತನಿಗೆ ತಾನು ಧರಿಸಿಕೊಳ್ಳುತ್ತಿದ್ದ ಪ್ರತಿಯೊಂದು ವಸ್ತುವಿನಲ್ಲೂ ಒಬ್ಬೊಬ್ಬ ಮಹಾನ್ ನಟ ಅಡಗಿ ಕುಳಿತಂತೆ ಕಂಡುಬರುತಿತ್ತಂತೆ. ಇಷ್ಟೇ ಅಲ್ಲದೆ ಆತನೇ, "ನನ್ನ ಈ ವೇಷಕ್ಕೆ ಸಾವಿರಾರು ಮುಖಗಳಿವೆ...!" ಎನ್ನುತ್ತಿದ್ದ.



ಚಾಪ್ಲಿನ್ ತನ್ನ ನಟನೆಯ ಮೂಲಕ ಜನಪ್ರಿಯತೆಯ ಉತ್ತುಂಗ ಶಿಖರವನ್ನೇರುತ್ತಿದ್ದ ಸಮಯದಲ್ಲಿ ಒಂದು ವಿಚಿತ್ರ ಹಾಗು ಹಾಸ್ಯ ಘಟನೆಯೊಂದು ನಡೆಯಿತು. ಒಮ್ಮೆ ಚಾರ್ಲಿಚಾಪ್ಲಿನ್‌ನ ವೇಷಭೂಷಣ (ಫ್ಯಾನ್ಸಿ ಡ್ರೆಸ್) ಸ್ಪರ್ಧೆಯನ್ನು ಸ್ಥಳೀಯ ನಾಗರೀಕರಿಗಾಗಿ ಏರ್ಪಡಿಸಲಾಗಿತ್ತು. ನೂರಾರು ಜನರು ಅತ್ಯುತ್ಸಾಹದಿಂದ ಭಾಗವಹಿಸಲು ಮುಂಬರುತ್ತಿದ್ದರು.



ಈ ಬಗೆಯ ವೇಷಭೂಷಣ ಸ್ಪರ್ಧೆ ಏರ್ಪಡಿಸಿರುವ ವಿಷಯ ಚಾಪ್ಲಿನ್ ಕಿವಿಗೂ ಬಿತ್ತು. ತಮಾಷೆ ಏನೆಂದರೆ, ಈ ನೈಜ ಚಾಪ್ಲಿನ್ ಕೂಡ ಯಾರಿಗೂ ತಿಳಿಯದಂತೆ ಆ ಸ್ಪರ್ಧೆಯಲ್ಲಿ ಭಾಗವಹಿಸಲು ತೀರ್ಮಾನಿಸಿ ಹೊರಟೇಬಿಟ್ಟ.



ನಿಗದಿತ ದಿನಾಂಕದಂದು ನಡೆದ ಆ ಸ್ಪರ್ಧೆಯಲ್ಲಿ ನೂರಾರು ಜನ "ಚಾಪ್ಲಿನ್ ವೇಷಧಾರಿ"ಗಳ ಉಡುಗೆ–ತೊಡುಗೆ, ನಟನೆ, ಚಾಪ್ಲಿನ್‌ನಂತೆಯೇ ಕಾಣುವ ರೂಪ ಹೀಗೆ ಎಲ್ಲವನ್ನೂ ಕಂಡು ಆನಂದವನ್ನು ಆಸ್ವಾಧಿಸುತ್ತಾ ಕುಳಿತಿದ್ದ ಅಪಾರ ಪ್ರೇಕ್ಷಕ ವರ್ಗದ ಜೊತೆಗೆ ಸ್ಪರ್ಧೆಯ ವಿಜೇತರುಗಳನ್ನು ಆಯ್ಕೆ ಮಾಡಲು ತೀರ್ಪುಗಾರರೂ ಸಹ ಮುಂಬದಿಯಲ್ಲಿ ಕುಳಿತು ಕುತೂಹಲದಿಂದ ವೀಕ್ಷಿಸುತ್ತಿದ್ದುದನ್ನು ಕಾಣಬಹುದಾಗಿತ್ತು.



ವಿಚಿತ್ರವೇನೆಂದರೆ ಈ "ಚಾಪ್ಲಿನ್ ವೇಷಭೂಷಣ" ಸ್ಪರ್ಧೆಯಲ್ಲಿ ಖುದ್ದಾಗಿ ನೈಜ ಚಾಪ್ಲಿನ್‌ನೇ ಭಾಗವಹಿಸಿ ತನ್ನ ಎಂದಿನ ನಟನೆ, ಹಾವ–ಭಾವಗಳನ್ನು ಅಭಿನಯಿಸಿ ತೋರಿಸಿದ್ದರೂ ತೀರ್ಪುಗಾರರು ಆತನನ್ನೇ ಮೂರನೇ ಸ್ಥಾನಕ್ಕೆ ಆಯ್ಕೆ ಮಾಡಿಬಿಟ್ಟಿದ್ದರು.

ನೀತಿ: "ಮೂರ್ಖರು ನೀಡುವ ತೀರ್ಪಿಗೆ ಎಂದಿಗೂ ಧೈರ್ಯಗೆಡಬೇಡಿ...!"

ನರಸೀಪುರದಲ್ಲಿ ವೈಭವದ ಹನುಮ ಜಯಂತಿ ಮೆರವಣಿಗೆ

●ಮೊಳಗಿದ ಜೈ ಹನುಮಾನ್, ಜೈ ಶ್ರೀರಾಂ ಘೋಷಣೆ ●ಜನಾಕರ್ಷಿಸಿದ ಕಲಾತಂಡ





ತಿ.ನರಸೀಪುರ ಜು 8– ಪಟ್ಟಣದಲ್ಲಿ ಯುವಕರ ಪಡೆ ವತಿಯಿಂದ ಶ್ರೀ ಹನುಮ ಜಯಂತಿಯು ಸಡಗರ ಸಂಭ್ರಮದಿಂದ ಮತ್ತು ವಿಜೃಂಭಣೆಯಿಂದ ನೆರವೇರಿತು.

ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯದ ಬಳಿ ಹನುಮ ಜಯಂತಿಯ ಅಂಗವಾಗಿ ಹನುಮನ ಮೂರ್ತಿಯ ಮೆರವಣಿಗೆಗೆ ಮಧ್ಯಾಹ್ನ 3.30 ಕ್ಕೆ ವಾಟಾಳು ಮಠಾಧ್ಯಕ್ಷರಾದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಹನುಮನ ವಿಗ್ರಹಕ್ಕೆ ಪುಷ್ಪ ಮಾಲಿಕೆ ಅರ್ಪಿಸುವ ಮೂಲಕ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ಹನುಮನ ಕೃಪಾಶೀರ್ವಾದ ನಾಡಿನ ಹಾಗೂ ರಾಜ್ಯದ ಜನರಿಗೆ ದೊರಕಿ ರಾಜ್ಯದ ಜನ ಸುಭೀಕ್ಷವಾಗಿ ಬದುಕವಂತಾಗಲಿ. ಮಳೆ, ಬೆಳೆ ಚೆನ್ನಾಗಿ ಆಗಿ ರಾಜ್ಯದ ಜನರು ನೆಮ್ಮದಿಯಿಂದ ಬದುಕಲಿ ಹಾಗೂ ತಿ.ನರಸೀಪುರ ತಾಲ್ಲೂಕಿನ ಜನರು ಸಮೃದ್ಧಿ, ಆರೋಗ್ಯ, ಸಂತೋಷದಿಂದರಲಿ ಎಂದು ಶುಭ ಕೋರಿದರು. ಜತೆಗೆ ಯುವ ಸಮುದಾಯ ಹನುಮ ಜಯಂತಿ ಮಾಡು ವುದಷ್ಟೆ ಅಲ್ಲ ಉತ್ತಮ ಶಿಕ್ಷಣ ಪಡೆದು ಸಮಾಜದ ಒಳಿತಿಗೆ ಶ್ರಮಿಸುವಂತಾಗಲಿ ಎಂದು ಹಾರೈಸಿದರು.

ಬಳಿಕ ದೇವಾಲಯದ ಮುಂಭಾಗದಿಂದ ಆರಂಭಗೊಂಡ ಜಯಂತಿಯ ಉತ್ಸವ ಮೆರವಣಿಗೆ ವಿಶ್ವ ಕರ್ಮ ಬೀದಿ ರಸ್ತೆ, ಪ್ರೈಮರಿ ಸ್ಕೂಲ್ ರಸ್ತೆ, ಭಗವಾನ್ ವೃತ್ತ, ಪುರಸಭಾ ರಸ್ತೆ, ತಾಲ್ಲೂಕು ಕಚೇರಿ ರಸ್ತೆ, ವಿದ್ಯೋದಯ ವೃತ್ತ ಹಾಗೂ ಖಾಸಗಿ ಬಸ್ ನಿಲ್ದಾಣ, ಲಿಂಕ್ ರಸ್ತೆಯ ಮೂಲಕ ಮತ್ತೆ ಭಗವಾನ್ ವೃತ್ತದಲ್ಲಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ಪೂಜಾ ಕುಣಿತ, ವೀರಗಾಸೆ, ಚಂಡ ವಾದ್ಯ, ದೇವರ ಕುಣಿತ, ಡೊಳ್ಳುಕುಣಿತ, ಗಾಡಿಗೊಂಬೆ ಕಲಾ ಪ್ರಕಾರಗಳ ತಂಡ, ಹನುಮನ ಮೂರ್ತಿ ಜನರ ಮನ ಸೆಳೆಯಿತು.

ಇದಕ್ಕೂ ಮುನ್ನಾ ಗುಂಜಾನರಸಿಂಹಸ್ವಾಮಿ ದೇವಾಲಯದ ಪಕ್ಕದ ಆವರಣದಲ್ಲಿ ಹನುಮನ ಉತ್ಸವಕ್ಕೆ ಮುನ್ನಾ ಹೆಸರಾಂತ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಅರ್ಚಕ ಪವನ್ ಕುಮಾರ್ ಅವರ ನೇತೃತ್ವದಲ್ಲಿ ಹೋಮ, ಪೂಜಾ ಕೈಂಕರ್ಯಗಳು ಜರುಗಿದವು.

ಪಟ್ಟಣದಲ್ಲಿ ಅದ್ದೂರಿ ಹನುಮ ಜಯಂತಿ ಶೋಭಾಯಾತ್ರೆ ಆಚರಣೆ ಹಿನ್ನೆಲೆ ಎಲ್ಲೆಲ್ಲೂ ಕೇಸರಿ ಧ್ವಜಗಳು ರಾರಾಜಿಸಿದವು. ಮುನ್ನೆಚ್ಚರಿಕೆಯಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಹನುಮ ಜಯಂತಿ ಮೆರವಣಿಗೆಯಲ್ಲಿ ಸಹಸ್ರಾರು ಜನರು ಭಾಗವಹಿಸಿದ್ದರು. ಎಲ್ಲೆಲ್ಲೂ ಜೈ ಶ್ರೀ ರಾಮ್ ಘೋಷಣೆಗಳು ಮೊಳಗಿದವು. ಹನುಮ ಭಕ್ತರು ಹಲವು ಹಾಡಿಗೆ ಹೆಜ್ಜೆ ಹಾಕಿ ಕುಪ್ಪಳಿಸಿದರು. ಎಲ್ಲರಿಗೂ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಕೇಸರಿ ಧ್ವಜಗಳು ಗಮನ ಸೆಳೆದವು. ಗಿಜುಗುಡುತ್ತಿದ್ದ ಮೆರವಣಿಗೆಯಲ್ಲಿ ಯುವಕರ ಉತ್ಸಾಹ ಮುಗಿಲು ಮುಟ್ಟಿತ್ತು.

ಮುನ್ನೆಚ್ಚರಿಕೆ ಕ್ರಮವಾಗಿ ಕಾರ್ಯಕ್ರಮ ಜಿಲ್ಲಾ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಹಾಗೂ ಅಡಿಷನಲ್ ಎಸ್ ಪಿ ಡಾ.ನಂದಿನಿ ಅವರು ಖುದ್ದು ಪರಿಶೀಲಿಸಿ ಅಗತ್ಯ ಪೊಲೀಸ್ ಬಂದೋಬಸ್ತ್ ನಿಯೋಜಿಸಿದ್ದರು. ಮದ್ಯದಂಗಡಿಗಳನ್ನು ಮುಚ್ಚಿಸಲಾಗಿತ್ತು. ರಸ್ತೆಯುದ್ದಕ್ಕೂ ಸಂಚಾರಿ ಪೊಲೀಸರು ಸೇರಿದಂತೆ ನೂರಾರು ಸಿಬ್ಬಂದಿ ನಿಯೋಜಿಸಲಾಗಿತ್ತು.

ಹನುಮ ಜಯಂತಿಗೆ ಬಿಜೆಪಿ ಮುಖಂಡರ ದಂಡು

ರಾಜ್ಯದ ಸಾರ್ವತ್ರಿಕ ವಿಧಾನಸಭಾ ಚುನಾವಣೆ ಮುಗಿದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಬಿಜೆಪಿ ಹಿನ್ನಡೆಯಾದ ಮೇಲೆ ಬಿಜೆಪಿ ಮುಖಂಡರು ಯಾವ ಕಾರ್ಯಕ್ರಮದ ಭಾಗವಹಿಸುತ್ತಿರಲಿಲ್ಲ. ಆದರೆ ಇಂದು ಹನುಮನ ಜಯಂತಿಗೆ ಹಾಜರಾಗಿದ್ದರು. ಉತ್ಸವದಲ್ಲಿ ಮುಖಂಡ ದಂಡೆ ಕಾಣುತ್ತಿತ್ತು. ವಾಟಾಳ್ ಮಠದ ಸಿದ್ದಲಿಂಗ ಶಿವಾಚಾರ್ಯ ಮಹಾ ಸ್ವಾಮೀಜಿ, ಉದ್ಯಮಿ ಎಸ್‌ಎಂಆರ್ ಪ್ರಕಾಶ್, ಆಲಗೂಡು ಪಿಎಸಿಎಸ್ ಅಧ್ಯಕ್ಷ ಬಿ. ವೀರಭದ್ರಪ್ಪ ಬಳಗದ ರಾಮಾನುಜಮ್, ಬೈರಾಪುರ ಬಾಲು, ಕೆಬ್ಬೆ ಹುಂಡಿ ಶಿವಕುಮಾರ್ (ದಕ್ಷ), ಕೆ.ನಂಜುಂಡಸ್ವಾಮಿ, ವೆಂಕಟರಮಣ ಶೆಟ್ಟಿ, ಆಲಗೂಡು ಮಂಜು, ರಾಮು, ಕರುವಟ್ಟಿ ಬಸವರಾಜು, ರಂಗು ನಾಯಕ ಇದ್ದರು.

ಲಯನ್ಸ್ ಸೇವಾ ಕಾರ್ಯಗಳಿಂದ ಸಮಾಜ ಸುಧಾರಣೆ: ಎನ್. ಸುಬ್ರಹ್ಮಣ್ಯ

ಸರಗೂರು, ಜು.8– ಸರಗೂರು ಪಟ್ಟಣದ ಲಯನ್ಸ್ ಸಂಸ್ಥೆಯು ಸೇವಾಕಾರ್ಯಗಳ ಮೂಲಕ ಸಮಾಜದ ಸುದಾರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದು, ಇದು ಹೀಗೆ ಮುಂದುವರೆಯಲಿ ಎಂದು ಲಯನ್ ಸಂಸ್ಥೆ ಲಯನ್ಸ್ 317ಜಿ ಜಿಲ್ಲಾ ಪ್ರಥಮ ಉಪ ರಾಜ್ಯಪಾಲ ಎನ್. ಸುಬ್ರಹ್ಮಣ್ಯ ಕರೆ ನೀಡಿದರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ಶನಿವಾರ ನಡೆದ ಲಯನ್ಸ್ ಸಂಸ್ಥೆಯ ಪ್ರತಿಜ್ಞಾ ವಿಧಿ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಚಿಂತನೆಯಲ್ಲಿ ಸ್ಪಷ್ಟತೆ, ಹೃದಯದಲ್ಲಿ ಪರಿಶುದ್ಧತೆ ಇದ್ದರೆ ನಾವು ಮಾಡುವ ಯಾವುದೇ ಕೆಲಸಗಳು ಶ್ರೇಷ್ಠತೆಯಿಂದ ಪರಿಪೂರ್ಣವಾಗಿರುತ್ತವೆ ಎಂದರು.

ನಂತರ ನೂತನ ಅಧ್ಯಕ್ಷ ಎಸ್.ನಾರಾಯಣ್ ಹಾಗೂ ನಿರ್ದೇಶಕರಿಗೆ ಪ್ರತಿಜ್ಞಾ ವಿಧಿ ಭೋದಿಸಲಾಯಿತು. ಲಯನ್ಸ್ ಕಾರ್ಯದರ್ಶಿ ಎಸ್.ಎಸ್.ಪ್ರಭುಸ್ವಾಮಿ ಮಾತನಾಡಿ, ಲಯನ್ಸ್ ಸಂಸ್ಥೆ ಪ್ರಾರಂಭದಲ್ಲಿ ಲಯನ್ಸ್ ಎಸ್.ಎನ್.ಪದ್ಮ, ಪ್ರಸಾದ್, ಟ್ರಸ್ಟಿ ಬ್ರಹ್ಮದೇವಯ್ಯನವರ ಜೊತೆ 28 ಸದಸ್ಯರು ಸೇರಿ ಈಸಂಸ್ಥೆ ಬೆಳೆಯಲು ಕಾರಣವಾಗಿದ್ದಾರೆ. ಪ್ರಥಮ ಹಂತದಲ್ಲಿ ನಮ್ಮ ಶಾಲೆಯಲ್ಲಿ 15 ಮಕ್ಕಳು ಶಿಕ್ಷಣ ಕಲಿಯಲು ಬರುತ್ತಿದ್ದರು. ಇಂದು 580 ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ, ಪ್ರತಿವರ್ಷವು ನಮ್ಮ ಶಾಲೆಯಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ನೂರಕ್ಕೆ ನೂರು ಫಲಿತಾಂಶ ಬರುತ್ತಿದ್ದು ಇದಕ್ಕೆ ಕಾರಣರಾದ ನಮ್ಮ ಶಾಲೆಯ ಶಿಕ್ಷಕ ವೃಂದದವರಿಗೆ ಅಭಿನಂದನೆ ಎಂದರು.

ಶಿಕ್ಷಣ, ಆರೋಗ್ಯ, ಅದ್ಯಾತ್ಮಕ ಮೂರು ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದ ತಾಲೂಕಿನ ಬಿ.ಮಟಕೆರೆ ಪ್ರಾಥಮಿಕ ಆರೋಗ್ಯಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರ ಶೇಖರ್, ವಿಭಾ ಸುರೇಶ್ ಜೈನ್ ಅವರನ್ನು ಲಯನ್ಸ್ ಸಂಸ್ಥೆವತಿಯಿಂದ ಅಭಿನಂದಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಲಯನ್ ಕೆ.ಎಲ್.ರಾಜಶೇಖರ್, ಲಯನ್ ಮತ್ತೀದೇವಕುಮಾರ್, ಲಯನ್ ವಿಠಲ್, ಲಯನ್ ಹೆಚ್.ಎಸ್.ವಿನೋದ್ ರಾಂಶೀಕರ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಸದಸ್ಯರಾದ ವೀರೇಶ್, ಶ್ರೀನಿವಾಸ್, ನೂತನ ಅಧ್ಯಕ್ಷ ಎಸ್.ನಾರಾಯಣ್, ಕಾಯದರ್ಶಿ ಎಸ್.ಎನ್.ಪ್ರತಾಪ್, ಖಜಾಂಚಿ ಎಸ್.ಎಸ್.ಪ್ರಭುಸ್ವಾಮಿ, ನಿರ್ದೇಶಕರಾದ ಕೆ.ಸುರೇಶ್ ಜೈನ್, ಎಸ್.ಪಿ.ಪ್ರಸಾದ್, ನಿಕಟ ಪೂರ್ವ ಅಧ್ಯಕ್ಷ ಬ್ರಹ್ಮದೇವಯ್ಯ, ಎಸ್.ಎಸ್.ಶ್ರೀಕಂಠಸ್ವಾಮಿ, ಎಸ್.ಬಿ.ನಾಗರಾಜು, ಎಸ್.ಎಸ್.ಸೋಮಪ್ರಭ, ಎಸ್.ಬಿ.ಸಮಂತ್‌ಜೈನ್, ಎಸ್.ಎಸ್.ಸಿ. ಸೀಮಾ ಮೋಹನ್‌ಕುಮಾರ್, ಸಮಂತ್‌ಜೈನ್, ಎಸ್.ಪಿ.ಪ್ರಮೋದ್, ಮದನ್ ಎಸ್.ಎಸ್. ಎಸ್.ಮಂಜುನಾಥ್, ವರ್ತಕರ ಸಂಘದ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್, ಕಾರ್ಯ ದರ್ಶಿ ಎಸ್.ಸಿ.ವೆಂಕಟೇಶ್, ಶಾಲಾ ಮುಖ್ಯ ಶಿಕ್ಷಕರಾದ ಬಿ.ಡಿ. ದಾಸಾಚಾರಿ, ಪದ್ಮ, ಹಾಗೂ ಶಿಕ್ಷಕ ವೃಂದ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.



ಆಫ್ರಿಕಾದಲ್ಲಿ ಹೆಚ್.ಡಿ.ಕೋಟೆ ಯುವಕ ಸಾವು ಪ್ರಕರಣ

ಟೈಗರ್ ಬ್ಲಾಕ್ ಗ್ರಾಮಕ್ಕೆ ಮೃತದೇಹ ತರುವ ವ್ಯವಸ್ಥೆ

ಮೃತನ ನಿವಾಸಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ, ಸಾಂತ್ವನ, ಭರವಸೆ



> ಈ ಬಡ ಕುಟುಂಬಕ್ಕೆ ಆಧಾರಸ್ತಂಭವಾಗಿದ್ದಂತಹ ಮೃತ ಎಫ್ರಾಯಿಂ, ಕುಟುಂಬಕ್ಕೆ ಸ್ವಂತ ಮನೆ ಇಲ್ಲದ ಕಾರಣ ಸರ್ಕಾರದ ವತಿಯಿಂದ ಮನೆ ಕಟ್ಟಿಸಿಕೊಡುವ ವ್ಯವಸ್ಥೆ ಮಾಡಿಕೊಡುತ್ತೇನೆ, ಅವರ ತಂಗಿ ಕನ್ನಿಕ ಅವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕುಟುಂಬಕ್ಕೆ ಸರ್ಕಾರದ ಸವಲತ್ತುಗಳನ್ನು ಕೊಡಿಸುವೆ.
> -ಅನಿಲ್ ಚಿಕ್ಕಮಾದು, ಶಾಸಕ

ಹೆಚ್.ಡಿ.ಕೋಟೆ, ಜು.8– ಆಫ್ರಿಕಾದ ಐವರಿ ಕೋಸ್ಟ್‌ನಲ್ಲಿ ಸಾವನ್ನಪ್ಪಿದ ಟೈಗರ್ ಬ್ಲಾಕ್ ನಿವಾಸಿ ಇಫ್ರಾಹಿಂ (19) ಅವರ ಮೃತ ದೇಹವನ್ನು ಟೈಗರ್ ಬ್ಲಾಕ್ ಗ್ರಾಮಕ್ಕೆ ತರಿಸುವ ವ್ಯವಸ್ಥೆ ಮಾಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದ್ದಾರೆ.

ತಾಲೂಕಿನ ಟೈಗರ್ ಬ್ಲಾಕ್ ಗ್ರಾಮದ ಎಫ್ರಾಯಿಂ ಆಫ್ರಿಕಾದ ಐವರಿಕೋಸ್ಟ್‌ನಲ್ಲಿರುವ ಸೆಂಟರ್ ಹಾಸ್ಪಿಟಲ್ ಮತ್ತು ಯುನಿವರ್ಸಿಟೇರ್ ಡಿ. ಆಂಗ್ರೆ ಆಸ್ಪತ್ರೆಯಲ್ಲಿ ಡೆಂಗ್ಯೂ ಜ್ವರದಿಂದ ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಟೈಗರ್ ಬ್ಲಾಕ್ ಗ್ರಾಮಕ್ಕೆ ತೆರಳಿ ಮೃತ ಇಫ್ರಾಯಿಂ ಮೃತರ ಕುಟುಂಬವನ್ನು ಭೇಟಿ ಮಾಡಿ, ಕುಟುಂಬಕ್ಕೆ ಧನಸಹಾಯ ಮಾಡುವುದರ ಮೂಲಕ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು ನಾನು ಸದನದಲ್ಲಿ ಭಾಗವಹಿಸಿದ್ದ ಕಾರಣ ಗ್ರಾಮಕ್ಕೆ ಬರಲು ಸಾಧ್ಯವಾಗಲಿಲ್ಲ. ಅದಕ್ಕೆ ಇಂದು ಬಂದಿದ್ದೇನೆ, ನಿಮ್ಮ ಮಗನ ಮೃತ ದೇಹವನ್ನು ಗ್ರಾಮಕ್ಕೆ ತರುವ ಸಂಬಂಧ ಸರ್ಕಾರದಿಂದ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದೇನೆ ಎಂದು ಮೃತ ಎಫ್ರಾಯಿಂ ತಾಯಿ ಮುಮಟ ಅವರಿಗೆ ತಿಳಿಸಿದರು.

ಇದೇ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಆಫ್ರಿಕಾದಲ್ಲಿರುವ, ಮೃತ ಇಫ್ರಾಹಿಂ ಅವರ ಸಂಬಂಧಿಕರರೊಂದಿಗೆ ವಿಡಿಯೋ ಕಾಲ್ ಮುಖಾಂತರ ಮಾತನಾಡಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡರು.

ಮೃತ ಎಫ್ರಾಯಿಂ ಸಂಬಂಧಿ ಪ್ರಕಾಶ್ ಶಾಸಕರೊಂದಿಗೆ ಮಾತನಾಡಿ ಮೃತ ದೇಹವನ್ನು ತಾಯ್ನಾಡಿಗೆ ತರಲು ಒಂದು ಲಕ್ಷದವರೆಗೂ ವೆಚ್ಚವಾಗುತ್ತದೆ. ಆದ್ದರಿಂದ ಆ ಹಣವನ್ನು ಬರಿಸಿ ಕೊಡುವ ವ್ಯವಸ್ಥೆ ಮಾಡಿಕೊಡಿ ಎಂದು ಕೇಳಿಕೊಂಡರು, ಅದಕ್ಕೆ ಶಾಸಕ ಅನಿಲ್ ಚಿಕ್ಕಮಾದು 1 ಲಕ್ಷ ಹಣವನ್ನು ಬರಿಸಿಕೊಡುವ ವ್ಯವಸ್ಥೆ ನಾನು ಮಾಡಿಕೊಡುತ್ತೇನೆ. ನಿಮ್ಮ ಮಗನ ಮೃತ ದೇಹವನ್ನು ನಿಮ್ಮ ಗ್ರಾಮಕ್ಕೆ ತರಿಸಿ ಕೊಡುವೆ ಎಂದು ಮೃತರ ಕುಟುಂಬಕ್ಕೆ ತಿಳಿಸುವುದರ ಮೂಲಕ ಧೈರ್ಯ ತುಂಬಿದರು.

ಈ ವೇಳೆ ತಹಶೀಲ್ದಾರ್ ಸಣ್ಣ ರಾಮಪ್ಪ ಪರಿಶಿಷ್ಟ ಕಲ್ಯಾಣ ವರ್ಗಗಳ ಇಲಾಖೆಯ ಸಿಬ್ಬಂದಿ ನಾಗರಾಜ್, ಪುರಸಭಾ ಸದಸ್ಯರುಗಳಾದ ಎಚ್.ಸಿ.ನರಸಿಂಹಮೂರ್ತಿ, ಮಧು, ಮುಖಂಡರಾದ ಪರಶಿವ ಮೂರ್ತಿ, ಸೌಮ್ಯ ಮಂಜುನಾಥ್, ಅಶೋಕ್, ರಿಜ್ವಾನ್, ಚಾಮರಾಜ್, ಡಿ.ಸಿ.ಸ್ವಾಮಿ, ಟೈಗರ್ ಬ್ಲಾಕ್ ಗ್ರಾಮದ ಮುಖಂಡ ಇವನ್ ರಾಜ್, ಸಂತ್ರ, ಇನ್ನು ಮುಂತಾದವರು ಇದ್ದರು.

ಕೆ.ಆರ್.ನಗರ ಆಸ್ಪತ್ರೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

ಕೆ.ಆರ್.ನಗರ, ಜು.8– ತಾಲೂಕು ಸಾರ್ವಜನಿಕ ಆಸ್ಪತ್ರೆ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಸಂಸದರ ಅನುದಾನದಿಂದ ನಿರ್ಮಾಣ ಮಾಡಲಾದ ಶುದ್ದ ಕುಡಿಯುವ ನೀರಿನ ಘಟಕಗಳನ್ನು ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯರಾದ ಸುಮಲತಾ ಅಂಬರೀಶ್ ಶನಿವಾರ ಲೋಕಾರ್ಪಣೆ ಮಾಡಿದರು.

ಈ ವೇಳೆ ಮಾತನಾಡಿದ ಅವರು ಆಸ್ಪತ್ರೆಗಳಿಗೆ ಬರುವಂತಹ ಬಡ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗಲಿ ಎಂಬ ಕಾರಣದಿಂದ ಶುದ್ದ ಕುಡಿಯುವ ನೀರಿನ ಘಟಕಗಳನ್ನು ಆರಂಭಿಸಲಾಗಿದೆ. ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳುವುದರ ಜತೆಗೆ ಸ್ವಚ್ಚತೆ ಕಾಪಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಕೆ.ಆರ್.ಮಹೇಂದ್ರಪ್ಪ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಚೀರ್ನಹಳ್ಳಿಶಿವಣ್ಣ, ಬಿಜೆಪಿ ಮುಖಂಡ ಹೊಸಹಳ್ಳಿವೆಂಕಟೇಶ್, ಮುಖಂಡರಾದ ಕೃಷ್ಣಭಟ್, ಕೆ.ಎಂ.ಶ್ರೀನಿವಾಸ್, ಸುಮಂತ್, ಮಾರ್ಕಂಡಯ್ಯಸ್ವಾಮಿ ಮತ್ತಿತರರು ಹಾಜರಿದ್ದರು.



ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬಾಲಕ ಸಾವು

ಮೃತನ ಕುಟುಂಬಕ್ಕೆ ಪರಿಹಾರ ವಿತರಿಸಿದ ಶಾಸಕ



ನಂಜನಗೂಡು, ಜು.8– ತಾಲೂಕಿನ ಮಹದೇವ ನಗರ ಬಳಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕೆಲ ದಿನಗಳ ಹಿಂದೆ ವಿದ್ಯುತ್ ಅವಘಡದಿಂದ ಮೃತಪಟ್ಟಿದ್ದ ಬಾಲಕನ ಕುಟುಂಬಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಮತ್ತು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ 2.5 ಲಕ್ಷ ರೂಗಳ ಪರಿಹಾರ ಚೆಕ್ ವಿತರಿಸಿದರು.

ಚೆಕ್ ವಿತರಿಸಿ ಮಾತನಾಡಿದ ಶಾಸಕ ದರ್ಶನ್ ದ್ರುವ ನಾರಾಯಣ್, ವಸತಿ ಶಾಲೆಗಳಲ್ಲಿ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಇಂತಹ ಅವಘಡಗಳು ಮರುಕಳಿಸಿದಂತೆ ಅಧಿಕಾರಿ ವರ್ಗದವರು ಎಚ್ಚರ ವಹಿಸಬೇಕು, ತಂದೆ ತಾಯಿಗಳಿಗೆ ಮಕ್ಕಳನ್ನು ಕಳೆದುಕೊಂಡ ದುಃಖವನ್ನು ನಾವು ಹಣ ನೀಡಿ ಸಂತೈಸಲು ಸಾಧ್ಯವಾಗುವುದಿಲ್ಲ ಬದಲಾಗಿ ನಾವು ಮಾನಸಿಕ ಸ್ಥೈರ್ಯ ತುಂಬುವ ಕೆಲಸವನ್ನು ಮಾತ್ರ ಮಾಡಲು ಸಾಧ್ಯ ಎಂದರು.

ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯರವರ ಹೋರಾಟದ ಫಲವಾಗಿ ಪರಿಹಾರ ದೊರಕಿದೆ. ಜೊತೆಗೆ ಘಟನೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ವಹಿಸಿಲ್ಲ ಎಂಬುದು ಪೋಷಕರು ದೂರಿದ್ದು, ಘಟನೆಯ ವರದಿ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಕೆಲಸವನ್ನು ಮಾಡಲಾಗುವುದು. ಜೊತೆಗೆ ಹೆಚ್ಚಿನ ಪರಿಹಾರ ಕೊಡಿಸುವ ಪ್ರಯತ್ನವನ್ನು ಮಾಡಲಾಗುತ್ತದೆ ಎಂದರು.

ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಅಧಿಕಾರಿ ವರ್ಗದವರು ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನವನ್ನು ಮಾಡಿದ್ದರು. ಆದರೆ ದಸಂಸ ಪದಾಧಿಕಾರಿಗಳ ಹೋರಾಟದ ಫಲವಾಗಿ ಪ್ರಕರಣ ಬೆಳಕಿಗೆ ಬರುವಂತಾಗಿತ್ತು. ಈ ಘಟನೆ ಸಂಬಂಧ ನಾನು ಸದನದಲ್ಲಿ ಧ್ವನಿ ಎತ್ತಿದ್ದರಿಂದ ಅಲ್ಪ ಪ್ರಮಾಣದ ಪರಿಹಾರ ದೊರಕಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿಎಂ ರಾಮು, ಮಾಜಿ ಸದಸ್ಯ ಲತಾ ಸಿದ್ಧಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿಎಂ ಶಂಕರ್, ಮುಖಂಡರಾದ ವಿಜಯ ಕುಮಾರ್, ದೊರೆಸ್ವಾಮಿ ನಾಯಕ, ಜಯಮಾಲ ಬೀರೇಗೌಡ, ನಗರ್ಲೆ ವಿಜಯ್ ಕುಮಾರ್, ಮಲ್ಲಳ್ಳಿ ನಾರಾಯಣ, ಕಾರ್ಯ ಬಸವಣ್ಣ, ತಹಸಿಲ್ದಾರ್ ಶಿವಕುಮಾರ್, ತಾಪಂ ಇಒ ರಾಜೇಶ್, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡರ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ವಿನಯ್ ಎಸ್.ವಿ. ನಿಧನ

ಸರಗೂರು, ಜು.8– ಸರಗೂರು ಪಟ್ಟಣದ ನ್ಯಾಯಬೆಲೆ ಅಂಗಡಿ ಮಾಲೀಕ ವಿನಯ್ ಎಸ್.ವಿ. (45) ಶನಿವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಮೃತರು ತಾಯಿ ಹಾಗೂ ಒಬ್ಬ ತಮ್ಮ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಸರಗೂರು ತಾಲೂಕು ನ್ಯಾಯಬೆಲೆ ಅಂಗಡಿ ಮಾಲೀಕರು ಮೃತರ ಅಂತಿಮ ದರ್ಶನ ಪಡೆದರು, ಮೃತರ ಅಂತ್ಯಕ್ರಿಯೆ ಕಪಿಲಾ ನದಿ ದಡದಲ್ಲಿ ಶನಿವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮೂಲ್ಯ ಜೀವ ಉಳಿಸುವ ರಕ್ತದಾನದಿಂದ ಬದುಕು ಸಾರ್ಥಕ

ಮೈಮುಲ್ ನಿರ್ದೇಶಕ ಆರ್.ಚಲುವರಾಜು ಅದ್ದೂರಿ ಹುಟ್ಟುಹಬ್ಬ ಆಚರಣೆ





ಹುಟ್ಟುಹಬ್ಬ ಆಚರಿಸಿಕೊಂಡ ಮೈಮುಲ್ ನಿರ್ದೇಶಕ ಆರ್.ಚಲುವರಾಜು ಅವರನ್ನು ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರು ಅಭಿಮಾನಿಗಳ ಸಮ್ಮುಖದಲ್ಲಿ ಅಭಿನಂದಿಸಿ, ಶುಭಾಶಯ ಕೋರಿದರು. ಇದೇ ಸಂದರ್ಭದಲ್ಲಿ ರಕ್ತದಾನ ಶಿಬಿರವನ್ನು ನಡೆಸಲಾಯಿತು. ಅಭಿಮಾನಿಗಳು ಹಾಗೂ ಹಿತೈಷಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಮೈಮುಲ್ ನಿರ್ದೇಶಕ ಆರ್.ಚಲುವರಾಜು ಅವರನ್ನು ಹಳೇ ಕೆಂಪಯ್ಯನಹುಂಡಿ ಗ್ರಾಮದ ರವಿ, ಶಿವರಾಜು, ಶೇಖರ್‌ಗೌಡ, ಕೃಷ್ಣ ಮಧು, ಸಂದೀಪ್, ರಮೇಶ್, ಲೋಕೇಶ್ ಅವರುಗಳು ಅಭಿನಂದಿಸಿ, ಶುಭಾಶಯ ಕೋರಿದರು.

ತಿ.ನರಸೀಪುರ, ಜು.8– ಅನಾರೋಗ್ಯದ ಸಂದರ್ಭದಲ್ಲಿ ಅಮೂಲ್ಯವಾದ ಜೀವವನ್ನು ಉಳಿಸಲು ಮಾಡುವ ರಕ್ತದಾನ ಪ್ರತಿಯೊಬ್ಬ ವ್ಯಕ್ತಿಯ ಬದುಕನ್ನು ಸಾರ್ಥಕಗೊಳಿಸುತ್ತದೆ ಎಂದು ಮೈಮುಲ್ ನಿರ್ದೇಶಕ ಹಾಗೂ ತಾ.ಪಂ ಮಾಜಿ ಅಧ್ಯಕ್ಷ ಆರ್. ಚಲುವರಾಜು ಹೇಳಿದರು.

ತಾಲ್ಲೂಕಿನ ಕೇತುಪುರ ಗ್ರಾಮದಲ್ಲಿ ತಮ್ಮ 39ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿ ಬಳಗ ಹಾಗೂ ಮೈಸೂರಿನ ಲಯನ್ಸ್ ಜೀವಧಾರ ರಕ್ತ ನಿಧಿ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ಯುವಕರಿಗೆ ಪ್ರಸಂಶನಾ ಪ್ರಮಾಣ ಪತ್ರವನ್ನು ವಿತರಿಸಿ ಮಾತನಾಡಿದರು.

ಉತ್ಸಾಹದ ಚಿಲುಮೆಯಂತಿರುವ ಯುವ ಸಮೂಹ ಸಾಮಾಜಿಕ ಸೇವೆಗಳಲ್ಲಿ ಗುರುತಿಸಿಕೊಂಡು ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರಗಳಲ್ಲಿ ಜನರಿಗೆ ನೆರವಾಗಬೇಕು ಎಂದು ಕರೆ ನೀಡಿದರು.

ಬದುಕಿಗೆ ಉದ್ಯಮವನ್ನು ಮೆಚ್ಚಿಕೊಂಡಿರುವ ನಾನು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಜನರಿಗೆ ಕೈಲಾದಷ್ಟು ಸಹಾಯವನ್ನು ಮಾಡಬೇಕೆಂದು ರಾಜಕೀಯ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿದ್ದೇನೆ. ನನ್ನಂತಹ ಸಾಮಾನ್ಯ ವ್ಯಕ್ತಿಯ ಹುಟ್ಟುಹಬ್ಬವನ್ನು ಹಲವು ಯುವ ಸ್ನೇಹಿತರು ರಕ್ತದಾನ ಶಿಬಿರದ ಮೂಲಕ ವಿಶಿಷ್ಟವಾಗಿ ಆಚರಣೆ ಮಾಡಿದ್ದು, ಅವರೆಲ್ಲರ ಆತ್ಮೀಯತೆಗೆ ಧನ್ಯವಾದಗಳು. ಮುಂದೆಯೂ ಸಮಾಜಸೇವೆಗೆ ದುಡಿಯುವಂತಹ ಯುವಕರ ಜೊತೆಯಾಗಿ ನಾನು ಕೂಡ ಸೇವಾ ಭಾವನೆಯಿಂದ ಕೆಲಸವನ್ನು ಮಾಡುತ್ತೇನೆ ಎಂದು ಅವರು ತಿಳಿಸಿದರು.

ರಕ್ತದಾನ ಶಿಬಿರದಲ್ಲಿ 28 ಕ್ಕೂ ಯುವಕರು ರಕ್ತದಾನ ಮಾಡಿದರು. ಕೇತುಪುರ ಗ್ರಾಮದಲ್ಲಿ ಚೆಲುವರಾಜು ಅಭಿಮಾನಿಗಳು ರಕ್ತದಾನ ಶಿಬಿರವನ್ನು ಆಯೋಜಿಸಿದ್ದಕ್ಕೆ ಮೈಮುಲ್ ಮಾಜಿ ನಿರ್ದೇಶಕ ಪ್ರಭಾಕರ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಮೈಮುಲ್ ಹಾಲಿ ನಿರ್ದೇಶಕ ಕೆ.ಜಿ.ಮಹೇಶ್, ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಗ್ರಾ.ಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಕುಳ್ಳನ ಕೊಪ್ಪಲು ಪುಟ್ಟಸ್ವಾಮಿ, ಕಪಾಲಿ ಮಂಜು, ಕೃಷ್ಣಮೂರ್ತಿ ಹಾಗೂ ಚೆಲುವರಾಜು ಅಭಿಮಾನಿ ಬಳಗದ ಯುವಕರು ಹಾಜರಿದ್ದರು.


ವಿಧಾನ ಪರಿಷತ್ ಸದಸ್ಯರಾದ
ಸಿ.ಎನ್. ಮಂಜೇಗೌಡ
ಅವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
ಶುಭಕೋರುವವರು : ಪೈ ದಿನೇಶ್ ಗೌಡ.ಸಿ ಜೆ.ಡಿ.ಎಸ್. ಯುವ ಮುಖಂಡರು


ವಿಧಾನ ಪರಿಷತ್ ಸದಸ್ಯರಾದ
ಸಿ.ಎನ್. ಮಂಜೇಗೌಡ
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು